(MR. SPEAKER)

replies in time. I agree with the Chief Minister that he is taking proper steps in this direction but I would also request him that in case replies are not received within 15 days, he should take drastic action against officers in default, unless of course it involves a question of giving too much detail.

Sri B. D. JATTI.—I entirely agree.

---

## PAPERS LAID ON THE TABLE.

Sri B. D. JATTI (Chief Minister).—I beg to lay on the Table the Suppression of Immoral Traffic in Women and Girls (Mysore) Rules, 1958 issued under Section 28 of the Suppression of Immoral Traffic in Women and Girls Act, 1958 (Central Act No. 104 of 1956).

---

## MYSORE LAND REFORMS BILL, 1958.

*Motion to consider* (contd.)

ಅಧ್ಯಕ್ಷರು.—ಶ್ರೀ ಕೆಂಚಪ್ಪನವರು ಮಾತನಾಡುವುದಕ್ಕೆ ಮುಂಚೆ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ನಾವು ಈಗಾಗಲೇ ಭೂ ಸುಧಾರಣೆಯ ಮೇಲೆ ಎರಡು ದಿವಸ ಸಂಪೂರ್ಣವಾಗಿ ಚರ್ಚೆಮಾಡಿದ್ದೇವೆ. ಇದು ಮೂರನೆಯ ದಿವಸ. ಆದರೂ ಸಹ ಇಬ್ಬರು ಸದಸ್ಯರು ಮಾತ್ರ ಮಾತನಾಡಿದ್ದಾರೆ. ಈ ಪ್ರಕಾರ ಆದರೆ ನಾಲ್ಕೈದು ದಿವಸ ಆದಮೇಲೆ ಆರನೆಯ ದಿವಸ ನಾನು ಮಾತನಾಡುತ್ತೇನೆ, ನಾನು ಮಾತನಾಡುತ್ತೇನೆ ಎಂದು ಎಲ್ಲರೂ ಎದ್ದು ನಿಲ್ಲುತ್ತಾರೆ. ಅದು ಗೊಂದಲಕ್ಕೆ ಹಿಡಿದು ಹೋಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡುವುದು ಸ್ವಲ್ಪ ಕಾಲದಲ್ಲಿ ಮುಗಿಸಿ ಎಂದು. ಇಂಟರ್ ನ್ಯಾಷನಲ್ ಪ್ರಾಬ್ಲಮ್‌ಗಳನ್ನು 40 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತಾರೆ. ಯಾವತ್ತೂ ಒಂದೂವರೆ ಗಂಟೆಯ ಕಾಲ ತೆಗೆದುಕೊಂಡರೆ ಹೇಗೆ? ಸ್ವಲ್ಪದ್ದರಲ್ಲಿ ಹೇಳುವುದಕ್ಕೆ ಬರುತ್ತದೆ. ಅದನ್ನು ಕಲಿಯಬೇಕು. ವೆಸ್ಟರ್ನ್ ಡೆಮೊಕ್ರಸಿಯಿಂದ ಕಲಿಯುವುದು ಏನೆಂದರೆ ಸ್ವಲ್ಪ ಮಾತನಾಡುವುದು. ರಿಪೀಟ್ ಮಾಡದೆ ಮಾತನಾಡುವುದು, ಇದನ್ನು ಕಲಿಯುವ ಅವಶ್ಯಕವಿದೆ. ನಾನು ಜನರಲ್ಲಾಗಿ ರಿಕ್ವೆಸ್ಟ್ ಮಾಡುವುದು ಏನೆಂದರೆ ತೀವ್ರವಾಗಿ ಮುಗಿಸಿ ಎಂದು. ಪ್ರತಿಯೊಬ್ಬರೂ 15-20 ನಿಮಿಷಗಳಲ್ಲಿ ಮಾತನಾಡಿ ಮುಗಿಸಿದರೆ ಒಳ್ಳೆಯದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅವರು ತಿಳಿದುಕೊಳ್ಳಬೇಡವೇ?

ಅಧ್ಯಕ್ಷರು.—ಸ್ವಲ್ಪ ಮಾತನಾಡಿದರೂ ಅವರು ತಿಳಿದುಕೊಳ್ಳುತ್ತಾರೆ. ಎಲ್ಲರೂ ತಿಳಿದುಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ 15 ನಿಮಿಷಗಳಿಂದ 20 ನಿಮಿಷಗಳತನಕ ಮಾತನಾಡಿ ಮುಗಿಸಿದರೆ ಒಳ್ಳೆಯದು.

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಭೂಸುಧಾರಣೆ ಎನ್ನತಕ್ಕದ್ದರಲ್ಲಿ ಭೂಮಿಯಲ್ಲಿ ಹೆಚ್ಚು ಉತ್ಪತ್ತಿಯನ್ನು ಮಾಡುವುದಕ್ಕೋಸ್ಕರ ಸುಧಾರಿಸುವುದೆ, ಅಥವಾ ವ್ಯವಸಾಯದ ವಿಧಾನವನ್ನು ಸುಧಾರಿಸಿ ಅದಕ್ಕಾಗಿ ಸರ್ಕಾರದವರು ವ್ಯವಸಾಯದ ಸಲಕರಣೆಗಳನ್ನು ಒದಗಿಸಿಕೊಟ್ಟು ಆ ಮೂಲಕ ದೇಶಕ್ಕೆ ಹೆಚ್ಚು ಆಹಾರವನ್ನು ಬೆಳೆಸುವುದೆ, ಅಥವಾ ರೈತರ ಆರ್ಥಿಕ ವ್ಯವಸ್ಥೆಯನ್ನು ಸುಧಾರಣೆಗೊಳಿಸಿ ಭೂಮಿಯನ್ನು ಹಂಚುವಾಗ ಯಾವ ರೀತಿ ಹಂಚಿದರೆ ಸರಿಹೋಗುತ್ತದೆ ಎನ್ನುವುದೇ, ಇವು ಯಾವುದಾದರೂ ಇದರಲ್ಲಿ ಅಡಕವಾಗಿವೆಯೆ ಎಂದು ನೋಡಿದರೆ, ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಏನೇನೂ ಹೇಳಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನನಗೆ ಅನೇಕ ಜನರು ಹೇಳಿದ್ದಾರೆ. "It is essentially associated with the conception of agrarian revolution" ಎಂದು. ಅಗ್ರೇರಿಯನ್ ರೆವಲ್ಯೂಷನ್ ಎಂದರೆ, ಜಮೀನಿನ ಉತ್ಪಾದನೆಯನ್ನು ಯಾವ ರೀತಿ ಹೆಚ್ಚು ಮಾಡಬೇಕು ಎನ್ನುವುದು ಉದ್ಭವಿಸುತ್ತದೆ ಭೂಮಿಯನ್ನು ಯಾವರೀತಿ ಹಂಚಬೇಕು ಎನ್ನುವ ಪ್ರಶ್ನೆ ಉದ್ಭವಿಸಬಹುದು. ಗೇಣಿ ಕಾಯಿದೆಯನ್ನು ಸುಧಾರಿಸುವುದಕ್ಕೆ ನೇಮಕವಾದ ಸಮಿತಿಯ ರಿಪೋರ್ಟಿನಲ್ಲಿ ಇದನ್ನೆಲ್ಲಾ ಅಳವಡಿಸಿದ್ದಾರೆ. ಹಿಂದೆ ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಆಫ್ ಆಬ್‌ಜೆಕ್ಟ್ ಅಂಡ್ ರೀಜನ್ಸ್‌ನಲ್ಲಿ ಜಮೀನು ಹಿಡುವಳಿದಾರರು ಎಷ್ಟು ಜನಗಳು ಇದ್ದಾರೆ, ಜಮೀನು ಇಲ್ಲದವರಿಗೆ ಜಮೀನನ್ನು ಯಾವರೀತಿ ಹಂಚಬೇಕು ಎನ್ನುವುದನ್ನು ಹೇಳಿದ್ದಾರೆ. ಟೆನೆಂಟ್ಸ್ ಕಲ್ಟಿವೇಟ್ ಮಾಡತಕ್ಕದ್ದು 61·4 ಲಕ್ಷ ಎಕರೆ, ಸರ್‌ಪ್ಲಸ್ ಲ್ಯಾಂಡನ್ನು ಟೆನೆಂಟ್ ಅಲ್ಲದೆ ಇರುವವರಿಗೆ ಕೊಡುವುದು ಎರಡುಲಕ್ಷ, ಇದಕ್ಕೋಸ್ಕರ 30·8 ಕೋಟಿ ರೂಪಾಯಿಗಳ ಕಾಂಪೆನ್‌ಸೇಷನ್ ಕೊಡಬೇಕು ಎಂದು ಹೇಳಿದ್ದಾರೆ. ಆದರೆ ಈ ಭೂ ಸುಧಾರಣೆಯಲ್ಲಿ ನಾವು ಆಲೋಚನೆ ಮಾಡತಕ್ಕದ್ದು ಬಂಜರು ಜಮೀನು ಎಷ್ಟು ಇದೆ ಎನ್ನುವುದು. ನಮ್ಮ ಸಂಸ್ಥಾನದಲ್ಲಿ ಬಂಜರು ಜಮೀನು ಎಷ್ಟು ಇದೆ, ಜಮೀನು ಇಲ್ಲದೆ ಇದ್ದರೂ ಸಹ ಜಮೀನಿನಿಂದ ಜೀವನ ಮಾಡಬೇಕು ಎನ್ನುವ ಆಶೆಯಿಂದ ಜಮೀನನ್ನು ಹೊಂದಬೇಕು ಎನ್ನುವ ಜನಗಳ ಸಂಖ್ಯೆ ಎಷ್ಟು ಇದೆ, ಅದನ್ನು ಹೇಳದೆ ಹೋಗಿರುವುದರಿಂದ, ಯಾವರೀತಿ ಹಳ್ಳಿಗಾಡಿನ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸುವುದಕ್ಕೆ ಸಹಾಯವಾದೀತು ಎನ್ನತಕ್ಕ ವಿಚಾರವನ್ನು ನಾವು ಆಲೋಚನೆ ಮಾಡಬೇಕು. ಅದು ಎಲ್ಲೂ ಇಲ್ಲ. ಅದು ಇಲ್ಲದಿದ್ದರೂ ಸಹ ಯಾವುದಾದರೂ ಒಂದು ರೀತಿಯಾಗಿ ನಾವು ಈ ಪದ್ಧತಿಯನ್ನು ತಂದು ನಮ್ಮ ದೇಶದಲ್ಲಿ ಹಳ್ಳಿಯ ಜನರ ಆರ್ಥಿಕ ವ್ಯವಸ್ಥೆಯನ್ನು ಹೇಗೆ ಸುಧಾರಿಸುತ್ತೇವೆ ಮತ್ತು ಅದರಲ್ಲೂ ವ್ಯವಸಾಯದಿಂದ ಜೀವನ ಮಾಡಬೇಕು ಎನ್ನತಕ್ಕ ನಿರುದ್ಯೋಗಿಗಳು ಅಥವಾ ಜಮೀನು ಇಲ್ಲದೇ ಇರುವವರಿಗೆ ಯಾವ ರೀತಿ ಜಮೀನನ್ನು ಒದಗಿಸುವುದರ ಮೂಲಕ ಸಮಾಜವಾದಿ ತತ್ವವನ್ನು ನಾವು ಹೇಗೆ ಸಾಧನೆ ಮಾಡುತ್ತೇವೆ ಎನ್ನುವುದು ಇದರಲ್ಲಿ ಕಂಡುಬರುವುದಿಲ್ಲ.

ಇದರಲ್ಲಿ ಮುಖ್ಯವಾಗಿ ಕಂಡುಬಂದಿರುವುದು ಏನು ಎಂದರೆ ಜಪಾನಿನಲ್ಲಿ ಹೇಗೆ ರಿಫಾರಮ್ ಮಾಡಿದರು, ಬೊಂಬಾಯಿನಲ್ಲಿ ಹೇಗೆ ರಿಫಾರಮ್ ಆಯಿತು, ಸ್ವಿಡ್ಜರ್ಲೆಂಡಿನಲ್ಲಿ ಯಾವರೀತಿ ರಿಫಾರಮ್ ಮಾಡಿದರು, ಎಂದು ಹೇಳಿ ಆ ಪ್ರದೇಶದಲ್ಲಿರತಕ್ಕ ವ್ಯವಸ್ಥೆಯನ್ನು ನಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು ಎಂದೂ, ಅದರ ಮೇಲೆ ಜಪಾನಿನಲ್ಲಿರುವ ಕೆಲವು ಅಂಶಗಳನ್ನೂ, ಬೊಂಬಾಯಿನಲ್ಲಿರತಕ್ಕ ಕೆಲವು ಅಂಶಗಳನ್ನೂ ತೆಗೆದು ಕೊಂಡು ಬಂದು ಅದನ್ನು ಒಂದು ರೀತಿಯಾಗಿ ಈ ಬಿಲ್ಲಿನಲ್ಲಿ ಅಳವಡಿಸಿ ಇಲ್ಲಿ ತಂದಿಟ್ಟಹಾಗೆ ಕಾಣುತ್ತದೆ. ಸೀಲಿಂಗ್‌ವಿಚಾರದಲ್ಲಿ ಸೆಂಟ್ರಲ್ ಪ್ಲಾನಿಂಗ್‌ಕಮಿಷನ್ ರಿಪೋರ್ಟ್ ಈ ಸರ್ಕಾರದ ಹೆಚ್ಚಿನ ಗಮನವನ್ನು ಸೆಳೆದು ಅದರಂತೆ ಇಲ್ಲಿ ಮಾಡಿದರೆ ಒಳ್ಳೆಯದು ಎನ್ನುವ ವಿಚಾರವನ್ನು ಇದರಲ್ಲಿ ಇಟ್ಟಿರುವ ಹಾಗೆ ಕಾಣುತ್ತದೆ. ಜಪಾನಿನಲ್ಲಿ, ತಮ್ಮ ರಿಪೋರ್ಟ್ ಪ್ರಕಾರ, 8.0 ಪರ್ಸೆಂಟ್ ಜಮೀನನ್ನು ಟೆನೆಂಟ್ಸ್ ಕಲ್ಟಿವೇಟ್ ಮಾಡುತ್ತಿದ್ದಾರೆ. ಅಲ್ಲಿ 92 ಪರ್ಸೆಂಟ್ ಓನರ್ ಕಲ್ಟಿವೇಟರ್ಸ್, 2·45 ರಷ್ಟು ಅಬ್ಸೆಂಟೀ ಲ್ಯಾಂಡ್ ಲಾರ್ಡ್ಸ್ ಇದ್ದಾರೆ. ಯಾರು ಜಮೀನು ತೆಗೆದು ಕೊಳ್ಳುತ್ತಾರೋ ಯಾರು ಜಮೀನ್ದಾರರೋ ಅವರೇ ವ್ಯವಸಾಯ ಮಾಡುತ್ತಾರೆ ಎನ್ನುವುದನ್ನು ಇಟ್ಟು ಬಿಟ್ಟು ಹಾಗೆಯೇ ಇಲ್ಲೂ ಸಹ ಅದೇ ಒಂದು ವಿಧಾನವನ್ನು ಹಾಕಿರುವ ಹಾಗೆ ಕಾಣುತ್ತದೆ. ಭೂಮಿಯ ಲೆಖ್ಖಾಚಾರವನ್ನು ತೆಗೆದುಕೊಂಡರೆ $\frac{1}{3}$ ಭಾಗ ಎಕನಾಮಿಕ್ ಹೋಲ್ಡಿಂಗ್ ಎಂದರೆ ಬೇಸಿಕ್ ಹೋಲ್ಡಿಂಗ್ ಎಂದು ಹೇಳಿ ಅಲ್ಲಷ್ಟು ಇಲ್ಲಷ್ಟು ತೆಗೆದು ಕೊಂಡು ಮಾಡಿರುವ ಹಾಗೆ ಭಾಸವಾಗುತ್ತದೆ. ನಮ್ಮ ಕಂಡೀಷನ್ಸ್ ಮತ್ತು ನಮ್ಮಲ್ಲಿ ಸುತ್ತಮುತ್ತ ವ್ಯವಸಾಯಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಯಾವ ರೀತಿ ವ್ಯವಸ್ಥೆಯಾಗಬೇಕು ಎಂಬುದನ್ನು ಹೇಳಲಿಲ್ಲ, ಸುಮ್ಮನೆ ಅಲ್ಲಿ ಇಲ್ಲಿ ಇದ್ದದ್ದನ್ನು ಆರಿಸಿಕೊಂಡು ಈ ರೀತಿ ಮಾಡಿರುವುದರಿಂದ ನಾವು ಯಾವ ರೀತಿ ಸುಧಾರಿಸುತ್ತೇವೆ ಎನ್ನತಕ್ಕ ವಿಚಾರವನ್ನು ಇಲ್ಲಿ ಹೇಳ ಲಿಲ್ಲ. ಹೀಗೆ ಮಾಡುವಾಗ ಅಗ್ರೇರಿಯನ್ ರಿಫಾರಮ್, ಎಂದರೆ ಜಮೀನಿನಲ್ಲಿ ಹೆಚ್ಚಿಗೆ ಬೆಳೆ ಬೆಳೆಯುವಂತೆ ಮಾಡುವುದು ಮತ್ತು ಹಳ್ಳಿಗಾಡಿನ ಆರ್ಥಿಕ ವ್ಯವಸ್ಥೆ ಯನ್ನು ಸುಧಾರಿಸುವುದು ಎಂದರೆ, ನಿರುದ್ಯೋಗಿ ಗಳಿಗೇ ಇರತಕ್ಕ ಜಮೀನನ್ನು ಹಂಚುವುದು, ಈ ವಿಚಾರದಲ್ಲಿ ಅಷ್ಟಾಗಿ ಹೆಚ್ಚಿಗೆ ಗಮನ ಕೊಡಲಿಲ್ಲ. ನೀವು ಯಾವ ಒಂದು ಗುರಿಯನ್ನು ಸಾಧಿಸುವುದಕ್ಕೆ ಹೊರಟಿದ್ದೀರೋ ಆ ಗುರಿಯನ್ನು ಸಾಧಿಸುವ ಮಾರ್ಗ ಇದರಲ್ಲಿ ಅಷ್ಟಾಗಿ ಹೆಚ್ಚಿಗೆ ಕಾಣುತ್ತಾ ಇಲ್ಲ. ಶಿವಮೊಗ್ಗ ಮುಟ್ಟಬೇಕು ಎಂದು ಹೇಳಿ ತೆಗೆದುಕೊಂಡು ಹೋಗಿ ಸಂತೆಬೆನ್ನೂರಿನಲ್ಲಿ ನಿಲ್ಲಿಸಿಬಿಟ್ಟು ಮುಂದೆ ಕಾಡುಪಾಲು ಮಾಡುವಹಾಗೆ ಕಾಣುತ್ತದೆ. ಯಾವ ಸೆಕ್ಷನ್ ಅನ್ನು ತೆಗೆದು ನೋಡಿದರೂ ಸಹ ನೀವು ಏನು ಮಾಡಬೇಕೆಂದಿದ್ದೀರಿ ಎನ್ನುವುದು ಕಂಡುಬರುತ್ತಾ ಇಲ್ಲ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲೂ ಸಹ ಅದು ಕಂಡುಬರುವುದಿಲ್ಲ. ಬಂಜರು ಜಮೀನನ್ನು ಯಾವರೀತಿ ಹಂಚಿ ಆರ್ಥಿಕ ವ್ಯವಸ್ಥೆಯನ್ನು ಯಾವ ರೀತಿ ಸುಧಾರಿಸ ತ್ತೀರಿ ಎನ್ನು ವುದನ್ನು ಎಳ್ಳಷ್ಟೂ ಇದರಲ್ಲಿ ಹೇಳಲಿಲ್ಲ.

ಈಗ ಇರತಕ್ಕ ಭೂಮಿಯಲ್ಲಿ ಹಂಚತಕ್ಕದ್ದು ಬಹಳ ಕೊಂಚವಿದೆ. ಎಷ್ಟು ಜನಗಳಿಗೆ ಜಮೀನು ಇದೆ, ಎಷ್ಟು ಜನಗಳಿಗೆ ಜಮೀನು ಇಲ್ಲ, ಜಮೀನು ಇಲ್ಲದೇ ಇರುವವರು ಜಮೀನು ಪಡೆದಿರುವವರಿಂದ ತೆಗೆದುಕೊಂಡು ಅದರಿಂದಲೇ ಜೀವನ ಮಾಡಬೇಕೆಂದು ಹೇಳುವವರು ಎಷ್ಟು ಜನರಿದ್ದಾರೆ ಎಂಬ ಬಗ್ಗೆ ಯಾವ ಒಂದು ಪದವೂ, ಅಂಕಿ ಅಂಶವೂ, ಈ ಕಾಯಿದೆಯಲ್ಲಿಲ್ಲ. ಅವರ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸುವುದಕ್ಕೇನಾದರೂ ಈ ಕಾನೂನನ್ನು ತಂದಿದ್ದೀರಾ ಎಂದು ನಾನು ಕೇಳುತ್ತೇನೆ. ಇದು ಅಷ್ಟು ಸಮರ್ಪಕವಾಗಿಲ್ಲ. ಆ ದೃಷ್ಟಿಯಿಂದ ಇದನ್ನು ಸಮರ್ಪಕಗೊಳಿಸಬೇಕೆಂದು ಇದ್ದೀರಿ ಎಂದು ಕಾಣು ತ್ತದೆ. ರೈತರ ಆರ್ಥಿಕ ವ್ಯವಸ್ಥೆ ತಮ್ಮ ಗಮನದಲ್ಲಿ ದ್ದರೆ ಅದನ್ನು ಕೂಡಲೆ ಸರಿಪಡಿಸಬೇಕೆಂದು ನಾನು ಹೇಳುತ್ತೇನೆ. ಮೊದಲು ನಿರುದ್ಯೋಗ ಸಮಸ್ಯೆ ಯನ್ನು ಟ್ಯಾಕಲ್ ಮಾಡಿ. ಅದರ ವಿಷಯದಲ್ಲಿ ಸಾಕಾ ದಷ್ಟು ಗಮನ ಕೊಡಬೇಕು. ಅದೊಂದು ಪ್ರಶ್ನೆಯನ್ನು ಬಗೆಹರಿಸಿದ ನಂತರ ಜಮೀನ ಹಿಡುವಳಿಯ ಪ್ರಶ್ನೆ ಯನ್ನು ನಿವಾರಣೆ ಮಾಡುವುದುಅವಶ್ಯಕವಾಗಿದೆ. ನಿರುದ್ಯೋಗದ ಸಮಸ್ಯೆ ಬಹಳ ಜಟಿಲವಾದ ಪ್ರಶ್ನೆ. ಜಮೀನು ಹಿಡುವಳಿಯ ಪ್ರಶ್ನೆಯೂ ಅಷ್ಟೇ. ಇದರ ಮೇಲೆ ಯಾವರೀತಿ ಅಗ್ರೇರಿಯನ್ ರಿಫಾರ್ಮ್ಸ್ ವಿಷಯ ತೆಗೆದುಕೊಳ್ಳುತ್ತೀರೆನ್ನುವುದು ನನಗೆ ಗೊತ್ತಾಗಲಿಲ್ಲ. ನೀವು ಜಮೀನನ್ನು ಅಲ್ಪಸ್ವಲ್ಪ ಕೊಡುವುದರ ಮೂಲಕ ಪ್ರತಿಯೊಬ್ಬನಿಗೂ ಸ್ವಲ್ಪ ಜಮೀನು ಬರುತ್ತದೆ. ಹೆಚ್ಚು ಜಮೀನು ಪಡೆಯು ವವರು ಹೆಚ್ಚಿನ ಗಮನ ತೆಗೆದುಕೊಂಡು, ಶ್ರಮ ತೆಗೆದುಕೊಂಡು ಹೆಚ್ಚು ಗೊಬ್ಬರಹಾಕಿ ವ್ಯವಸಾಯ ಮಾಡುವಷ್ಟುಮಟ್ಟಿಗೆ ವ್ಯವಸ್ಥೆ ಮಾಡಬೇಕೆಂದೂ, ಅದರ ಜೊತೆಗೆ ದೇಶದ ಉತ್ಪನ್ನವನ್ನೂ ಸಹ ಹೆಚ್ಚು ಮಾಡಬೇಕೆಂದೂ ತಾವು ಹೊರಟಿದ್ದೀರಿ. ಅತ್ಯಧಿಕ ಜಮೀನು ಇರುವವರಿಗೂ ಇದು ಈಗ ಸಾಧ್ಯವಾಗಿಲ್ಲದೆ ಇದೆ. ಇದು ಜಟಿಲವಾದ ಪ್ರಶ್ನೆ. ಸಾಧಾರಣವಾದ ಪ್ರಶ್ನೆಯಲ್ಲ. ಯಾರು ಜಮೀನಿಗೋಸ್ಕರ ತನ್ನ ದುಡ್ಡನ್ನು ಇಟ್ಟು ವ್ಯವಸಾಯ ಮಾಡುತ್ತಾನೋ ಅವನಿಗೆ ತನ್ನ ಜಮೀನಿನಮೇಲೆ ಇರುವಷ್ಟು ಕುತೂಹಲ, ಜಮೀನಿನಿಂದ ಬೆಳೆ ಸ್ವಲ್ಪವೇ ಆಗಲಿ, ಹೆಚ್ಚಾಗಿಯೇ ಆಗಲಿ, ಬೇರೆಯವರಿಗೆ ಇರುವುದಿಲ್ಲವೆಂದು ಹೇಳ ಬಹುದು. ಜಮೀನನ್ನು ಹಂಚುವ ಮೂಲಕ ವ್ಯವಸಾ ಯೋತ್ಪನ್ನವನ್ನು ಹೆಚ್ಚಿಗೆ ಮಾಡುತ್ತೇವೆ ಎನ್ನುವ ಬಗ್ಗೆ ಸರ್ಕಾರದವರು ಎಷ್ಟರಮಟ್ಟಿಗೆ ಗಮನವನ್ನು ತೆಗೆದು ಕೊಂಡಿದ್ದಾರೆ ಎನ್ನತಕ್ಕದ್ದು ಇದರಲ್ಲಿಲ್ಲ. ಬರೀ ಕೆಲವು ಮಾಹಿತಿಯನ್ನು ಮಾತ್ರ ಇಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಕೆಲವಾರು ಅಂಕಿ ಅಂಶಗಳು ಕುಂಟು, ತಪ್ಪು, ಸುಳ್ಳು. ಅದು ರುಜುವಾತು ಆಗಿದೆ. ಅದರ ಮೂಲಕ ಜಮೀನು ಇಲ್ಲದವರು ಇಷ್ಟು ಜನರೇ ಇದ್ದಾರೆ, ಜಮೀನು ಇರುವವರು ಇಷ್ಟೇ ಜನರು ಇದ್ದಾರೆ ಇಷ್ಟೇ ಜಮೀನು ಇದೆ, ರಾಗಿ ಬೆಳೆ, ಅಕ್ಕಿ ಬೆಳೆ, ಜೋಳದ ಬೆಳೆ ಇಷ್ಟೇ ಆಗಿದೆ, ಅದರ ಬೆಲೆ ಇಷ್ಟೇ ಎಂದು ಹೇಳುವುದು ಕಷ್ಟ. ಹಾಗೆ ಹೇಳು ವುದು ಸರಿಯೂ ಅಲ್ಲ.

ಅಧ್ಯಕ್ಷರು.—ತಮ್ಮ ಭಾಷಣವನ್ನು ಜಾಗ್ರತೆ ಮುಗಿಸಬೇಕು. ಇನ್ನೂ ಮಾತನಾಡುವವರು ಅನೇಕ ರಿದ್ದಾರೆ.

ಶ್ರೀ ಕೆ. ಕೆಂಚಪ್ಪ.—ಇನ್ನು ಜಮೀನು ಸುಧಾ ರಣೆಯ ವಿಚಾರ. ಈ ಬಗ್ಗೆ ಬಹಳ ಕಾಲ ಮಾತ ನಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಈ ಸಭೆಯಲ್ಲಿ ಎಲ್ಲ ಸದಸ್ಯರುಗಳ ಸಲಹೆಗಳನ್ನೆಲ್ಲಾ ಒಟ್ಟು ಗೂಡಿಸಿ ಸೆಲೆಕ್ಟ್ ಕಮಿಟಿಯಲ್ಲಿ ಚರ್ಚೆ ಮಾಡಬೇಕಾಗಿರು ವುದರಿಂದಲೇ ಸರ್ಕಾರದವರು ಈ ಕಾಯಿದೆಯನ್ನು ಇಲ್ಲಿ ಚರ್ಚೆಮಾಡಲು ಎಂಟು ಹತ್ತು ದಿವಸಗಳನ್ನು ಕೊಟ್ಟಿದ್ದಾರೆ. ಸಾಧ್ಯವಾದಷ್ಟು ಸಲಹೆಗಳನ್ನು

(ಶ್ರೀ ಕೆ. ಕೆಂಚಪ್ಪ)

ನಮ್ಮಿಂದ ಸರ್ಕಾರ ಪಡೆಯಬೇಕಾಗಿದೆ. ನಾವು ಒಂದು ತತ್ವಕ್ಕೆ ಆ ವಿಷಯದಲ್ಲಿ ಗಂಟುಬಿದ್ದಿರತಕ್ಕವರಾಗಿರುವಾಗ ಅದನ್ನು ಸರಿಪಡಿಸಬೇಕೆಂಬ ಆಕಾಂಕ್ಷೆ ನಮಗೆ ಇದ್ದೇ ಇದೆ. ಅದಕ್ಕಾಗಿ ನಾವು ತಕ್ಕ ಸಲಹೆಗಳನ್ನು ಈ ಕಾನೂನಿನ ಬಗ್ಗೆ ಕೊಡದೇ ಇದ್ದರೆ ನಮ್ಮ ಕರ್ತವ್ಯದಲ್ಲಿ ನಾವೇ ಲೋಪ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಮಗೆ ನಿನ್ನೆ ಬೇರೆ ಕಾಲಾವಕಾಶ ಸಿಕ್ಕಿತ್ತು. ಈ ದಿನ ಬೇರೆ ಅವಕಾಶ ಸಿಕ್ಕಿದೆ. ಇನ್ನೂ ಅನೇಕರು ಮಾತನಾಡುವವರು ಇದ್ದಾರೆ. ಅವರಿಗೂ ಕಾಲಾವಕಾಶ ಬೇಕು.

ಶ್ರೀ ಕೆ. ಕೆಂಚಪ್ಪ.—ಅದಕ್ಕೇನು, ಇನ್ನೆರಡು ದಿವಸಗಳು ಹೆಚ್ಚಿಗೆ ಈ ಮಸೂದೆಯನ್ನು ಚರ್ಚೆಮಾಡಲು ಅವಕಾಶ ಕೊಟ್ಟರಾಯಿತು. ಏನೂ ಪರವಾಯಿಲ್ಲ.

ಅಧ್ಯಕ್ಷರು.—ತಾವು ಇಚ್ಛೆಪಟ್ಟರೆ, ನನ್ನ ಅಭ್ಯಂತರ ವೇನೂ ಇಲ್ಲ.

ಶ್ರೀ ಕೆ. ಕೆಂಚಪ್ಪ.—ತಾವು ಒಂದು ತತ್ವದ ದೃಷ್ಟಿಯಿಂದ ಈ ಬಗ್ಗೆ ಆಲೋಚನೆ ಮಾಡುವುದು ಸೂಕ್ತವಿದೆ. ಅಗ್ರಿಕಲ್‌ಚರಲ್ ರಿಫಾರಮ್ಸ್ ಬಗ್ಗೆ ಹಿಂದೆ ಎಕ್ಸ್‌ಪರ್ಟ್ಸ್ ಆಗಿದ್ದವರು ಯಾವ ಯಾವ ಸಲಹೆಗಳನ್ನು ಕೊಟ್ಟಿದ್ದಾರೋ ಅವನ್ನು ಸರ್ಕಾರದವರು ಏಕೆ ಗಮನಕ್ಕೆ ತೆಗೆದುಕೊಂಡಿಲ್ಲವೋ ಗೊತ್ತಿಲ್ಲ. ರಾಯಲ್ ಕಮಿಷನ್ನಿನವರು ಯಾವರೀತಿ ಹಿಂದೂಸ್ಥಾನದಲ್ಲಿ ಅಗ್ರಿಕಲ್‌ಚರಲ್ ರಿಫಾರಮ್ಸ್ ಆಗಬೇಕು ಎಂಬುದನ್ನು ಅವರು ಮಾಡಿರುವ ವರದಿಯಲ್ಲಿ ವಿಶದವಾಗಿ ತಿಳಿಸಿದ್ದಾರೆ. ಇವರು ಅವನ್ನೆಲ್ಲಾ ತೆಗೆದುಕೊಳ್ಳದೆ ಯಾವುದೋ 35 ವರ್ಷಗಳ ಹಿಂದೆ ನಡೆದಿರತಕ್ಕ ಚರಿತ್ರಾಂಶಗಳನ್ನೂ, ಬೊಂಬಾಯಿ, ಹೈದರಾಬಾದ್ ಪ್ರದೇಶಗಳಲ್ಲಿರತಕ್ಕ ಕಾಯಿದೆಗಳನ್ನೂ ತೆಗೆದುಕೊಂಡಿದ್ದಾರೆ. ಇದರಿಂದ ಏನು ಪ್ರಯೋಜನ? ರಾಯಲ್ ಕಮಿಷನ್ನಿನವರೇ ಒಂದು ವರದಿಯನ್ನು ಕಳುಹಿಸಿದ್ದಾರೆ. ಅಲ್ಲದೆ ಹಿಂದೂಸ್ಥಾನದಲ್ಲಿರತಕ್ಕ ವ್ಯವಸಾಯವನ್ನು ಈ ರೀತಿ ಸರಿಪಡಿಸಿ ಎಂದು ಹೇಳಿದ್ದಾರೆ. ಅವರ ವರದಿಯ ವಿಷಯವಾಗಿ ಈ ಮಸೂದೆಯಲ್ಲಿ ಒಂದು ಅಕ್ಷರವೂ ಇಲ್ಲ. ಆದ್ದರಿಂದ ಇದೇನು ಕಾಯಿದೆ ಎಂದು ನನಗೆ ಆಶ್ಚರ್ಯವಾಗುತ್ತದೆ. ಆದ್ದರಿಂದ ನಾನು ಇದನ್ನು ಹೇಳುತ್ತಾ 13ನೆಯ ಪುಟದಲ್ಲಿರುವ ಐದನೆಯ ಕ್ಲಾಜನ್ನು ಇಲ್ಲಿಯೇ ಸ್ವಲ್ಪ ಓದಿ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಏಕೆಂದರೆ ತಮ್ಮ ಉದ್ದೇಶ ಜಾಗ್ರತೆಯಾಗಿ ಇದನ್ನು ಜಾರಿಗೆ ತಂದು ನಮ್ಮ ಉದ್ದೇಶ ಸಾಧನೆಯ ಪ್ರಯತ್ನ ಜಾಗ್ರತೆಯಾಗಬೇಕೆಂಬುದು. ಎಲ್ಲಕಿಂತಲೂ ಮುಖ್ಯವಾಗಿ ಈ ಬಗ್ಗೆ ದೇಶದ ಆರೋಪಣೆ ಇದೆ. ನಮ್ಮ ಆರೋಪಣೆ ಬಹಳವಾಗಿಲ್ಲದಿದ್ದರೂ ರೈತರ ಮತ್ತು ಜಮೀನ್ದಾರರ ಆರೋಪಣೆ ಅಷ್ಟಾಗಿ ಇಲ್ಲದಿದ್ದರೆ ಸಾಕು. ಇದಕ್ಕಾಗಿ ಎಷ್ಟೋ ಜನ ಜಮೀನ್ದಾರರು ತಮ್ಮ ಟೆನೆಂಟುಗಳನ್ನು ಓಡಿಸಿ ತಮಗೆ ಬೇಕಾದವರಿಗೆ ವ್ಯವಸಾಯದ ಭೂಮಿಯನ್ನು ಸಾಗುವಳಿಗೆ ಕೊಟ್ಟಿದ್ದಾರೆ. ಅದು ತಮ್ಮ ಉದ್ದೇಶ ಸಾಧನೆಯಲ್ಲವೆಂದು ನಾನು ಹೇಳುತ್ತೇನೆ. ನಿಮ್ಮ ಉದ್ದೇಶ ಸಾಧನೆಗೋಸ್ಕರ, ಸಫಲತೆಗೋಸ್ಕರ ಐದನೆಯ ಕ್ಲಾಜಿನಲ್ಲಿ ಏನು ಹೇಳಿದ್ದೀರಿ ಎಂಬುದನ್ನು ಸ್ವಲ್ಪ ಗಮನಿಸಿ. ಅದು ಈ ರೀತಿ ಇದೆ:

"(1) In each local area specified and delimited under Section (4), the lands other than lands under plantation crops shall be classified as:

(a) Jirayat or khushki or dry land,

(b) Tari or rice land,

(c) bagayat or garden land, etc."

ಇನ್ನು ಮುಂದೆ ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟನ್ನು ಆಕ್ಯುಯರಲ್ಲಾಗಿ ಕ್ಲಾಸಿಫಿಕೇಷನ್ ಮಾಡಬೇಕು. ದೇಶದಲ್ಲಿರತಕ್ಕ ಸಾಯಿಲ್ಲನ್ನೆಲ್ಲಾ ಕ್ಲಾಸಿಫೈ ಮಾಡಿ ಅದರ ಅನುಕೂಲವನ್ನೆಲ್ಲಾ ಈ ಕಾನೂನಿನಲ್ಲಿ ಅಡಕ ಮಾಡುವುದು ಹೇಗೆ ಎಂಬುದೆಲ್ಲಾ ಇದೆ. ಅದನ್ನು ಮುಂದೆ ಜಾರಿಗೆ ಕೊಡಬೇಕಾಗಿದೆ. ಕಮಿಷನ್ನಿನವರು ಅದರ ಬೆಲೆ ಕೊಟ್ಟರೆ ಸಾಯಿಲ್ಲನ್ನೆಲ್ಲಾ ಸರ್ವೆ ಸೆಟಲ್‌ಮೆಂಟ್ ಮಾಡುವುದನ್ನು ಯಾವ ಆಧಾರದಿಂದ ಮಾಡುತ್ತೀರಿ? ಇಡೀ ದೇಶದ ಪೂರ್ತ ಸರ್ವೆ ಸೆಟಲ್‌ಮೆಂಟ್ ಯಾವಾಗ ಆಗುತ್ತದೋ; ಇದೇನು, ನಮ್ಮ ಮುಮ್ಮಕ್ಕಳ ಕಾಲದಲ್ಲಿ ಆಗುಬಹುದೋ ಏನೋ! ನಮ್ಮ ಕಾಲದಲ್ಲೇನೋ ಆಗವುದಿಲ್ಲವೆಂದು ನಾನು ಹೇಳಬಹುದು. ಇದು ಸಾಧಾರಣ ಕೆಲಸವಲ್ಲ. ಜಾಗ್ರತೆ ಆಗುವುದಿಲ್ಲ. ಇದಕ್ಕೆ ಒಂದು ದೊಡ್ಡ ಸಿಬ್ಬಂದಿಯೇ ತಯಾರಾಗಬೇಕು. ಅದಕ್ಕೋಸ್ಕರ ಬಹಳ ದಿವಸಗಳೇ ಹಿಡಿಯುತ್ತವೆ.

9 A.M.

ಈಗ ಸರ್ವೆ ಮತ್ತು ಸೆಟ್ಲ್‌ಮೆಂಟ್ ಈಗಿರುವ ರೂಲ್ಸ್ ಮತ್ತು ಮ್ಯಾನ್ಯುಯಲ್ ಪ್ರಕಾರ ಆಗಿದೆ. ಇದರಲ್ಲಿರುವ ಡೈರೆಕ್ಟಿವ್ ಪ್ರಿನ್ಸಿಪಲ್ಸೇ ಬೇರೆ. ಫಸ್ಟ್, ಸೆಕೆಂಡ್ ಮತ್ತು ಥರ್ಡ್‌ಗ್ರೇಡ್ ಜಮೀನೆಂದು ಮೂರು ಬಾಗವೇನು ಮಾಡಿದೆಯೋ ಅದನ್ನು ಸಹ ಲ್ಯಾಂಡ್ ಕಮಿಷನ್ ಗಮನಿಸುವಂತೆ ಕಾಣಲಿಲ್ಲ. ಆದುದರಿಂದ ಸುಮ್ಮನೆ ಏನೋ ಒಂದು ರೀತಿ ವ್ಯವಸ್ಥೆ ಮಾಡಿರುವುದು ಎದ್ದು ಕಾಣುತ್ತದೆ. ಇದನ್ನು ತೀವ್ರವಾಗಿ ಆಲೋಚಿಸಬೇಕು. ಈ ಕಾನೂನಿನ ಅನೇಕ ಕ್ಲಾಜುಗಳಲ್ಲಿ ಲೋಪದೋಷ ತುಂಬಿದೆ. ಆತುರ ಆತುರವಾಗಿ ಈ ಮಸೂದೆಯನ್ನು ಮಾಡಿದ್ದಾರೆ. "By the end of 31st March" ಎಂದರೇನು? ಮಾರ್ಚಿ 31ರ ರಾತ್ರಿ 12 ಗಂಟೆಯೆಂದು ತಿಳಿಯಬೇಕೆ, ಹೇಗೆ? 31ನೇ ಮಾರ್ಚಿ 12 ಗಂಟೆಯೊಳಗೆ ಮಾಡಿದ ಕ್ಕೆ ಏನೂ ತೊಂದರೆಯಿಲ್ಲ. ಇಂಥ ಪದಗಳೆಲ್ಲಾ ಇವೆ. ಆತುರ ಆತುರವಾಗಿ ಮಸೂದೆ ಮಂಡಿಸಿ ಸೆಲೆಕ್ಟ್ ಕಮಿಟಿಗೆ ಕಳಿಸಿದ ಮೇಲೆ ಮಸೂದೆ ಯಾವ ಯಾವ ರೂಪತಾಳುತ್ತದೋ ಏನೋ ದೇವರಿಗೇ ಗೊತ್ತು. ದಯವಿಟ್ಟು ಇರುವ ಲೋಪದೋಷಗಳನ್ನು ಪರಿಶೀಲಿಸಬೇಕು. ಒಂದು ಜಮೀನನ್ನು ಜಮೀನುದಾರನಿಂದ ತೆಗೆದುಕೊಂಡರೆ ಎನ್‌ಕಂಬರೆನ್ಸ್ ಇಲ್ಲದಿರುವ ಹಾಗೆ ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ? ಈಗ ಮೂಗಿಗೆ ಮಸಿ ಬಳಿಯುವ ಕೆಲಸವಾಗಿದೆ. ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಸರಿಪಡಿಸುತ್ತೀರೆಂದು ನಂಬಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಎಂ. ರಾಮಪ್ಪ (ಹರಿಹರ).—ಮಾನ್ಯ ಅಧ್ಯಕ್ಷರೆ, ನಾನೀಗ ಈ ಮಸೂದೆಯ ಬಗ್ಗೆ ವಿರೋಧಪಕ್ಷದ ಸದಸ್ಯನಾಗಿ ಮಾತನಾಡುವುದಕ್ಕೆ ಮುಂಚೆ ಜತೆ,

ಸಮಿತಿಯ ಒಬ್ಬ ಸದಸ್ಯನಾಗಿ ಆ ದೃಷ್ಟಿಯಿಂದ ಮಾತ ನಾಡುತ್ತೇನೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ಮುಂಚೆ ನಾನು ಜತ್ತಿ ಸಮಿತಿ ವರದಿ ಚರ್ಚೆ ಯಾಗುವಾಗ ಮಾತನಾಡಲು ಅವಕಾಶ ಸಿಕ್ಕಲಿಲ್ಲ ಎಂಬ ವಿಷಯವನ್ನು ತಾವು ದಯವಿಟ್ಟು ಗಮನದ ಲ್ಲಿಟ್ಟು ನನಗೆ ಸ್ವಲ್ಪ ಕಾಲಾವಕಾಶವನ್ನು ಹೆಚ್ಚಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿರೋಧಪಕ್ಷದ ಮುಖಂಡರು ಮಾತನಾಡುವಾಗ ಜತ್ತಿ ಸಮಿತಿ ವರದಿ ಬಹಳ ಪ್ರೋಗ್ರೆಸಿವ್ ಆಗಿತ್ತು ಎಂದರೆ ಬಹಳ ಪ್ರಗತಿದಾಯಕವಾಗಿತ್ತು ಎಂದು ಹೇಳಿರುವ ಅಂಶವನ್ನು ನಾನು ಪುನಃ ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಜತ್ತಿ ಸಮಿತಿ ಸದಸ್ಯರ ಪರವಾಗಿ ಅವರಿಗೆ ವಂದಿಸಬೇಕಾದುದು ನನ್ನ ಕರ್ತವ್ಯ. ಅದಕ್ಕೆ ಕಾರಣ ಇಷ್ಟೆ. ಜತ್ತಿ ಸಮಿತಿ ವರದಿಯಲ್ಲಿ ಅಡಕವಾಗಿದ್ದ ಅಂಶಗಳಲ್ಲಿ ಅನೇಕ ಅಂಶ ಗಳು ಗೇಣಿದಾರರಿಗೆ ಅನುಕೂಲವಾಗಿದ್ದುವು. ಕೆಲವು ಸಂದರ್ಭಗಳಲ್ಲಿ ಇನ್ನೂ ನಮ್ಮ ಜನರು ಹೆಚ್ಚು ಕ್ರಾಂತಿ ಕಾರಕವಾದ ಬದಲಾವಣೆಗೆ ಸಿದ್ಧರಾಗಿಲ್ಲ. ಅದು ಭೂ ಮಾಲೀಕರಿಗೆ ಸ್ವಲ್ಪ ಅನುಕೂಲಮಾಡಿಕೊಡಬೇ ಕೆಂಬ ದೃಷ್ಟಿಯಿಂದ ಹಲವಾರು ಸೌಲಭ್ಯಗಳನ್ನು ಸಹ ಒಳಗೊಂಡಿತ್ತು, ಒಂದು ಪ್ರಗತಿದಾಯಕವಾದ ಸ್ವರೂ ಪವನ್ನು ತಾಳಿತ್ತು.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮಂತ್ರಿ ಗಳು).—ಯಾರ ದೃಷ್ಟಿಯಿಂದ ಪ್ರಗತಿದಾಯಕವಾ ಗಿತ್ತೆಂಬುದನ್ನು ಹೇಳಿ.

ಶ್ರೀ ಎಂ. ರಾಮಪ್ಪ.—ಅದು ಪ್ರಗತಿದಾಯಕವಾ ಗಿತ್ತು ಎಂದರೆ ಶ್ರೀಮಂತರಿಗೆ ಅನುಕೂಲಮಾಡಿ ಕೊಡುವ ಅಂಶವನ್ನೊಳಗೊಂಡಿತ್ತೆಂದು ಅರ್ಥವಲ್ಲ. ಬಡವರಿಗೆ, ದೀನದಲಿತರಿಗೆ, ದರಿದ್ರರಿಗೆ ಅನುಕೂಲ ವಾಗುವ ಹಾಗಿದ್ದರೆ ಪ್ರಗತಿದಾಯಕವೆಂದು ಹೇಳು ವರೇ ವಿನಾ ಭೂಮಾಲೀಕರಿಗೆ, ಅನುಕೂಲಸ್ಥರಿಗೆ ಅನುಕೂಲಮಾಡಿಕೊಡುವುದಾಗಿದ್ದರೆ ಪ್ರಗತಿದಾಯಕ ವೆಂದು ಯಾರೂ ಹೇಳುವುದಿಲ್ಲ. ಎಲ್ಲಾ ದೃಷ್ಟಿಯಿಂದ ಲೂ ಜತ್ತಿ ಸಮಿತಿ ವರದಿ ಪ್ರಗತಿದಾಯಕವಾಗಿತ್ತು, ಗೇಣಿದಾರರಿಗೆ ಹೆಚ್ಚು ಅನುಕೂಲವಾಗಿತ್ತು. ಈ ಮಸೂದೆಯಲ್ಲಿ ಆ ಸಮಿತಿಯ ಕೆಲವು ಸಲಹೆಗಳನ್ನು ಮಾತ್ರ ಅಡಕಮಾಡಿದ್ದೀರಿ. ಜತ್ತಿ ಸಮಿತಿ ವರದಿಯ ಕೆಲವು ಭಾಗಗಳನ್ನು ತಾವು ಒಪ್ಪಿಕೊಂಡಿಲ್ಲ. ಒಟ್ಟಿನಲ್ಲಿ ಒಂದೇ ಮಾತಿನಲ್ಲಿ ಹೇಳಬೇಕಾದರೆ ಒಂದು ಇಂಗ್ಲೀಷ್ ಗಾದೆ ಜ್ಞಾಪಕಕ್ಕೆ ಬರುತ್ತದೆ, "Heads I win and tails you lose" ಎಂಬುದು. ಭೂಮಾಲೀಕ ರಿಗೆ ಯಾವ ಯಾವ ಕಡೆ ಅನುಕೂಲವಾಗುತ್ತದೆಯೋ ಅಲ್ಲಿ As the devil quotes the scripture ಎಲ್ಲವನ್ನೂ ಕೋಟ್ ಮಾಡುತ್ತೀರಿ. ಭೂಮಾಲೀಕರಿಗೆ ಅನುಕೂಲವಾಗತಕ್ಕ ಅಂಶಗಳನ್ನು ಬೊಂಬಾಯಿ ಆಕ್ಟಿನಿಂದ, ಹೈದರಾಬಾದು ಆಕ್ಟಿನಿಂದ ತೆಗೆದು ಕೊಂಡಿದ್ದೀರಿ, ಜತ್ತಿ ಸಮಿತಿ ವರದಿಯಿಂದ, ದ್ವಿತೀಯ ಪಂಚವಾರ್ಷಿಕ ಯೋಜನೆಯಿಂದ, ಪ್ಲಾನಿಂ ಗ್ ಕಮಿಷನ್ ವರದಿಯಿಂದ, ಲ್ಯಾಂಡ್ ರಿಫಾರಮ್ಸ್‌ಗೆ ಸಂಬಂಧಪಟ್ಟ ಸೆಂಟ್ರಲ್ ಕಮಿಟಿಯ ಸಲಹೆಯಿಂದ ಅನುಕೂಲಕಂಡುದನ್ನು ತೆಗೆದುಕೊಂಡು ಒಟ್ಟಿನಲ್ಲಿ ಭೂಮಾಲೀಕರ ವಿಷಯವನ್ನು ಹೆಚ್ಚಾಗಿ ಯೋಚಿಸಲು ಹೊರಟಿದ್ದೀರಿ.

Sri Kadidal MANJAPPA.— I want specific points on which there is a departure so that I may be guided. Let him not create an impression that we have departed from the Jatti Committee Report. I am appealing to the Hon'ble Member to give me specific points. He is trying to create a wrong impression.

Sri M. RAMAPPA.—I am prepared to go into the details, I have got all the materials here. ಮಂತ್ರಿಗಳ ವಿಷಯದಲ್ಲಿ ನನಗೆ ಬಹಳ ಗೌರವವಿದೆ. ನಾನು ಅನೇಕ ಸಾರಿ ಈ ವಿಷಯ ಚರ್ಚೆಮಾಡಿದ್ದೇನೆ. ಏಕೆ ಅವರು ಶಾಂತಿ ಸಮಾಧಾನದಿಂದ ಕೇಳುವುದಕ್ಕೆ ತಯಾರಾಗಿಲ್ಲ? ಒಟ್ಟಿನಲ್ಲಿ ಎಲ್ಲೆಲ್ಲಿ ಯಾವ ಯಾವ ವಿಧವಾಗಿ ಭೂ ಮಾಲೀಕರಿಗೆ ಅನುಕೂಲವಾಗುತ್ತದೆ ಆಯಾಯ ಭಾಗವನ್ನು ತೆಗೆದುಕೊಂಡು ಭೂಮಾಲೀಕರಿಗೆ ಒಳ್ಳೆಯ ಪರಿಹಾರ ನೀಡುವುದಕ್ಕೆ, ಅನುಕೂಲಮಾಡಿಕೊಡುವು ದಕ್ಕೆ ತಾವು ಸರ್ವ ಪ್ರಯತ್ನ ಮಾಡಿದ್ದೀರೆಂಬುದನ್ನು ನಾನು ಕೆಲವು ಅಂಕಿ ಅಂಶಗಳ ಆಧಾರದಮೇಲೆ ಹೇಳುತ್ತೇನೆ. ಅದನ್ನು ಹೇಳುವದಕ್ಕೆ ಮುಂಚೆ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಸಹ ಕಾರಿ ವ್ಯವಸಾಯ ಪದ್ಧತಿಯ ವಿಚಾರದಲ್ಲಿ ಹೆಚ್ಚು ಭಿನ್ನಾಭಿಪ್ರಾಯವಿದೆ. ಇವತ್ತಿನ ದಿವಸ ದೇಶದಲ್ಲಿ ಈ ಬಗ್ಗೆ ಆಂದೋಲನ ಎದ್ದಿದೆ. ನಮಗೆ ಸ್ವಾತಂತ್ರ್ಯ ದೊರೆತ ಮೇಲೆ ದೇಶದಲ್ಲಿಯ ಅನೇಕ ಮುಖಂಡರು ಕಾಂಗ್ರೆಸ್ ಪಕ್ಷ ಬಿಟ್ಟು ಹೋಗಿದ್ದಾರೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾದುದು ಆವಶ್ಯಕ ವಾಗಿದೆ. ಭೂಸುಧಾರಣೆಯ ವಿಷಯದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಒಪ್ಪಿಕೊಂಡಿವೆ. ಆದರೆ ಕೆಲ ವಾರು ವ್ಯಕ್ತಿಗಳು ಮಾತ್ರ ಈ ಭೂಸುಧಾರಣೆಗೆ ವಿರೋಧಮಾಡಿ ಈಗ ಒಂದು ಹೊಸದಾಗಿ ಪಕ್ಷ ಕಟ್ಟಿ ದ್ದಾರೆ. ಯಾವ ಪ್ರಗತಿಪರವಾದ ಪಕ್ಷವೂ ಭೂ ಸುಧಾರಣೆಯನ್ನು ವಿರೋಧಮಾಡುತ್ತಿಲ್ಲ ಎನ್ನುವ ದನ್ನು ಗಮನದಲ್ಲಿಡುವುದು ಆವಶ್ಯಕ. ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳು ವಿರೋಧಮಾಡುತ್ತಿರಬಹುದು. ಇವರು ಕೇವಲ ವ್ಯಕ್ತಿಗಳು ಆ ದ್ವಾರೆಯೇ ಹೊರತು ಪಕ್ಷವಿರುವುದಿಲ್ಲ. ಆದುದರಿಂದ ಈ ಭೂಸುಧಾ ರಣೆಗೆ ವಿರೋಧಮಾಡುತ್ತಿರುವವರು ಯಾವ ಕಾರಣ ದಿಂದ ಹಾಗೆ ಮಾಡುತ್ತಿದ್ದಾರೆ ಎಂಬ ಅಂಶವನ್ನು ನಾವು ತಿಳಿದುಕೊಳ್ಳಬೇಕಾದುದು ಆವಶ್ಯಕ. ಇವತ್ತಿನ ದಿವಸ ಒಂದು ತತ್ವದ ದೃಷ್ಟಿಯಿಂದ ಈ ಭೂ ಸುಧಾ ರಣೆಯನ್ನು ತರುತ್ತಿದ್ದೇವೆ. ದೇಶಕ್ಕೆ ಅನುಕೂಲ ವಾಗುತ್ತದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಈ ಭೂ ಸುಧಾರಣೆಯನ್ನು ತರತಕ್ಕವರು ಕಾಂಗ್ರೆಸ್ ಸರಕಾರವಾದರೂ ಸಹ ಇದಕ್ಕೆ ಎಲ್ಲ ಪಕ್ಷಗಳ ಬೆಂಬಲ ವಿದೆ. ಹೀಗೆ ಇರುವುದರಿಂದ ಕಾಂಗ್ರೆಸ್ಸಿನವರು ಕೇವಲ ಓಟುಗಳಿಸಲು ಈ ಭೂ ಸುಧಾರಣೆಯನ್ನು ತರುತ್ತಿ ದ್ದಾರೆ ಎಂಬ ವಾದದಲ್ಲಿ ಯಾವ ಹುರುಳೂ ಇಲ್ಲ. ಇದಕ್ಕೆ ಒಂದು ಆರ್ಥಿಕ ಹಿನ್ನೆಲೆ ಇದೆ. ಈ ಸುಧಾರಣೆಯಲ್ಲಿ ನನಗೆ ನಂಬಿಕೆ ಇದೆ. ಈ ಭೂ ಸುಧಾರಣೆಯನ್ನು ವಿರೋಧಮಾಡತಕ್ಕಂಥಾದ್ದಕ್ಕೆ ಎರಡು ಕಾರಣಗ ಳಿವೆ. ಮೊದಲನೆಯ ಕಾರಣವೇನೆಂದರೆ ಈ ಭೂ ಸುಧಾ ರಣೆಯಿಂದ ಆಹಾರ ಉತ್ಪತ್ತಿ ಅಂದರೆ food production ಬಹಳ ಕಡಮೆಯಾಗುತ್ತದೆ. ಇದರಿಂದ ದೇಶದಲ್ಲಿ ಅನ್ನದ ಅಭಾವ ಜಾಸ್ತಿಯಾಗಬಹುದು ಎನ್ನುವುದು ಮೊದಲನೇ ಕಾರಣ. ಇನ್ನೊಂದು ಕಾರಣ ವೇನೆಂದರೆ ಬೇರೆ ಕ್ಷೇತ್ರಗಳಲ್ಲಿ ಸೀಲಿಂಗ್ ಎಂದರೆ ಪರ ಮಾವಧಿ ಮಿತಿಯನ್ನು ಹಾಕದೆ ಭೂಮಿಗೆ ಮಾತ್ರ ಏತಕ್ಕೆ ಹಾಕಬೇಕು? ಒಬ್ಬೊಬ್ಬರಿಗೆ ಒಂದೊಂದು

(SRI M. RAMAPPA)

ರೀತಿ discrimination ಮಾಡಿದಂತೆ ಆಗುವುದಿಲ್ಲವೇ ಎಂಬುದು ಒಂದು ವಾದ. ಈ ಎರಡು ಕಾರಣಗಳ ಮೂಲಕ ದೇಶದ ದೊಡ್ಡ ದೊಡ್ಡ ಮುಖಂಡರು ಈ ಭೂಸುಧಾರಣೆಯನ್ನು ವಿರೋಧ ಮಾಡುತ್ತಿದ್ದಾರೆ. ಮೊದಲನೆಯ ವಾದಕ್ಕೆ ಉತ್ತರ ಕೊಡಲು ನಾನು ಇಚ್ಛೆಪಡುತ್ತೇನೆ. ಭೂ ಸುಧಾರಣೆಯಿಂದ ಆಹಾರ ಉತ್ಪತ್ತಿ ಕಡಮೆಯಾಗುತ್ತದೆ ಎನ್ನುವ ವಿಷಯದ ಬಗ್ಗೆ ಹೇಳುವುದಾದರೆ, ಬೊಂಬಾಯಿ ಟೆನನ್ಸಿ ಆಕ್ಟು ಜಾರಿಯಾದ ಮೇಲೆ ಪ್ಲಾನಿಂಗ್ ಕಮಿಷನ್ ಅವರು ಗೋಖಲೇ ಇನ್‌ಸ್ಟಿಟ್ಯೂಟ ಆಫ್ ಪಾಲಿಟಿಕ್ಸ್ ಅಂಡ್ ಎಕನಾಮಿಕ್ಸ್ ಎಂಬ ಸಂಸ್ಥೆಯಿಂದ ಒಂದು ರಿಪೋರ್ಟನ್ನು ತಯಾರ ಮಾಡಿಸಿದ್ದಾರೆ ಅದರಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಸೈಂಟಿಫಿಕ್ ಆಗಿ ವಿವರವಿದೆ. ಭೂ ಸುಧಾರಣೆಗೆ ಬೆಂಬಲಕೊಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈರಿಪೋರ್ಟನ್ನುತಯಾರುಮಾಡಿಲ್ಲ, ಈ ರಿಪೋರ್ಟಿನಲ್ಲಿ ಹೇಳಿದ ಒಂದು ಅಂಶವನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಆಹಾರ ಉತ್ಪತ್ತಿ ಜಾಸ್ತಿಯಾಗಿದೆಯೇ ಇಲ್ಲವೇ ಎಂಬುದನ್ನು ಕಂಡು ಹಿಡಿಯುವದಕ್ಕೆ ಅವರು ಹಳ್ಳಿಗಳಿಗೆ ಹೋಗಿ ಕಷ್ಟಪಟ್ಟು ಅಂಕಿ ಅಂಶಗಳನ್ನು-ಸ್ಟ್ಯಾಟಿಸ್ಟಿಕ್ಸ್‌ಸಂಗ್ರಹಿಸಿದ್ದಾರೆ. ಇದಕ್ಕೆ ಸರಿಯಾದ ಆಧಾರ ಸಿಕ್ಕಲಿಲ್ಲ ಎಂದೂ ಸಹ ಹೇಳಿದ್ದಾರೆ. ಈ ರಿಪೋರ್ಟಿನಲ್ಲಿ ಹೇಳಿರುವುದು ಈ ರೀತಿ ಇದೆ:

Extract from the Journal of the Gokhale Institute of Politics and Economics on the working of the Bombay Tenancy Act:

> "To conclude, it seems fairly clear, at any rate there is little evidence to the contrary that the Tenancy Act has made little impression on the situation and that the conditions have remained more or less unaffected both in respect of the size, distribution of the owned and cultivated holdings and the relative care bestowed on the owner-cultivated lands. It may be that it is too early to expect results in these directions. But the indications in the earlier Chapters also pertaining to what could be immediately expected, if the Act had been effectively operative, did not appear promising. The general evidence therefore is that except in a few districts, the Act has for all practical purposes, remained ineffective."

ಮುಂಬಯಿ ಪ್ರದೇಶದಲ್ಲಿ ಬಹಳ ವರ್ಷಗಳಿಂದ ಈ ಭೂಸುಧಾರಣೆಯು ಜಾರಿಯಲ್ಲಿ ಬಂದಿದೆ. ಅದರ ಪರಿಣಾಮ ಏನಾಗಿದೆ ಎನ್ನುವುದನ್ನು ಕಂಡುಹಿಡಿಯಲು ಬಹಳ ಪ್ರಯತ್ನ ಪಟ್ಟಿದ್ದಾರೆ. ಈ ವಿಷಯದ ಬಗ್ಗೆ ನಮ್ಮ ಇಂಡಿಯಾ ದೇಶದಲ್ಲಿ ಇದೊಂದೇ ವರದಿ ಇರುತ್ತದೆ. It may be that it is too early to expect results in these directions. ಇದನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಭೂ ಸುಧಾರಣೆಯಿಂದ ಆಹಾರ ಉತ್ಪತ್ತಿ ಕಡಮೆಯಾಗುತ್ತದೆ ಎಂಬ ಒಂದು ದೊಡ್ಡ ವಾದ ಇದೆ. ಈ ವಾದಕ್ಕೆ ಈ ವರದಿಯೇ ಉತ್ತರವಾಗಿದೆ. ಇವತ್ತಿನ ದಿವಸ ನಾವು ಈ ಒಂದು ವರದಿಯನ್ನು ಅವರ ಮುಂದೆ ಇಡಬಹುದು. ಭೂಸುಧಾರಣೆಯಿಂದ ಆಹಾರ ಉತ್ಪತ್ತಿ ಜಾಸ್ತಿಯಾಗುತ್ತದೆಂದು ಹೇಳುವುದು ಕಷ್ಟವಾಗಿದೆ. ಆದರೆ ಕಡಿಮೆಯಾಗುತ್ತದೆ ಎಂದು ಹೇಳುವುದನ್ನು ಒಪ್ಪಿಕೊಂಡಿಲ್ಲ. ಆದುದರಿಂದ ಭೂ ಸುಧಾರಣೆಯಿಂದ ಆಹಾರ ಉತ್ಪತ್ತಿ ಕಡಿಮೆಯಾಗುತ್ತದೆ ಎಂಬ ವಾದದಲ್ಲಿ ನಿಜವಾಗಿಯೂ ಯಾವ ಹುರುಳೂ ಇಲ್ಲ. ಈ ತಜ್ಞರ ಸಮಿತಿ ವರದಿಯ ಆಧಾರದ ಮೇಲೆ ಇದನ್ನು ನಾನು ಹೇಳಲು ಇಚ್ಛೆಪಡುತ್ತೇನೆ.

ಇನ್ನು ಎರಡನೆಯ ವಾದ ಏನೆಂದರೆ, ಇತರ ಕ್ಷೇತ್ರಗಳಲ್ಲಿ ಪರಮಾವಧಿ ಮಿತಿಯನ್ನು ಹಾಕದೆ ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ಹಾಕುತ್ತಿದ್ದೇವೆ; ಇದು ತಪ್ಪು. ಇದಕ್ಕೆ ನಾವು ಇಷ್ಟು ಮಾತ್ರ ಹೇಳಬಹುದು. ಬೇರೆ ಕ್ಷೇತ್ರಗಳಲ್ಲಿ ಪರಮಾವಧಿ ಮಿತಿಯನ್ನು ಹಾಕುವುದಕ್ಕೆ ಮೈಸೂರು ಸರಕಾರಕ್ಕೆ ಅಧಿಕಾರ ಇದೆಯೋ ಇಲ್ಲವೋ ಎನ್ನುವ ವಿಷಯವನ್ನು ನಾವು ಪರಿಶೀಲನೆ ಮಾಡಿಲ್ಲ. ಒಂದು ವೇಳೆ ಹಾಗೆ ಮಾಡಲು ಅಧಿಕಾರವಿದ್ದರೂ, ಮೊದಲು ಕೇಂದ್ರ ಸರಕಾರ ಅದನ್ನು ತೀರ್ಮಾನಮಾಡಿದನಂತರ ನಮಗೆ ಮಾಡಲು ಸಾಧ್ಯವಿದೆ. ನಮ್ಮಷ್ಟಕ್ಕೆ ನಮಗೇ ಅದು ಸಾಧ್ಯವಿಲ್ಲ. ಇವತ್ತಿನ ದಿವಸ ಧೈರ್ಯದಿಂದ ಅಷ್ಟು ಮುಂದುವರಿಯುವುದಕ್ಕೆ ನಮಗೆ ಶಕ್ತಿಯಿಲ್ಲ. ಕಾನೂನು ಪ್ರಕಾರ ನಾವು ಮಾಡಬೇಕಾಗುತ್ತದೆ. ಕೇಂದ್ರ ಸರಕಾರ ಈ ವಿಚಾರದಲ್ಲಿ ಹೆಜ್ಜೆ ಇಟ್ಟಮೇಲೆ ರಾಜ್ಯಸರಕಾರ ಮಾಡುವುದು ಅವಶ್ಯಕವಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೇಂದ್ರ ಸರಕಾರದಮೇಲೆ ಒತ್ತಾಯಮಾಡಲು ಆಗುವದಿಲ್ಲವೇ?

ಶ್ರೀ ಎಂ. ರಾಮಪ್ಪ.—ಕೇಂದ್ರಸರಕಾರಮಾಡಿದ ಮೇಲೆ ನಾವು ಮಾಡಬೇಕೆಂಬ ಮನೋಭಾವವಿದೆ. ಅಲ್ಲಿಯವರೆಗೆ ನಮಗಾಗಲಿ ರಾಜ್ಯಸರಕಾರಕ್ಕಾಗಲಿ ಮಾಡುವದಕ್ಕಾಗುವುದಿಲ್ಲ. ಈ ವಿಷಯದಲ್ಲಿ ನಾನು ಇಷ್ಟೇ ಹೇಳಲಿಚ್ಛಿಸುತ್ತೇನೆ. ಬೇರೆ ಕ್ಷೇತ್ರಗಳಲ್ಲಿಯೂ ಸಹ ಪರಮಾವಧಿಮಿತಿಯನ್ನುಹಾಕಬೇಕೆಂದು ನಮ್ಮ ಅಭಿಪ್ರಾಯವಾಗಿದೆ. ಆದುದರಿಂದ ಈ ಅಭಿಪ್ರಾಯವನ್ನು ಸರಕಾರದವರು ಮನ್ನಣೆಮಾಡಬೇಕಾದುದು ಅವರ ಕರ್ತವ್ಯ; ಹಾಗೆ ಕೇಂದ್ರ ಸರಕಾರಕ್ಕೆ ತಿಳಿಸಬೇಕಾದುದು ಸಹ ಅವರ ಕರ್ತವ್ಯ. ಆದುದರಿಂದ ವ್ಯವಸಾಯ ಕ್ಷೇತ್ರದಲ್ಲಿ ಯಾವ ರೀತಿಯಾಗಿ ಪರಮಾವಧಿ ಮಿತಿಯನ್ನು ಹಾಕುತ್ತಾರೆಯೋ ಅದೇರೀತಿಯಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ಪರಮಾವಧಿ ಮಿತಿಯನ್ನು ಹಾಕಬೇಕು. ನಿಜವಾಗಿ ಅದನ್ನು ತರಲೇ ಬೇಕು. ಬೇರೆ ಕ್ಷೇತ್ರಗಳಲ್ಲಿಯೂ ಸಹ ಆದಷ್ಟು ಶೀಘ್ರವಾಗಿ ಪರಮಾವಧಿ ಮಿತಿಯನ್ನು ಹಾಕಬೇಕಾದುದು ರಾಜ್ಯ ಸರಕಾರದ ಮತ್ತು ಕೇಂದ್ರ ಸರಕಾರದ ಕರ್ತವ್ಯವಾಗಿದೆ ಎಂದು ಹೇಳಲು ಇಚ್ಛೆ ಪಡುತ್ತೇನೆ.

ಈ ಭೂಸುಧಾರಣೆಯನ್ನು ವಿರೋಧಮಾಡತಕ್ಕವರು ತಮ್ಮದೇ ಆದಂಥ ಒಂದು lopsided view ಎಂದು ಹೇಳುತ್ತಾರೆ—ಖಂಡ ದೃಷ್ಟಿಯಿಂದ ನೋಡುತ್ತಾರೆಯೇ ವಿನಾ ಪೂರ್ಣ ದೃಷ್ಟಿಯಿಂದ ನೋಡುತ್ತಿಲ್ಲ. ಕೇವಲ ಭೂಮಾಲೀಕರ ದೃಷ್ಟಿಯಿಂದ ನೋಡುತ್ತಾರೆಯೇ ವಿನಾ ಸಮಾಜದಲ್ಲಿ ಎಷ್ಟು ಅನ್ಯಾಯ ಇದೆ

ಆ ಅನ್ಯಾಯವನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡಬೇಕೆಂಬ ದೃಷ್ಟಿಯಿಂದ ನೋಡದೆ ತಮ್ಮ ಮುಂದೆ ಆದ ಒಂದು ದೃಷ್ಟಿಯಿಂದ ಅಥವಾ ಆಹಾರ ಉತ್ಪನ್ನ ಕಡಮೆಯಾಗುತ್ತದೆ ಎಂದು ಯಾವುದೋ ಒಂದು ಕುಂಟು ನೆಪ ಇಟ್ಟುಕೊಂಡು ಹೇಳುತ್ತಾರೆಯೇ ವಿನಾ ತಜ್ಞರ ಅಭಿಪ್ರಾಯದ ಮೇಲೆ scientific basis ಮೇಲೆ ಹೇಳುತ್ತಿಲ್ಲ ಎಂದು ಖಂಡಿತವಾಗಿಯೂ ನಾನು ಹೇಳುತ್ತೇನೆ. ಅವರು ಯಾವ ಅಂಕಿಅಂಶದ ಆಧಾರದ ಮೇಲೂ ಸಹ ಹೇಳುತ್ತಿಲ್ಲ. ಮತ್ತು ಈ ಒಂದು ದೃಷ್ಟಿ, ಭೂ ಸುಧಾರಣೆಯನ್ನು ವಿರೋಧ ಮಾಡತಕ್ಕವಾದ ಈಗಿನ ಶತಮಾನಕ್ಕೆ ಸರಿಯಲ್ಲ. ಆದ್ದರಿಂದ ಆ ವಾದದಲ್ಲಿ ತಿರುಳು ಇಲ್ಲ ಎಂದು ಇಷ್ಟು ಮಾತ್ರ ಹೇಳಲು ಇಚ್ಛೆಪಡುತ್ತೇನೆ.

ಈ ಮೈಸೂರು ಭೂಸುಧಾರಣೆ ಮಸೂದೆಯ ವಿಷಯದಲ್ಲಿ ಹಲವಾರು ಅಂಶಗಳನ್ನು ಹೇಳಲು ಇಚ್ಛೆ ಪಡುವುದಕ್ಕೆ ಮುಂಚೆ ಜತ್ತಿ ಸಮಿತಿಯ ವರದಿಯಲ್ಲಿ ಯಾವ ಅಂಶಗಳನ್ನು ಬಿಟ್ಟಿದ್ದೇವೆ, ಯಾವ ರೀತಿ ನಾವು ಅವನ್ನು ಒಪ್ಪಿಕೊಂಡಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ಕೇಳುವುದಕ್ಕೆ ಬಹಳ ಕಾತರರಾಗಿದ್ದಾರೆ. ಮುಖ್ಯವಾಗಿ ನಾನು ವಿನಾಯಿತಿ ವಿಷಯದಲ್ಲಿ ಒಂದು ಉದಾಹರಣೆಯನ್ನು ಕೊಡಲಿಚ್ಛಿಸುತ್ತೇನೆ. ಈ ಮಸೂದೆಯಲ್ಲಿ ಮತ್ತು ಗೇಣಿದಾರರಿಗೆ ಸಂಬಂಧಪಟ್ಟಂತೆ ಇರತಕ್ಕ ಬೊಂಬಾಯಿ, ಮದರಾಸು ಮಸೂದೆಗಳನ್ನು ಓದುವಾಗಲೂ ಸಹ ನಾನು ಮುಂಚೆ exemption ವಿಷಯ ನೋಡುತ್ತೇನೆ. ಬುದ್ಧಿವಂತಿಕೆ ಏನು ಮಾಡುತ್ತಾರೆ ಎಂದರೆ ಯಾರುಯಾರಿಗೆ ಅನುಕೂಲಮಾಡಿಕೊಡಬೇಕೋ ಅದನ್ನೆಲ್ಲಾ exemptionನಲ್ಲಿ ಕೊಡುತ್ತಾರೆ. ವಿನಾಯಿತಿ ವಿಷಯದಲ್ಲಿ ನಾವು ಎಂದರೆ ಸಮಿತಿಯವರು ಹೀಗೆ ಹೇಳಿದ್ದೇವೆ. "ಮುಖ್ಯವಾಗಿ ಟೀ, ಕಾಫೀ, ರಬ್ಬರ್ ಪ್ಲಾಂಟೇಷನ್‌ಗಳು; ಹಣ್ಣಿನ ತೋಟಗಳು, ಜಾನುವಾರುಗಳ ತಳಿಯನ್ನು ಅಭಿವೃದ್ಧಿಗೊಳಿಸುವುದು, ಸಕ್ಕರೆ ಕಾರ್ಖಾನೆಗಳಿಂದ ನಡೆಸಲ್ಪಡುತ್ತಿರುವ ಕಬ್ಬಿನ ಕ್ಷೇತ್ರಗಳು; ದಕ್ಷತೆಯಿಂದ ನಡೆಸಲ್ಪಡುತ್ತಿದ್ದು ಅಡಕವಾಗಿರುವ ಯಾವ ವ್ಯವಸಾಯ ಕ್ಷೇತ್ರದ ಬ್ಲಾಕುಗಳಿಗೆ ಭಾರಿ ಮೊಬಲಗನ್ನು ಲಾಭದಾಯಕವಾಗಿ ವಿನಿಯೋಗಿಸಲಾಗಿದೆಯೋ ಅಥವಾ ಅವುಗಳಿಗೆ ರಚನಾತ್ಮಕವಾದ ಮೇಲ್ಪಾಟುಗಳನ್ನು ಮಾಡಲಾಗಿದೆಯೋ ಮತ್ತು ಆಯಾಯ ಬ್ಲಾಕುಗಳನ್ನು ಛಿದ್ರಗೊಳಿಸುವುದರಿಂದ ವ್ಯವಸಾಯೋತ್ಪನ್ನವು ಕಡಮೆಯಾಗುವ ಸಂಭವವಿದೆಯೋ ಆ ವ್ಯವಸಾಯಕ್ಷೇತ್ರಗಳು. ಮೇಲೆ ನಮೂದಿಸಿರುವ ಐದು ವರ್ಗಗಳ ಪೈಕಿ 2, 3 ಮತ್ತು 5ನೆಯ ವರ್ಗಗಳಿಗೆ ಮಾತ್ರ ಕುಟುಂಬಕ್ಕೆ ಬಿಟ್ಟುಕೊಡುವ ಜಮೀನಿನ ಪರಮಾವಧಿ ಪ್ರಮಾಣವು ಅನ್ವಯಿಸದಂತೆ ವಿನಾಯಿತಿಯನ್ನು ಕೊಡಬಹುದೆಂದು ನಾವು ಭಾವಿಸುತ್ತೇವೆ. ಐದನೆಯ ವರ್ಗದಲ್ಲಿ ಬರುವ ಎಸ್ಟೇಟುಗಳ ಪರಿಮಿತಿಯನ್ನು ಭೂ ಆಯೋಗ ಮಂಡಲಿಯವರು ನಿರ್ಣಯಿಸಬೇಕು, ಎಂದು ಹೇಳಿದೆ. ಇದರಲ್ಲಿ ನಾವು ಕಾಫಿ, ಟೀ, ರಬ್ಬರಿಗೆ ವಿನಾಯಿತಿಕೊಟ್ಟಿದ್ದೇವೆಯೇ ವಿನಾ ಅಡಿಕೆ ಮತ್ತು ತೆಂಗಿಗೆ ವಿನಾಯಿತಿ ಕೊಟ್ಟಿರಲಿಲ್ಲ. ಆದರೆ ಈಗ ಇವರು ಏನು ಹೇಳುತ್ತಾರೆ? Central Committee on Land Reforms ಅವರು ಇದಕ್ಕೂ ಕೊಡಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಕೊಟ್ಟಿದ್ದೇವೆ ಎಂದು ಯಾವುದಾದರೂ ಒಂದು ಕೋಟ್‌ಮಾಡುತ್ತಾರೆ. ಪ್ಲಾನಿಂಗ್ ಕಮಿಷನ್ ಅವರಿಗೂ ನನಗೂ ಸ್ವಲ್ಪ ಪರಿಚಯ ಆಗಲಿಕ್ಕೆ ಅವಕಾಶವಿತ್ತು. ಅದರ ಸದಸ್ಯರ ಸಂಗಡ ಅನೇಕ ವಿಷಯಗಳನ್ನು ಚರ್ಚೆಮಾಡಿದ್ದೇನೆ. ಪ್ಲಾನಿಂಗ್ ಕಮಿಷನ್‌ನವರು ಇದುವರೆಗೂ ಇಂಡಿಯಾ ದೇಶದಲ್ಲಿ ಯಾವ ಪ್ರಾಂತಕ್ಕೂ ಸಹ ಅಡಿಕೆ, ತೆಂಗಿಗೆ ವಿನಾಯಿತಿಕೊಡದೇ, ಮೈಸೂರು ಪ್ರಾಂತಕ್ಕೆ ಏಕೆ ಕೊಟ್ಟರು ಎಂದು ಪ್ಲಾನಿಂಗ್ ಕಮೀಷನ್ ಅವರನ್ನು ಸಹ ಕೇಳುತ್ತೇನೆ. ಅವರ ಬದಲು ಈಗ ನಿಮ್ಮನ್ನು ಕೇಳುವುದು. ಈಗ ನನ್ನ ಕರ್ತವ್ಯವಾಗಿದೆ. ಬೊಂಬಾಯಿನಲ್ಲಿ ಆಗಲಿ ಇತರ ಯಾವ ಪ್ರಾಂತ್ಯದಲ್ಲಿ ಆಗಲಿ 'ಅಡಿಕೆ, ತೆಂಗಿಗೆ ವಿನಾಯಿತಿ ಕೊಡದೆ ಮೈಸೂರಿಗೆ ಮಾತ್ರ ಮೊದಲನೆಯ ಬಾರಿ ಏಕೆ, ಯಾವ ಆಧಾರದ ಮೇಲೆ ವಿನಾಯಿತಿ ಕೊಟ್ಟರು ಎಂದು ಕೇಳುತ್ತೇನೆ. ಐದನೆಯ ವಿನಾಯಿತಿಯಲ್ಲಿ ದಕ್ಷತೆಯಿಂದ ನಡೆಸಲ್ಪಡುತ್ತಿದ್ದು ಅಡಕವಾಗಿರುವ ಯಾವ ವ್ಯವಸಾಯ ಕ್ಷೇತ್ರದ ಬ್ಲಾಕುಗಳಿಗೆ ಭಾರಿ ಮೊಬಲಗನ್ನು ಲಾಭದಾಯಕವಾಗಿ ವಿನಿಯೋಗಿಸಲಾಗಿದೆಯೋ ಅದರಲ್ಲಿ ಅಡಿಕೆ ತೆಂಗು ಬರಬಹುದಲ್ಲಾ ಎಂದು ಮಾನ್ಯ ಮಂತ್ರಿಗಳು ಹೇಳಬಹುದು. ಅದಕ್ಕೆ ಹೇಳುತ್ತೇನೆ. ಅದನ್ನು ಲ್ಯಾಂಡ್ ಕಮಿಷನ್ ಅವರು ತೀರ್ಮಾನಮಾಡಬೇಕೇ ಹೊರತು ಸರ್ಕಾರದವರು ತೀರ್ಮಾನಮಾಡುವುದಕ್ಕೆ ಹಕ್ಕಿಲ್ಲ. ನಮ್ಮ ವರದಿಯ ಪ್ರಕಾರ ಅಡಿಕೆ ತೆಂಗಿಗೆ ವಿನಾಯಿತಿ ಕೊಟ್ಟಿದ್ದರೂ ಸಹ ಲ್ಯಾಂಡ್ ಕಮೀಷನ್‌ಗೆ ಬಿಡಬೇಕಾಗಿತ್ತೇವಿನಾ ಈ ಮಸೂದೆಯಲ್ಲಿ ತರಬಾರದಾಗಿತ್ತು ಎಂದು ಹೇಳುತ್ತೇನೆ. ಇದು ಒಂದನೆಯದಾಯಿತು. ಎರಡನೆಯದು ಪರಿಹಾರ ಕೊಡುವುದು. ಇದೂ ಮುಖ್ಯವಾದದ್ದು. ಇದೂ ಕೂಡ ಜಮೀನ್‌ದಾರರಿಗೆ ಅನುಕೂಲಮಾಡಿಕೊಡತಕ್ಕ ವಿಷಯ. ಈ ವಿಷಯದಲ್ಲಿ Central Committee on Land Reforms ಅವರು ಮಾಡಿದ ಸಲಹೆಯನ್ನು ಏಕೆ ಒಪ್ಪಿಕೊಳ್ಳಲಿಲ್ಲ ಎಂದು ಕೇಳುತ್ತೇನೆ. ಜತ್ತಿ ಸಮಿತಿ ವರದಿ ಜಮೀನ್‌ದಾರರಿಗೆ ಬಹಳ ಅನುಕೂಲವಾಗಿದೆ. ಅದಕ್ಕೆ ಜತ್ತಿ ಸಮಿತಿ ಅವರ ಸಲಹೆಯನ್ನು ತೆಗೆದುಕೊಂಡಿದ್ದೀರಿ. ಕಾಂಪೆನ್ಸೇಷನ್ ವಿಷಯದಲ್ಲಿ Central Committee on Land Reforms ಅವರಅಂಕಿ ಅಂಶ ಪ್ರಿಂಟ್ ಮಾಡಿಸಿಕೊಟ್ಟಿದ್ದಾರೆ. ಅದಕ್ಕೆ ಅವರಿಗೆ ಬಹಳ ವಂದಿಸಬೇಕಾಗಿದೆ. ಈ ವಿಷಯದಲ್ಲಿ ಅವರು ಏನು ಹೇಳಿದ್ದಾರೆ ಎಂದರೆ:—

"(1) The compensation should be a multiple of the fair rent minus land revenue or actual rent minus land revenue, if the actual rent is less than the maximum rent proposed in the law.

(2) Payment of Compensation to landlords may be on a graduated scale, the multiple decreasing with extent, for lands whose ownership is transferred to tenants, the payment being made from a pool to which the amount recovered from all tenants at an uniform multiple of rent will be credited."

ಇದರಲ್ಲಿ ಮುಖ್ಯವಾದ ಅಂಶ ಅವರು ಹೇಳಿರುವುದು, ಯಾವ ಭೂಮಾಲೀಕರಿಗೆ ವಿಸ್ತೀರ್ಣ ಕಡಮೆ ಇದೆ ಅಂತಹವರಿಗೆ ಹೆಚ್ಚು ಪರಿಹಾರಕೊಡಬೇಕು, ಯಾರಿಗೆ ಸಾವಿರಾರು ಎಕರೆ ವಿಸ್ತೀರ್ಣ ಇರುತ್ತದೆ ಅವರಿಗೆ ಕಡಿಮೆ ದರದಲ್ಲಿ ಕೊಡುತ್ತಾ ಬರಬೇಕು ಎಂದು

(ಶ್ರೀ ಎಂ. ರಾಮಪ್ಪ)

ಹೇಳಿದ್ದಾರೆ. ಇದನ್ನು ಕೇರಳ ಸರ್ಕಾರದವರು ಒಪ್ಪಿಕೊಂಡು ಈ ರೀತಿ ಪರಿಹಾರಕೊಡಬೇಕೆಂದು ಅವರ ಮಸೂದೆಯಲ್ಲಿ ತಂದಿದ್ದಾರೆ. ಅದು ಈಗ ಇನ್ನೂ ಜಾರಿಗೆ ಬಂದಿಲ್ಲ. Central Committee on Land Reforms ಅವರು ಇದನ್ನು ಹೇಳಿರಬೇಕಾದರೆ ಏಕೆ ಇದನ್ನು ಒಪ್ಪಿಕೊಳ್ಳದೆ ಜತ್ತಿ ಸಮಿತಿಯವರು ಹೇಳಿದ್ದನ್ನು ತೆಗೆದುಕೊಂಡಿರಿ, ಅದನ್ನು ಏಕೆ ಒಪ್ಪಿಕೊಳ್ಳಲಿಲ್ಲ ಎಂದು ಕೇಳುತ್ತೇನೆ. ಎಲ್ಲಿಲ್ಲಿ ಭೂಮಾಲೀಕರಿಗೆ ಅನಾನುಕೂಲವಾಗುತ್ತದೆಯೋ ಅದನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಈ ಪರಿಹಾರವನ್ನು ಗ್ರ್ಯಾಜ್ಯುಯೇಟೆಡ್ ಸ್ಕೇಲ್‌ನಲ್ಲಿ ಕೊಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಹಿಂದೆ ರಿಪೋರ್ಟ್‌ನಲ್ಲಿ ಏನು ಹೇಳಿತ್ತೋ ಅದನ್ನು ಒಪ್ಪಿಕೊಂಡಿದ್ದೀರಿ, ಈಗ ಏಕೆ ಹೀಗೆ ಹೇಳುತ್ತೀರಿ ಎಂದು ಕೇಳಬಹುದು. ಪ್ರತಿಯೊಂದನ್ನು ಜತ್ತಿ ಸಮಿತಿಯ ವರದಿಯಂತೆಯೇ ತಾವು ಒಪ್ಪಿಕೊಳ್ಳುವುದಾದರೆ ಅದಕ್ಕೂ ನಾನು ತಯಾರಾಗಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—Central Land Reforms ಕಮಿಟಿ ಅವರ ಶಿಫಾರಸು ಎಂದು ನಾವು ಅಚ್ಚುಮಾಡಿಸಿಕೊಟ್ಟದ್ದನ್ನು ಅವರು ಇಟ್ಟುಕೊಂಡು ಹೇಳುತ್ತಿದ್ದಾರೆ ಅಂತಿಮವಾಗಿ ತೀರ್ಮಾನವಾದದ್ದು ಬೇರೆ ಇದೆ.

What the Hon'ble Member is quoting now is not the final decision taken by the Central Committee.

Sri J. B. MALLARADHYA (Nanjangud).—Sir, if the Hon'ble Minister could produce a copy of the final report of the Central Committee, it would facilitate further discussion.

Sri Kadidal MANJAPPA.—Sri Mallaradhya said that he would not participate in this debate

Sri C. J. MUCKANNAPPA (Gubbi).—It is for the benefit of others, Sir.

Sri Kadidal MANJAPPA.—I did not mean to say that Sri Mallaradhya should not speak on this.

Sri J. B. MALLARADHYA.—I request the Hon'ble Minister to kindly make available a copy of the Central Committee Report.

Sri Kadidal MANJAPPA.—Sir, it cannot be done; some of it is in the nature of correspondence. I have no objection to tell the House the gist of what has been finally settled.

9-30 A.M.

ಶ್ರೀ ಎಂ. ರಾಮಪ್ಪ.—ಪರಮಾವಧಿಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾದದ್ದು ನನ್ನ ಕರ್ತವ್ಯ. ಸ್ವಂತ ಸಾಗುವಳಿ ಮಾಡುವವರಿಗೆ ಅನುಕೂಲವಾಗಲಿ, ವ್ಯವಸಾಯ ಮಾಡುವುದರಲ್ಲಿ ಅವರಿಗೆ ಅಭಿರುಚಿ ಇರಲಿ ಎನ್ನುವ ದೃಷ್ಟಿಯಿಂದ ನಾಲ್ಕುವರೆ ಕುಟುಂಬ ಹಿಡುವಳಿಯವರೆಗೂ ಕೊಟ್ಟು, ಅದರ ಎರಡರಷ್ಟು ಎಂದರೆ ಒಂಭತ್ತು ಕುಟುಂಬ ಹಿಡುವಳಿಗಳವರೆಗೂ ಪರಮಾವಧಿ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೂ ಅವಕಾಶವಿತ್ತು. ಅಳಿಯ ಸಂತಾನದವರಿಗೆ ಕೂಡ ಈ ರೀತಿ ಅವಕಾಶವಿತ್ತು. ಇಂಥಾದ್ದರಲ್ಲಿ ಇದನ್ನು ಏಕೆ ಬದಲಾವಣೆ ಮಾಡಿದ್ದಾರೆಂದು ಕೇಳುತ್ತೇನೆ. ಭೂಮಾಲೀಕರ ಪರವಾಗಿ ವಾದಿಸುತ್ತಿದ್ದೇನೆ ಎಂದು ತಾವು ಹೇಳಬಹುದು. ನಾನು ಅವರ ಪರವಾಗಿವಾದಿಸುತ್ತಿಲ್ಲ. ನೀವು ಪರಮಾವಧಿಯನ್ನು ಎಲ್ಲರಿಗೂ ಒಂದೇ ರೀತಿಯಲ್ಲಿ ಹಾಕುವದಾದರೆ ಹಾಕಿ, ಇಲ್ಲದೆ ಇದ್ದರೆ ಕೆಲವರಿಗೆ ಮಾತ್ರ ಅನುಕೂಲವಾಗುವಂತೆ ಮಾಡಬೇಡಿ. ಈ ರೀತಿ ಅನಕೂಲವಾಗುವವರ ಪ್ರಭಾವಕ್ಕೆ ಒಳಗಾಗಿದ್ದಾರೆಂದು ಆರೋಪಣೆ ಮಾಡುವುದಿಲ್ಲ. ಆ ರೀತಿ ಹೇಳಿದರೂ ತಮಗೆ ಸಿಟ್ಟು ಬರಕೂಡದು. ನೀವೊಬ್ಬರೇ ಅಲ್ಲ, ನಿಮ್ಮ ಪಕ್ಷದಲ್ಲಿರತಕ್ಕ 150 ಜನ ಮತ್ತು ಅದರ ಹಿಂದೆ ಸಾವಿರಾರು vested interests ಇರುವ ಜನಗಳಿದ್ದಾರೆ. ಇವರೆಲ್ಲರ ಹಿತಗಳನ್ನೂ ಕಾಪಾಡುವುದಕ್ಕೆ ಅವರ ಪ್ರಭಾವಕ್ಕೆ ಒಳಗಾಗದೇ ಇದ್ದರೂ ಸಹ ಅವರ ಮಾತಿಗೆ ಒಳಪಟ್ಟು ಪಕ್ಷದ ಹಿತದೃಷ್ಟಿಯಿಂದ ಮಾಡಿದ್ದೀರೆಂದು ಹೇಳಬೇಕು. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಜತ್ತಿ ಸಮಿತಿ ವರದಿಯಲ್ಲಿ ಒಂಭತ್ತು ಕುಟುಂಬ ಹಿಡುವಳಿಯವರೆಗೂ ಅವಕಾಶ ಕೊಟ್ಟಿರಬೇಕಾದರೆ ಒಬ್ಬರಿಗೆ ಕಡಮೆ ಮಾಡಿ, ಮತ್ತೊಬ್ಬರಿಗೆ ಅಷ್ಟೇ ವಿನಾಯಿತಿಯನ್ನು ಏಕೆ ಕೊಟ್ಟಿಲ್ಲ ಎಂದು ಕೇಳುತ್ತಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ತೆಂಗು ಮುಂತಾದ ತೋಟಗಳಿಗೆ ಒಂಭತ್ತು ಕುಟುಂಬ ಹಿಡುವಳಿಯಷ್ಟು ಎಂದು ಮಿತಿಯನ್ನು ಹಾಕಿಲ್ಲ.

ಶ್ರೀ ಎಂ. ರಾಮಪ್ಪ.—ಅವರಿಗೆ ವಿನಾಯಿತಿಯನ್ನು ಕೊಟ್ಟಿದ್ದೀರಿ. ಖುಷ್ಕಿ ಜಮೀನು ಇರುವವರನ್ನೂ ಮತ್ತು ತೋಟಗಳಿರತಕ್ಕವರನ್ನೂ ಒಂದೇ ದೃಷ್ಟಿಯಿಂದ ನೋಡಬೇಕೆಂಬುದು ನನ್ನ ಅಭಿಪ್ರಾಯ. ಅವರಿಗೆ ಕಡಮೆ ಮಾಡಿದರೆ ಇವರಿಗೂ ವಿನಾಯಿತಿ ಕೊಡಬೇಡಿ. ಒಂದು ವರ್ಗದ ಜನರಿಗೆ ವಿನಾಯಿತಿ ಕೊಟ್ಟಿದ್ದೀರಿ, ಇನ್ನೊಂದು ವರ್ಗದ ಜನರಿಗೆ ಪರಮಾವಧಿಯನ್ನು ಬಹಳ ಕಡಮೆ ಮಾಡಿದಿರಿ.

ಶ್ರೀ ಕಡಿದಾಳ್ ಮಂಜಪ್ಪ.—Existing holdingಗೆ ಮಾತ್ರ ವಿನಾಯಿತಿಯನ್ನು ಕೊಟ್ಟಿದೆ.

ಶ್ರೀ ಎಂ. ರಾಮಪ್ಪ.—ಈಗ ಭೂ ಸುಧಾರಣೆಯನ್ನು ತರುತ್ತಿದ್ದೀರಿ. ಇನ್ನು ಮುಂದೆ ಯಾರು ತಾನೇ ತೋಟಗಳನ್ನು ಹಾಕುವುದಕ್ಕೆ ಹೋಗುತ್ತಾರೆ! ಈಗ existing holdingಗೆ ಮಾತ್ರ ಅನ್ವಯಿಸುತ್ತದೆ; ನಿಜ. ಇನ್ನು ಮುಂದೆ ಯಾರೂ ಜಮೀನು ತೆಗೆದುಕೊಂಡು ತೋಟ ಹಾಕುವುದಕ್ಕೆ ಹೋಗುವುದಿಲ್ಲ. ಆದುದರಿಂದ ವಿನಾಯಿತಿ ಕೊಟ್ಟಿರುವುದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇತರ ವಿಧವಾದ ಜಮೀನು ಇರತಕ್ಕವರಿಗೆ ಕೊಟ್ಟಿದ್ದ ಪರಮಾವಧಿ ಮಿತಿಯನ್ನು ಕಡಮೆಮಾಡಲು ಇದ್ದ ಕಾರಣವೇನೆಂದು ತಮಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಖುಷ್ಕಿ ಜಮೀನಿರತಕ್ಕ ಭೂಮಾಲೀಕರು ಒಟ್ಟಿಗೆ ಬಂದು ತಮ್ಮ ಸರ್ಕಾರದಲ್ಲಿ ಅರಿಕೆ ಮಾಡಿಕೊಂಡಿಲ್ಲ. ಬಹುಮಟ್ಟಿಗೆ ಈ ರೀತಿ ಅರಿಕೆ ಮಾಡಿಕೊಳ್ಳದೇ ಇರುವುದೇ ತಾವು ಈ ರೀತಿ ಕಡಮೆ ಮಾಡುವುದಕ್ಕೆ ಮುಖ್ಯಕಾರಣವಾಗಿರಬೇಕು ಎಂದು ಭಾವಿಸಿಕೊಳ್ಳುತ್ತೇನೆ.

ಅಡಿಕೆ ಮತ್ತು ತೆಂಗಿನ ವಿಷಯದಲ್ಲಿ ವಿನಾಯಿತಿಯನ್ನು ಸೆಂಟ್ರಲ್ ಕಮಿಷನ್‌ನವರು ಕೊಟ್ಟಿದ್ದಾರೆಂದು ಹೇಳುತ್ತೀರಿ. ಆದರೆ Central Committee on Land Reforms ಆಗಲಿ ಅಥವಾ Land Reforms Committee ಯವರಾಗಲಿ ಯಾರೂ ವಿನಾಯಿತಿಯನ್ನು ಎಲ್ಲಿಗೂ ಕೊಟ್ಟಿಲ್ಲ. ಅವರ ಅಭಿಪ್ರಾಯಕ್ಕೂ ಈಗ ನಮ್ಮ ಮುಂದೆ ತರಲಾಗಿರುವ ಮಸೂದೆಗೂ ಬಹಳ ವ್ಯತ್ಯಾಸವಿದೆ. ಎಲ್ಲಿ ಗೇಣೀದಾರನು ಸಾಗುವಳಿ ಮಾಡುತ್ತಿಲ್ಲವೋ ಅಂಥ ಕಡೆಗಳಲ್ಲಿ ಮಾತ್ರ ವಿನಾಯಿತಿ ಕೊಡಬೇಕಾದದ್ದನ್ನು ಹೇಳಿದ್ದಾರೆ.

> "Existing arecanut, cocoanut and cardamom plantations under personal cultivation should also be exempted from the operation of ceiling but if there are any tenants in respect of lands on which areca, cocoanut and cardamom are grown, such tenants should get all the rights under the Act including the ownership of non-resumable extent."

ಇದು ಕೇಂದ್ರ ಸಮಿತಿಯ ಸಿಫಾರಸು. ನಮ್ಮ ಮುಂದಿನ ಮಸೂದೆಯಲ್ಲಿ ಹಾಗೆ ಇಲ್ಲ. ಇದರಲ್ಲಿ ಪೂರ್ಣ ವಿನಾಯಿತಿಯನ್ನು ಕೊಟ್ಟಿದ್ದೀರಿ.

**Sri Kadidal MANJAPPA**.—I am sorry it is not so. The tenants have the same privileges and rights as the other tenants cultivating other lands. It is quite clear.

**Sri M. RAMAPPA**.—It is not stated so. I cannot so easily agree with you.

**Sri Kadidal MANJAPPA**.—I am positive about it. Kindly read the provision relating to Resumption. Section 18 and Section 20 clause (8): "In respect of lands cultivated with plantation crops the tenancy shall not be terminated over an extent exceeding one-half of the land leased to a tenant." All the provisions contained in Sections 20 and 18 apply to the tenants cultivating the plantation lands also.

ಶ್ರೀ ಎಂ. ರಾಮಪ್ಪ.—ಅದರಲ್ಲಿ "the tenancy shall not be terminated" ಎಂದಿದೆ. ಸೀಲಿಂಗ್ ವಿಷಯದಲ್ಲಿ exemption clause ಏನಿದೆ ಅದರಲ್ಲಿ ಒಂದು ಕಂಡಿಷನ್ ಇರಬೇಕು. ತಾವು ಹೇಳಿದ್ದು ಟೆನೆನ್ಸಿಗೆ ಮಾತ್ರ ಅನ್ವಯಿಸುತ್ತದೆ, ಸೀಲಿಂಗ್ ವಿಷಯದಲ್ಲಿ ಅನ್ವಯಿಸುವುದಿಲ್ಲ. ತಾವು ಇದನ್ನು concede ಮಾಡುವುದಕ್ಕೆ ತಯಾರಾಗಿದ್ದರೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಈಗಿರುವುದರಲ್ಲಿ ಆ ರೀತಿಯಾಗುವುದಿಲ್ಲ. ವಿನಾಯಿತಿಯನ್ನು ಕೊಡಬೇಕಾದರೆ subject to this condition ಎಂದು ಆ ಕ್ಲಾಜಿನಲ್ಲಿ ಹೇಳಬೇಕೇ ವಿನಾ tenancy terminate ಮಾಡತಕ್ಕ ಕ್ಲಾಜಿನಲ್ಲಿ ಹಾಕಿದರೆ ಇದಕ್ಕೆ ಅನ್ವಯವಾಗುವುದಿಲ್ಲ.

**Sri Kadidal MANJAPPA**.—May I ask the learned member to read the clause relating to ceiling, Clause 68:

> "It shall not be lawful, with effect from the appointed day, for any person to hold as owner under his personal cultivation land in excess of three family holdings."

"*Under his personal cultivation*"

ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪುರ).—ಅಡಕೆ ಮತ್ತು ತೆಂಗಿನ ತೋಟಗಳ ವಿಷಯದಲ್ಲಿ ಹೇಳುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅಡಕೆ ತೋಟದಲ್ಲಿ ಬಹಳ ಜನ ಗೇಣಿದಾರರಿದ್ದಾರೆ.

ಶ್ರೀ ಎಂ. ರಾಮಪ್ಪ.—ಎಕ್ಸೆಂಪ್ಷನ್ ಕ್ಲಾಜ್ ಮಾತ್ರ......

**Sri Kadidal MANJAPPA**.—I am also a lawyer though not as brilliant as my Hon'ble friend.

**Sri M. RAMAPPA**.—You are older in age.

**Sri Kadidal MANJAPPA**.—I am positive that what I say is the correct interpretation.

**Sri M. RAMAPPA**.—I do not admit. While giving the reply, you may convince me.

ಇದರಲ್ಲಿ ವಿನಾಯಿತಿ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆಯೇ ವಿನಾ ಸೀಲಿಂಗ್ ವಿಷಯದಲ್ಲಿ ಜನರಲ್ ಆಗಿ ಅನ್ವಯಿಸುವ ಹಾಗೆ ವಿನಾಯಿತಿ ಕೊಟ್ಟಿರುವ ಕ್ಲಾಜಿನಲ್ಲಿ ಹಾಕಿಲ್ಲ. ವಿನಾಯಿತಿ ಕೊಟ್ಟಿರತಕ್ಕ ಕ್ಲಾಜಿನಲ್ಲಿ ಇದು ಇರಬೇಕಾಗಿತ್ತು. ಟೆನೆನ್ಸಿಗೆ ಸಂಬಂಧಿಸಿದ ಕಾಜಿನಲ್ಲಿದ್ದರೆ ಆಗ ಅದು ಅನ್ವಯಿಸುವುದಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಸ್ವಾಮೀ, ಇನ್ನೊಂದು ಅತಿ ಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಅದು ನಮಗೂ ನಿಮಗೂ ಭಿನ್ನಾಭಿಪ್ರಾಯ ವಿರುವ ವಿಷಯವೇನಲ್ಲ. ಇವೊತ್ತಿನ ದಿವಸ ಭೂಸುಧಾರಣೆಯನ್ನು ಜಾರಿಗೆ ತರತ್ತಿದ್ದರೂ ಸಹ ಯಾವ ಒಂದು ಅನುಕೂಲವನ್ನು ಗೇಣಿದಾರರಿಗೆ ಮಾಡಿಕೊಡಬೇಕೆಂದು ಆಶೆ ಪಡುತ್ತೀರೋ ಅದನ್ನು ಮಾಡಿಕೊಡಬೇಕು. ಸುಮ್ಮನೆ ಭೂ ಸುಧಾರಣೆಯನ್ನು ತರುತ್ತೇವೆಂದು ತಂದರೆ ನಾನೇನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇವೊತ್ತಿನ ದಿನ ಸಾವಿರಾರು ಎಕರೆಗಳಿರುವ ಜಮೀನುದಾರರುಗಳು ಜಮೀನನ್ನು ಮಾರಾಟ ಮಾಡುತ್ತಿದ್ದಾರೆ ಮತ್ತು ಇನ್ನೂ ಈಗಲೂ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಸರಕಾರ ಏಕೆ ತಡೆಗಟ್ಟಲು ಪ್ರಯತ್ನ ಮಾಡಿಲ್ಲ ಎಂದು ನಾನು ಕೇಳುತ್ತಿದ್ದೇನೆ. ಇವೊತ್ತಿನ ದಿವಸ ಈ ಬಿಲ್ಲನ್ನು ಚರ್ಚೆ ಮಾಡಿ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಮತ್ತೆ ಪುನಃ ಈ ಬಿಲ್ಲನ್ನು ತರಬೇಕಾದರೆ ಕನಿಷ್ಠಪಕ್ಷ ಒಂದು ವರ್ಷವಾದರೂ ಬೇಕು. ಅದಾದಮೇಲೂ ಲ್ಯಾಂಡು ಕಮಿಷನ್ನನ್ನು ಮಾಡಬೇಕಾದರೆ ಎರಡು ವರ್ಷಗಳಾದರೂ

(Sri M. Ramappa)

ಬೇಕು. ಎಂದರೆ ಭೂ ಮಾಲೀಕರು ಜಮೀನುಗಳನ್ನು ಮಾರಾಟ ಮಾಡಿಕೊಳ್ಳಲು ಇನ್ನೂ ಎರಡು ವರ್ಷಗಳ ಅವಕಾಶವಿದೆ ಎಂದ ಹಾಗಾಯಿತು. ಆದರೆ ಈಗಾಗಲೇ ಕೇರಳದಲ್ಲಿ ಮಾಡಿಲ್ಲವೇ? ಅದರಂತೆ ಇದರೊಳಗೂ ಕೂಡ ಯಾವ ಟ್ರಾನ್ಸ್‌ಫರುಗಳೂ ಆಗ ಕೂಡದು ಎಂದೇಕೆ ತಡೆಯ ಬಾರದು ಎಂದು ನಾನು ಕೇಳುತ್ತೇನೆ.

ಇನ್ನೊಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಪರ್ಸನಲ್ ಕಲ್ಟಿವೇಷನ್ನು ಎಂದರೆ ಸ್ವಂತವಾಗಿ ಜಮೀನು ಮಾಡುವವರೂ ಜಮೀನನ್ನು ಮಾರಾಟ ಮಾಡುತ್ತಿದ್ದಾರೆ. ಆದರೆ ನಮ್ಮ ಮೈಸೂರು ಟೆನೆನ್ಸಿ ಆಕ್ಟಿನಲ್ಲಿ ಗೇಣಿದಾರರು ಜಮೀನನ್ನು ಮಾಡುತ್ತಿದ್ದರೂ ಆ ಗೇಣಿದಾರರಿಗೆ ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲ. ಇದಕ್ಕೆ ಒಂದು ಸುಲಭವಾದ ಉಪಾಯವಿದೆ, ಇದನ್ನು ನಾನು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಯಾವುದಾದರೂ ಒಂದು ರೀತಿಯಿಂದ ಈ ಮಾರಾಟ ವಾಗುವುದನ್ನು ನಿಲ್ಲಿಸದಿದ್ದರೆ ಈ ಭೂಸುಧಾರಣೆ ಯನ್ನು ತಂದರೂ ಯಾವ ಪ್ರಯೋಜನವೂ ಆಗವು ದಿಲ್ಲ ಎಂದ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ನಮ್ಮ ಮೈಸೂರು ಟೆನೆನ್ಸಿ ಕಾಯಿದೆಯ ಪ್ರಕಾರ ಒಬ್ಬ ಭೂ ಮಾಲೀಕ ತನ್ನ ಭೂಮಿಯನ್ನು ಮಾರಲು ಇಷ್ಟಪಟ್ಟರೆ ಅದನ್ನು ಮಾರಬಹುದು ಮತ್ತು ಇದು ಅಷು ಸುಲಭವಾಗಿದೆ. ಆದರೆ ಬೊಂಬಾಯಿ ಪ್ರಾಂತದಲ್ಲಿರುವ ಟೆನೆನ್ಸಿ ಕಾಯಿದೆಯ ಪ್ರಕಾರ ಭೂ ಮಾಲೀಕ ಗೇಣಿದಾರನಿಗೆ ನೋಟೀಸನ್ನು ಕೊಡಬೇಕು ಮತ್ತು ಒಂದು ತಿಂಗಳೊಳಗಾಗಿ ಉತ್ತರವನ್ನು ಕೊಡಬೇಕು ಮತ್ತು ಈ ಭೂಮಿಗೆ ಇಷ್ಟೇ ಕಿಮ್ಮತ್ತು ಎಂದು ಅಲ್ಲಿನ ಅಮಲ್ದಾರವರ ನಿಗದಿ ಮಾಡಬೇಕು. ಈ ರೀತಿಯಾಗಿ ಮೈಸೂರಿನ ಟೆನೆನ್ಸಿ ಕಾಯಿದೆಯಲ್ಲಿಲ್ಲ. ಮೈಸೂರಿನ ಟೆನೆನ್ಸಿ ಕಾಯಿದೆಯಂತೆ ಭೂ ಮಾಲೀಕ ಎಕರೆಗೆ ಒಂದು ಸಾವಿರ ರೂಪಾಯಿಯನ್ನು ಕೊಡ ಬೇಕೆಂದು ಹೇಳಬಹುದು. ಅದರಂತೆ ಗೇಣಿದಾರನು ತಗೆದುಕೊಳ್ಳಲೇಬೇಕಾಗುತ್ತದೆ ಮತ್ತು ಇದರ ಮೊತ್ತವನ್ನು ಕಡಮೆ ಮಾಡಿಕೊಳ್ಳಲು ಅವಕಾಶವಿಲ್ಲ. ಆದುದರಿಂದ ಮೈಸೂರಿನಲ್ಲಿ ಹೆಸರಿಗೆ ಮಾತ್ರ ಟೆನೆನ್ಸಿ ಕಾಯಿದೆ ಎಂದು ಇದೆ. ಆದುದರಿಂದ ಬೊಂಬಾಯಿ ಕಾಯಿದೆಯಲ್ಲಿರುವಂತೆ ಇಲ್ಲಿಯೂ ಜಮೀನಿನ ಬೆಲೆ ಯನ್ನು ಅಮಲ್ದಾರರವರೇ ನಿಗದಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ನಾನು ಹೇಳಿದುದನ್ನು ತಿಳಿದು ಕೊಂಡರೋ ಇಲ್ಲವೋ ತಿಳಿಯಲಿಲ್ಲ.

He has not understood and followed at all.

Sri Kadidal MANJAPPA.—I am so sorry for my young friend.

Sri J. B. MALLARADHYA.—Why not the Revenue Minister be subjected to some sort of intelligence test?

Sri Kadidal MANJAPPA.—I am not subjected to intelligence test, I suppose, I caught the point.

Mr. SPEAKER.—One should not persist the point that the Minister has not understood. Let us behave in a dignified manner. I understand the humour. But, if it is carried to too much length, it will not be correct.

Sri Kadidal MANJAPPA.—I would like to say a few words. I have argued more cases on the tenancy provisions than my Hon'ble friend. He was telling the House that under the Mysore Tenancy Act it is very easy for the landlord to sell away the land by issuing a notice and asking him to purchase at the price quoted by him because the tenant will not be in a position to pay the price quoted by him. He says that it is not so under the Bombay Tenancy Act.

Sri M. RAMAPPA.—If you can understand the spirit with which I am persisting, I am happy.

ಈಗ ಸ್ವಂತ ಸಾಗುವಳಿ ಮಾಡತಕ್ಕವರು ಎಷ್ಟು ಬೆಲೆಯನ್ನು ನಿಗದಿ ಮಾಡುತ್ತಾರೋ ಅಷ್ಟನ್ನು ಗೇಣಿದಾರರೇ ಕೊಡಬೇಕು. ಹಾಗೆ ಕೊಡದಿದ್ದರೆ ಬೇರೆಯವರಿಗೆ ಮಾರಾಟ ಮಾಡುವುದಕ್ಕೆ ಅವಕಾಶ ಈ ಮೈಸೂರು ಟೆನೆನ್ಸಿ ಕಾಯಿದೆಯಲ್ಲಿದೆ. ಇದು ಬಹಳ ಅನ್ಯಾಯ. ಗೇಣೀದಾರನು ಸಾಗುವಳಿ ಮಾಡುತ್ತಿದ್ದರೂ ಇವತ್ತಿನ ದಿವಸ ಭೂಮಾಲಿಕರು ಭೂಮಿಯನ್ನು ಮಾರಾಟ ಮಾಡುತ್ತಾರೆ. ಇದರಂತೆ ರಿಜಿಸ್ಟರು ನೋಟೀಸು ಕೊಟ್ಟು ಬಿಡುತ್ತಾರೆ. ಆಗ ಸೀಲಿಂಗು ಬರುತ್ತದೆ. ಹೀಗೆ ನೋಟೀಸನ್ನು ಕೊಟ್ಟು ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದರಿಂದ ಯಾವ ಭೂ ಸುಧಾರಣೆಯನ್ನು ತಂದರೂ ಯಾವ ಪ್ರಯೋಜನವೂ ಆಗುವುದಿಲ್ಲ. ಈ ಕಾಯಿದೆ ಯನ್ನು ಜಾರಿಗೆ ತರಲು ಇನ್ನೂ ಎರಡು ವರ್ಷಗ ಳಾದರೂ ಬೇಕಾಗುತ್ತದೆ. ಆದುದರಿಂದ ಈಗ ಬೊಂಬಾಯಿಯ ಕಾಯಿದೆಯಲ್ಲಿರುವಂತೆ ಅಮಲ್ದಾರರುಗಳೇ ಜಮೀನಿನ ಬೆಲೆಗಳನ್ನು ನಿಗದಿ ಮಾಡುವಂತೆ ಮೈಸೂರಿನ ಟೆನೆನ್ಸಿ ಕಾಯಿದೆಯಲ್ಲಿಯೂ ಮಾಡಿದರೆ ನಿಜವಾಗಿಯೂ ನಿಮಗೆ ಭೂ ಸುಧಾರಣೆಯಲ್ಲಿ ಅಭಿಮಾನವಿದೆ ಎಂದು ಅರ್ಥ ಮಾಡಿಕೊಳ್ಳಬಹುದು. ಈ ರೀತಿ ಆರ್ಡಿನೆನ್ಸನ್ನು ತರಲು ಒಂದು ಅವಕಾಶ ವಿಲ್ಲದೇ ಇರಬಹುದು. ಈ ಅಧಿವೇಶನ ಮುಗಿದ ಮೇಲಾದರೂ ಅಮಲ್ದಾರರುಗಳೇ ಜಮೀನಿನ ಬೆಲೆ ನಿಗದಿ ಮಾಡುವ ಅವಕಾಶ ಮಾಡಿಕೊಟ್ಟರೆ ಆಗ ಗೇಣಿದಾರರ ವಿಷಯದಲ್ಲಿ ತಮಗೆ ಅಭಿಮಾನ ವಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ.

ಇನ್ನು ಒಂದೆರಡು ಅಂಶಗಳು ಎಂದರೆ, ಕೋರ್ಟು ಗಳಲ್ಲಿ ಲಾಯರುಗಳು ಹಾಜರಾಗತಕ್ಕ ವಿಷಯದಲ್ಲಿ ಜತ್ತಿ ಸಮಿತಿಯವರು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಅದೇನೆಂದರೆ ಈ ಲಾಯರುಗಳು ಕೋರ್ಟುಗಳಲ್ಲಿ ಮತ್ತು ಟ್ರಿಬ್ಯೂನಲ್ಲುಗಳಲ್ಲಿ ಹಾಜ ರಾಗುವುದಕ್ಕೆ ಅಡ್ಡಿ ಪಡಿಸಿದ್ದಾರೆ ಎಂದು ಅನೇಕ ಸದಸ್ಯರು ಹೇಳಿರುವರು. ಅದಕ್ಕೆ ಕಾರಣವಿಷ್ಟೆ. ಈಗ ಭೂಮಾಲೀಕರಿಗೆ ಕೋರ್ಟುಗಳಲ್ಲಿ ಸಾಮಾನ್ಯ ವಾಗಿ ಒಂದು ಕೇಸೇನಾದರೂ ಇದ್ದರೆ ವಕೀಲರನ್ನು ಹಾಜರು ಪಡಿಸುವುದು ಬಹುಸುಲಭ. ಅವರಲ್ಲಿ ಹಣವಿರುತ್ತದೆ. ಭೂ ಮಾಲೀಕರು ವಕೀಲರನ್ನು

ಎಂಗೇಜ್ ಮಾಡುವಂತೆ ಟೆನೆಂಟ್ಸ್ ಸಹ ಎಂಗೇಜ್ ಮಾಡಬಹುದು. ಆದರೆ ಅವರಲ್ಲಿ ಅಷ್ಟಾಗಿ ಹಣವಿರುವುದಿಲ್ಲ. ಅಂತಹವರೂ ಸಹ ವಕೀಲರನ್ನು ಕೋರ್ಟಿನಲ್ಲಿ ಹಾಜರುಮಾಡಬಹುದು ಒಂದು ವೇಳೆ ಗೇಣೀದಾರನಿಗೆ ಸಾಕಷ್ಟು ಹಣವಿದ್ದು ಅವನು ವಕೀಲರನ್ನು ಎಂಗೇಜ್ ಮಾಡಬೇಕೆಂದು ಇಷ್ಟಪಟ್ಟಲ್ಲಿ ಎಂಗೇಜ್ ಮಾಡಬಹುದು ಎಂದು ಇತರ ಪ್ರಾಂತಗಳಲ್ಲಿನ ಕಾಯಿದೆಯಲ್ಲಿ ಅವಕಾಶ ಕೊಟ್ಟಿದ್ದಾರೆ. ಆದರೆ ಮೈಸೂರಿನಲ್ಲಿ ಟ್ರಿಬ್ಯೂನಲ್ಲಿಗೆ ಮತ್ತು ಅಪಿಲೇಟ್ ಕೋರ್ಟಿಗೆ ಆ ರೀತಿ ಅವಕಾಶ ಕೊಟ್ಟಿಲ್ಲ. ಇದು ಕೇವಲ ಟ್ರಿಬ್ಯೂನಲ್ ಕೋರ್ಟಿಗೆ ಅನ್ವಯಿಸಬೇಕೇ ವಿನಾ ಅಪಲೇಟ್ ಕೋರ್ಟಿಗೆ ಅನ್ವಯಿಸಕೂಡದು. ಅಪಲೇಟ್ ಕೋರ್ಟುಗಳಲ್ಲಿ ಲಾಯರುಗಳಿಗೆ ಈ ಬಗ್ಗೆ ಹೆಚ್ಚಿನ ಅವಕಾಶ ಇರಬೇಕೆಂದು ಹೇಳುತ್ತೇನೆ. ಟ್ರಿಬ್ಯೂನಲ್ ಕೋರ್ಟಿನಲ್ಲಿ ಹೆಚ್ಚಿಗೆ ಅವಕಾಶ ಇಲ್ಲದಿದ್ದರೂ ಇರಬಹುದು. ಡೆಪ್ಯುಟಿ ಕಮಿಷನರ್ ಕೋರ್ಟಿನಲ್ಲಿ ಲಾಯರುಗಳಿಗೆ ಟ್ರಿಬ್ಯೂನಲ್ ಕೋರ್ಟಿಗಿಂತ ಹೆಚ್ಚಿಗೆ ಅವಕಾಶವಿರಬೇಕು ಎಂಬುದಾಗಿ ಕೇಳಿಕೊಳ್ಳುತ್ತೇನೆ. ಇನ್ನು ಇದರಲ್ಲಿ ಏನು ಕಾಲಾವಕಾಶವಿದೆಯೋ ಅಷ್ಟರೊಳಗಾಗಿ ಈ ದಿವಸ ಭೂ ಸುಧಾರಣೆಯನ್ನು ಜಾರಿಗೆ ತಂದು ಜನರಿಗೆ ನಿಜವಾಗಿ ಕೇವಲ ಮಾನಸಿಕವಾಗಿ ಸಮಾಧಾನ ಮಾಡುವುದಲ್ಲದೆ ಒಂದು ರೀತಿಯಾದಂಥ ಸೌಕರ್ಯಗಳನ್ನೂ ಅನುಕೂಲಗಳನ್ನೂ ಮಾಡಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನಪಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈಗ ನಮ್ಮ ಮುಂದೆ ಮತ್ತು ದೇಶದ ಮುಂದೆ ಬಹಳ ಪುರಾತನಕಾಲದಿಂದ ಬಂದಿರತಕ್ಕ ರೈತರು ಗಳಿಸಿರತಕ್ಕ ಹಕ್ಕನ್ನು ವಿಭಾಗವಾಡುವ ಮಸೂದೆಯನ್ನು ನಮ್ಮ ಮಾನ್ಯ ರೆವಿನ್ಯೂ ಸಚಿವರು ಬಹಳ ಚುರುಕಾಗಿ ಬುದ್ಧಿವಂತಿಕೆಯಿಂದ ತಂದಿದ್ದಾರೆ. ಇದಕ್ಕಾಗಿ ನಾನು ಅವರನ್ನು ತುಂಬ ಸ್ವಾಗತಿಸುತ್ತೇನೆ. ಆದರೆ ನಾವು ಇಲ್ಲಿ ಪಾಸ್ ಮಾಡತಕ್ಕ, ನಮ್ಮ ಮುಂದೆ ಈಗ ಇರತಕ್ಕ ಮಸೂದೆ ಬಗ್ಗೆ ನಾವು ಹೇಳತಕ್ಕ ಸಲಹೆ ಅಂಕಿ ಅಂಶಗಳ ಮೇಲೆ ಇದರ ಪರಿಣಾಮವೇನಾಗುತ್ತದೆಂದರೆ ನಿಜವಾಗಿಯೂ ದೇಶದ ಮುಂದೆ ಲ್ಯಾಂಡ್ ರಿಫಾರ್ಮ್ಸ್ ಮಾಡಬೇಕೆಂದು ಹೇಳತಕ್ಕ ವಾದಕ್ಕೆ ತಿರುಳಿಲ್ಲದಂತಾಗುತ್ತದೆ. ಅದಕ್ಕೆ ಅನೇಕ ಕಾರಣಗಳಿವೆ ಜಾಗ್ರತೆ ಈ ಲ್ಯಾಂಡ್ ರಿಫಾರ್ಮ್ಸ್‌ನ್ನು ದೇಶದಲ್ಲಿ ಜಾರಿಗೆ ತಂದು ಗೇಣೀದಾರರಿಗೆ, ಬಡವರಿಗೆ ಜಮೀನು ಹಂಚಬೇಕು ಎಂಬ ಶ್ರೀ ಕಡಿದಾಳ್ ಮಂಜಪ್ಪನವರ ಮನಸ್ಸಿನಲ್ಲಿರುವ ಭಾವನೆಯು ಖಂಡಿತವಾಗಿ ಈಡೇರುವುದಿಲ್ಲ. ಹೇಗೆಂದರೆ ಈಗ ಈ ಕಾಯಿದೆ ನಮ್ಮ ಸಲಹೆಗಳೊಡನೆ ಸೆಲೆಕ್ಟ್ ಕಮಿಟಿಗೆ ಹೋಗಿ ಆ ಕಮಿಟಿಯಲ್ಲಿ ನಮ್ಮ ಸಲಹೆಗಳೆಲ್ಲಾ ಚರ್ಚಿಸಿ ಆದರ ರಿಪೋರ್ಟ್ ಪುನಃ ಈ ಸಭೆಗೆ ಬಂದು ಇನ್ನೊಂದು ಸಾರಿ ಚರ್ಚೆಯಾಗಿ ಪಾಸಾದನಂತರ ಶ್ರೀ ರಾಜೇಂದ್ರ ಪ್ರಸಾದರಿಂದ ಸೈನಾಗಿ ಅನಂತರ ಆ ಕಾನೂನನ್ನು ದೇಶದಲ್ಲೆಲ್ಲಾ ಜಾರಿಗೆ ಕೊಡಬೇಕಾದರೆ ಸುಮಾರು ಇನ್ನೂ ಒಂದೂ ಒಂದೂವರೆ ವರ್ಷಗಳ ಕಾಲ ಬೇಕಾಗುತ್ತದೆ. ಅಷ್ಟು ಹೊತ್ತಿಗೆ ರೂಲ್ಸ್ ಮಾಡಿ ಜಾರಿಗೆ ಕೊಡುವಷ್ಟರಲ್ಲಿ ಜನರಲ್ ಎಲೆಕ್ಷನ್ ಹತ್ತಿರಕ್ಕೆ ಬರುತ್ತದೆ. ಆಗ ನಮ್ಮ ವಾದ ಸಂಪೂರ್ಣವಾಗುವುದಿಲ್ಲ ಇದೇನೆಂದರೆ ಪ್ಲಾನಿಂಗ್ ಕಮಿಷನ್ನಿನವರು ಈ ವಿಷಯದ ಬಗ್ಗೆ ತಗಾದೆ ಮಾಡುತ್ತಾ ಇರುವುದರಿಂದ ತಾತ್ಕಾಲಿಕವಾಗಿಯಾದರೂ ಈ ಲ್ಯಾಂಡ್ ರಿಫಾರಮ್ಸನ್ನು ಜನಗಳ ಮುಂದೆ ಇಟ್ಟು ಅವರನ್ನು ಸಮಾಧಾನ ಪಡಿಸೋಣ ಜನರನ್ನು ರಾಜಕೀಯ ವಾತಾವರಣಕ್ಕೆ ಎಳೆಯೋಣ ಎನ್ನುವ ಮನೋಭಾವನೆ ನಿಮಗೆ ಇದೆ. ಆದರೆ ನಿಮ್ಮ ರಾಜಕೀಯ ತಂತ್ರದಿಂದ ಲ್ಯಾಂಡ್ ರಿಫಾರಮ್ಸ್ ಸರಿಹೋಗುವುದಿಲ್ಲ. ಇಂತಹ ರಾಜಕೀಯ ತಂತ್ರದಿಂದ ವಿಪರೀತವಾಗಿ ದೇಶಕ್ಕೆ ಕಷ್ಟನಷ್ಟಗಳುಂಟಾಗಿ ನಿಮಗೆ ಹೆಚ್ಚಿನ ಶ್ರಮ ಕಷ್ಟಗಳು, ಹೆಚ್ಚಾಗಿ ಹಣ ವ್ಯಥಾ ವ್ಯಯವಾಗುತ್ತದೆ. ಸೆಂಟ್ರಲ್ ಪ್ಲಾನಿಂಗ್ ಕಮಿಷನ್ನಿಗೂ ಖರ್ಚು ಜಾಸ್ತಿಯಾಗುತ್ತದೆ. ಪ್ಲಾನಿಂಗ್ ಕಮಿಷನ್ನಿನವರೇ ಅಲ್ಲ, ಯಾರು ಈ ಭೂ ಸುಧಾರಣೆಯನ್ನು ಕಾನೂನು ರೂಪದಲ್ಲಿ ಮಾಡಿದರೂ ಅದನ್ನು ಜಾಗ್ರತೆ ಜಾರಿಗೆ ತರುವುದು ಅಷ್ಟು ಸುಲಭವಲ್ಲ. ಇವತ್ತಿನ ದಿವಸ ನಾವು 208 ಜನ ಈ ಮಸೂದೆಯನ್ನು ಇಲ್ಲಿ ಪಾಸ್ ಮಾಡಿದರೂ ಮುಂದೆ ಇದನ್ನು ಜಾರಿಗೆ ಕೊಟ್ಟು ದೇಶದಲ್ಲಿ ಕಾರ್ಯರೂಪಕ್ಕೆ ತರಬೇಕಾದರೆ ಬಹಳ ಜಟಿಲ ಪರಿಸ್ಥಿತಿ ಇದೆ. ಈಗಾಗಲೇ ನಿಮ್ಮ ನಿಮ್ಮಲ್ಲಿಯೇ ಭಿನ್ನಾಭಿಪ್ರಾಯಗಳುಂಟಾಗಿವೆ. ಆದರೆ ಈಗಿರತಕ್ಕದ್ದು ನಿಜವಾದ ಕಾಂಗ್ರೆಸ್ ಆದ ಪಕ್ಷದಲ್ಲಿ ಅವರಿಗೆ ಈ ಭೂಸುಧಾರಣೆಯನ್ನು ನಿಜವಾಗಿಯೂ ಜಾರಿಗೆ ತರಬೇಕೆಂಬ ಉದ್ದೇಶವಿದ್ದರೆ ಈ ಡಿಸೆಂಬರ್ ಒಳಗೇ ಜಾರಿಗೆ ತರಬೇಕು. ಹಾಗಿಲ್ಲದೇ ಇದ್ದ ಪಕ್ಷದಲ್ಲಿ ಕಾಂಗ್ರೆಸಿನವರು ವವರೆಲ್ಲರೂ ಕೂಡ ರಾಜೀನಾಮೆ ಕೊಡಬೇಕು. ಅದು ಬಿಟ್ಟು ನಮ್ಮ ಮುಂದೆ ಈ ಮಸೂದೆಯನ್ನು ತಂದು ಅದಕ್ಕೆ ನಮ್ಮಿಂದ 'ಅಸ್ತು' ಎಂದೆನಿಸಿ ನಿಮ್ಮಲ್ಲಿ ಅದನ್ನು ಆಪರೇಟ್ ಮಾಡುವ ಶಕ್ತಿ ಇಲ್ಲದಿದ್ದರೆ ಆಗ ದೇಶದಲ್ಲಿ ಈ ಭೂಸುಧಾರಣೆ ಹಕ್ಕನ್ನು ಬಹು ಕಾಲದಿಂದ ಉಳಿಸಿಕೊಂಡು ಬಂದಿರುವವರಿಗೆ ನೋವನ್ನುಂಟು ಮಾಡುತ್ತೀರಿ. ಈ ಮಧ್ಯದಲ್ಲಿ ನಡೆಯತಕ್ಕ ಟ್ರಾನ್ಸಾಕ್ಷನ್ಸ್ ಬಹಳ ಅವ್ಯವಸ್ಥೆಯಾಗಿ ದೇಶದಲ್ಲಿರತಕ್ಕ ಅನೇಕ ಗೇಣೀದಾರರಿಗೆ, ರೈತರಿಗೆ ವಿಶೇಷವಾಗಿ ತೊಂದರೆಗಳುಂಟಾಗುವುದಕ್ಕೆ ಅವಕಾಶವಾಗುತ್ತದೆ. ಹಾಗೆ ಮಾಡಬೇಡಿ. ನಿಜವಾಗಿ ಅದನ್ನು ಜಾಗ್ರತೆ ಅನುಷ್ಠಾನಕ್ಕೆ ತರುವುದಕ್ಕೆ ಖಡಾ ಖಂಡಿತವಾಗಿ ಪ್ರಯತ್ನ ಪಡುತ್ತೀರೆಂದು ನಂಬಿದ್ದೇನೆ. ಒಂದು ವೇಳೆ ಜನರಲ್ ಎಲೆಕ್ಷನ್ ಕಳೆದ ಮೇಲೆ ನೀವೇ ಪುನಃ ಅಧಿಕಾರಕ್ಕೆ ಬಂದರೆ ಆಗಲೂ ಕೂಡ ಈ ಕಾರ್ಯ ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೂ ಸಹ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಕೆಲವು ವಿಷಯಗಳನ್ನು ನಿಮ್ಮ ಮುಂದಿಡಬೇಕೆಂದಿಚ್ಛಿಸುತ್ತೇನೆ. ಮುಖ್ಯವಾಗಿ ಹಿಡುವಳಿಯ ಪರಮಾವಧಿಯ ಬಗ್ಗೆ ಸಕ್ಕರೆ ಕಾರ್ಖಾನೆಯಿರತಕ್ಕ ಫಾರಂಗಳಿಗೆ ಸರಿಹೊಂದುವಂಥ ಸೆಕ್ಷನ್ ಇಲ್ಲಿ ಕ್ಲಿಯರಾಗಿಲ್ಲ. ಮಂಡ್ಯ,—ಪಾಂಡವಪುರ ಏರಿಯಾ ಸಕ್ಕರೆ ಕಾರ್ಖಾನೆ ಫಾರಮ್ಮಿಗೆ ಸೇರುತ್ತದೆ. ಆದ್ದರಿಂದ ಹಿಡುವಳಿಯ ಪರಮಾವಧಿಯು ಮಂಡ್ಯ ಮತ್ತು ಪಾಂಡವ ಪುರಗಳ ಪ್ರದೇಶದಲ್ಲಿ ಕಬ್ಬು ಬೆಳೆಯುವ ರೈತರಿಗೂ ಈ ಕ್ಲಾಜು ಅನ್ವಯವಾಗುವುದೇ ಎಂದು ನಾನು ಕೇಳುತ್ತೇನೆ. ಅದನ್ನು ಅಲ್ಲಿ ಕ್ಲಿಯರಾಗಿ ಹೇಳಿಲ್ಲ. ಅದನ್ನು ಖಚಿತವಾಗಿ ತೀರ್ಮಾನ ಮಾಡಬೇಕಾಗಿದೆ. ಏಕೆಂದರೆ ಅಲ್ಲಿ ದೊಡ್ಡದೊಡ್ಡ ಜಮೀನ್ದಾರರಿದ್ದಾರೆ. ಆದರೆ ಆಕ್ಟ್

(ಶ್ರೀ ಎನ್. ಜಿ. ನರಸಿಂಹೇಗೌಡ)

ಪ್ರಕಾರ ಇದು ಅವರಿಗೆ ಅನ್ವಯಿಸುತ್ತದೆಂಬುದು ಗೊತ್ತಿಲ್ಲ. ಇದನ್ನು ಹ್ಯಾಂಡಲ್ ಮಾಡುವುದಕ್ಕೆ ಇದರಲ್ಲಿ ಅವಕಾಶವಿಲ್ಲವೆಂದು ನಾನು ತಿಳಿಯುತ್ತೇನೆ. ಇದನ್ನು ಕ್ಲಿಯರಾಗಿ ಹೇಳಬೇಕು.

ಇನು ರಿಯಾಯಿತಿ ವಿಷಯ. ಅದನ್ನು ನಾನು ತುಂಬಾ ಸ್ವಾಗತಿಸುತ್ತೇನೆ. ಕಾಫಿ ಬೆಳೆಯನ್ನು ಬೆಳೆಸಬೇಕಾದರೆ ಕಾಫಿ ತೋಟದವರಿಗೆ ಬಹಳ ಕಷ್ಟವಾಗುತ್ತದೆ. ರೈತರು 10-20 ವರ್ಷಗಳವರೆಗೂ ಅದನ್ನು ಬೆಳೆಸಿ ಸಾಕಿ ಅದರಿಂದ ಫಲ ತೆಗೆದುಕೊಳ್ಳುವುದು ಬಹಳ ಕಠಿಣ ಸಮಸ್ಯೆ. ನಿಜವಾಗಿ ತೋಟದಲ್ಲಿ ಅಡಿಕೆ ಮತ್ತು ತೆಂಗನ್ನು ಬೆಳೆಯತಕ್ಕ ರೈತ ಅದನ್ನು ಬೆಳೆಸಿಕೊಂಡು ಬರಬೇಕಾದರೆ ನಿಜವಾದ ಶ್ರದ್ಧೆ ಬೇಕು. ತೋಟ ಬೆಳೆಸತಕ್ಕ ರೈತ ಎಷ್ಟು ಸಾಲ ಮಾಡಿದ್ದಾನೆ, ಅವನು ಎಷ್ಟು ಕಷ್ಟಪಟ್ಟಿದ್ದಾನೆ ಎನ್ನುವ ಬಗ್ಗೆ ನಿಜವಾದ ಅಂಕಿ ಅಂಶಗಳನ್ನು ತಿಳಿದುಕೊಳ್ಳಲು ಜತ್ತಿ ಸಮಿತಿಯವರು ಅಂತಹ ಕಡೆ ಹೋಗಿ ರೈತರನ್ನು ನಿಮ್ಮ ಆದಾಯ, ವೆಚ್ಚ ಏನಾಗಿದೆಯೆಂಬುದನ್ನು ಕೇಳಿದ್ದರೆ ಅವರಿಗೆ ಎಲ್ಲಾ ವಿಷಯವೂ ಚೆನ್ನಾಗಿ ಅರ್ಥವಾಗುತ್ತಿತ್ತು.

**Mr. SPEAKER.**—The House will now rise and meet again after half an hour.

---

*The House adjourned for Lunch at Ten of the Clock and re-assembled at Thirty Minutes past Ten of the Clock.*

---

[MR. DEPUTY SPEAKER in the Chair]

**Sri Kadidal MANJAPPA.**—Sir, with your permission I have got to make a submission. Repeatedly members on the other side were telling the House that the Central Land Reforms Committee had not recommended for the exemption of areca and cocoanut plantations. In the note circulated it is clear that the Central Land Reforms Committee had suggested that areca and cocoanut, as far as existing holdings are concerned, should be exempted. I will read the recommendation.

> "The existing areca, cocoanut and cardamom plantations under personal cultivation should also be exempted from the operation of the ceiling, but if there are any tenants in plantations where areca, cocoanut and cardamom are grown such tenants should get all the rights under the Act including ownership of non-resumable extent."

**ಶ್ರೀ ಎನ್. ಜಿ. ನರಸಿಂಹೇಗೌಡ.**—ರಿಯಾಯಿತಿ ವಿಷಯದಲ್ಲಿ, ಬಹುಶಃ ಅಷ್ಟೇ ಅಲ್ಲದೇನೆ ರೈತರಿಗೆ ಬಹು ಮುಖ್ಯವಾದ ಪ್ಲಾಂಟೇಷನ್ ವಿಚಾರದಲ್ಲಿ ಕೆಲವನ್ನು ಕೈಬಿಟ್ಟಿದ್ದೀರಿ. ಅದನ್ನು ನಾನು ಹಿಂದೆ ಜತ್ತಿ ಸಮಿತಿ ವರದಿಯಮೇಲೆ ಮಾತನಾಡುವಾಗ ಹೇಳಿದ್ದೆ. ಆದರೂಕೂಡ ಏಕೆ ಹೀಗೆ ಮಾಡಿದ್ದಾರೋ ಏನೋ. ನೀವು ಭೂ ಸುಧಾರಣೆ ಮಾಡುವಾಗ ಅನುಸರಿಸುವ ನೀತಿಯಾದರೂ ಏನು? ದೇಶದಲ್ಲಿ ಆಹಾರ ಪದಾರ್ಥಗಳ ಉತ್ಪತ್ತಿ ಜಾಸ್ತಿಯಾಗಬೇಕು, ಎಲ್ಲರಿಗೂ ಜಮೀನು ಸಿಕ್ಕಬೇಕು ಎಂಬುದು ತಮ್ಮ ಉದ್ದೇಶವಲ್ಲವೇ! ಆದರೆ ಈಗ ವಿನಾಯಿತಿ ಮಾಡಿರುವುದರಲ್ಲಿ ತೋರಿಸಿರುವುದೆಲ್ಲಾ ಫೈನಾನ್ಷಿಯಲ್ ಕ್ರಾಪ್ಸ್; ಅದರಲ್ಲಿ ಹುಣಿಸೆಮರ, ಮಾವಿನ ಮರ, ಹಣ್ಣಿನ ಮರ ಇರುವ ಪ್ರದೇಶಗಳನ್ನು ತೋರಿಸಿಲ್ಲ, ಹಣ್ಣಿನ ಮರಗಳಿರುವ ಪ್ರದೇಶಕ್ಕೂ ರಿಯಾಯಿತಿ ತೋರಿಸಬೇಕಾಗಿತ್ತು. ರೈತರಿಗೆ ಈ ದಿವಸ 3,600 ರೂಪಾಯಿ ವರಮಾನವಿರುವ ಜಮೀನನ್ನು ಮಾತ್ರ ಬಿಟ್ಟಿದ್ದೀರಿ. ಅದೇ ದೃಷ್ಟಿಯಿಂದ ರೈತರಿಗೆ ಭೂಮಿ ಎಷ್ಟು ಅವಶ್ಯಕವೋ ಉಳಲು ಬೇಕಾದ ದನಗಳೂ ಸಹ ಅಷ್ಟೇ ಆವಶ್ಯಕ ಎಂಬುದನ್ನು ಸರ್ಕಾರದವರು ಮರೆತಿದ್ದಾರೆ. ನಮ್ಮಲ್ಲಿ ಇಂದಿನ ದಿವಸ ಎಷ್ಟು ಪ್ರಜಾ ಸಂಖ್ಯೆಯಿದೆಯೋ ಅಷ್ಟೇ ದನಗಳಿದ್ದರೆ ಒಳ್ಳೆಯದು. ಅವು ಉಳುಮೆಗೆ ಬೇಕಾಗುತ್ತವೆ; ರೈತಾಪಿ ಜನರಿಗೆ ಅವುಗಳ ಅವಶ್ಯಕತೆ ಹೆಚ್ಚು. ಇಂಡಿಯಾ ದೇಶದಲ್ಲಿ ದನಗಳನ್ನು ಬಿಟ್ಟು ಮೆಷಿನರಿಯಿಂದ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮಲ್ಲಿ ಜಮೀನುಗಳು ತುಂಡು ತುಂಡಾಗಿವೆ, ದೊಡ್ಡ ಪ್ಲಾಟನ್ನು ಸಾಧಾರಣವಾಗಿ ಅನೇಕರು ಇಟ್ಟುಕೊಂಡಿಲ್ಲ. ಈ ಭೂ ಸುಧಾರಣೆ ಜಾರಿಗೆ ಬಂದು ಎಲ್ಲರೂ ಭೂ ಒಡೆಯರಾಗಬೇಕಾದರೆ ದನಗಳು ಕಡ್ಡಾಯವಾಗಿ ಇರಲೇಬೇಕು. ಮನುಷ್ಯರಿಗೆ ಜೀವನಕ್ಕೆ 3,600 ರೂಪಾಯಿಗಳ ವರಮಾನವಿರುವ ಪ್ರದೇಶ ಹೇಗೆ ಬೇಕೋ ಹಾಗೆ ಅಷ್ಟೇ ಪ್ರಮಾಣದಲ್ಲಿ ರೈತರಿಗೆ ದನಗಳ ಸಂಖ್ಯೆಯನ್ನೂ ಒದಗಿಸಲೇಬೇಕಾಗಿದೆ. ಈ ದಿವಸ ನಿಜವಾಗಿಯೂ ನಾನು ಇದನ್ನು ಸುಮ್ಮನೆ ಹೇಳುತ್ತಿಲ್ಲ, ಅಂಕಿ ಅಂಶಗಳ ಆಧಾರದಮೇಲೆ, ಅನುಭವದಮೇಲೆ ಹೇಳುತ್ತಿದ್ದೇನೆ. ರೈತನ ಜಮೀನಿನ ಹತ್ತಿರ ಹೋಗಿ ನೋಡಿದರೆ ಅವನಿಗೆ ಸಾಕಷ್ಟು ಗೋಮಾಳವಿಲ್ಲ. ಸುಮಾರು ಹತ್ತು ಎಕರೆ ವ್ಯವಸಾಯದ ಪ್ರದೇಶವಿದ್ದರೆ ಎರಡು ಎಕರೆ ಪ್ರದೇಶವನ್ನು ಹಿಂದೆ ದನಗಳಿಗಾಗಿ ಪಡೆಯುತ್ತಿದ್ದರು. ಇವತ್ತಿನ ದಿವಸ ದೇಶದಲ್ಲಿ ಪ್ರಜಾಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಹೆಚ್ಚು ಆಹಾರ ಬೆಳೆಯಬೇಕಾಗಿದೆ. ರೈತನು ಭೂಮಿಯಲ್ಲಿ ಉಳುಮೆಮಾಡುವುದಕ್ಕೆ ದನಗಳು ಬೇಕು. ಈ ಮಸೂದೆಯಲ್ಲಿ ದನಗಳಗೋಸ್ಕರ ಹುಲ್ಲುಗಾವಲಿಗಾಗಿ ಭೂಮಿಯನ್ನು ಬಿಡಬೇಕೆಂದು ಎಲ್ಲಿಯೂ ಹೇಳಿಲ್ಲ. ಅದಕ್ಕಾಗಿ ನಿಯಮಾವಳಿಗಳು ಇಲ್ಲ. ಜನಗಳ ಹಿತದೃಷ್ಟಿಯನ್ನು ನೋಡಿದ್ದಾರೆಯೇ ವಿನಾ ದನಗಳನ್ನು ಮರೆತುಬಿಟ್ಟಿದ್ದಾರೆ. ಆಹಾರ ಉತ್ಪತ್ತಿಗೆ ದನಗಳ ಅವಶ್ಯಕತೆಯಿದೆ. ದನಗಳ ಸಲುವಾಗಿ ಭೂಮಿಯನ್ನು ಮೀಸಲಾಗಿ ಇಡದೆ ಹೋದ ಪಕ್ಷದಲ್ಲಿ, ಯಾವದೇ ರಿಯಾಯಿತಿ ಕೊಡದೆ ಇದ್ದಪಕ್ಷದಲ್ಲಿ, ಕೆಲವಾರು ವರ್ಷಗಳಲ್ಲಿ ರೈತ ದನಗಳನ್ನು ಸಾಕುವುದು ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸರ್ವೆ ಮಾಡಬೇಕಾಗಿದೆ. ನಿಜವಾಗಿಯೂ ದನಗಳಿಗೋಸ್ಕರ ಕೆಲವು ಜಮೀನು ಬಿಡಬೇಕು. ಒಟ್ಟು 3,600 ರೂಪಾಯಿ ಉತ್ಪತ್ತಿ ಬರತಕ್ಕ ಭೂಮಿ

ಯಲ್ಲಿ 1,200 ರೂಪಾಯಿ ಬರತಕ್ಕ ಭೂಮಿಯನ್ನು ದನಗಳಿಗೋಸ್ಕರ ಇಡಬೇಕು. ರೈತನ ಹಿತದೃಷ್ಟಿಯಿಂದಲೇ ಇದನ್ನು ಮಾಡಬೇಕಾಗಿದೆ. ಈ ವಿಚಾರ ಪ್ಲಾನಿಂಗ್ ಕಮಿಷನ್ ಅವರಿಗೆ ಗೊತ್ತಿಲ್ಲ, ಯಾಕೆಂದರೆ ಅವರು Book worm ಆಗಿದ್ದಾರೆ. ನಾವು ನಿಜವಾಗಿಯೂ ಭೂಮಿಯಲ್ಲಿ ಕೆಲಸಮಾಡತಕ್ಕಂಥ ರೈತರು ಈ ಸಲಹೆಯನ್ನು ಕೊಡುತ್ತೇವೆ. ನಿಜವಾಗಿಯೂ ರೈತನು ಮುಂದಕ್ಕೆ ಹೇಗೆ ಬರಬೇಕು ಎನ್ನುವುದನ್ನು ತಿಳಿದುಕೊಂಡು ಹೇಳತಕ್ಕವರು ನಾವು ಆಗಿದ್ದೇವೆ. ಆಹಾರ ಬೆಳೆಯತಕ್ಕವನು ರೈತನು. ರೈತನಿಗೆ ಬೀಜ, ಗೊಬ್ಬರ, ದನಗಳ ಸಹಾಯ ಬೇಕಾಗುತ್ತದೆ. ಕೇವಲ ಯಂತ್ರೋಪಕರಣಗಳಿಂದ ಕೆಲಸಮಾಡಲು ಆಗುವುದಿಲ್ಲ. ಆದುದರಿಂದ ಒಟ್ಟು ಭೂಮಿಯ ಮೂರರಲ್ಲಿ ಒಂದು ಪಾಲು ಭೂಮಿಯನ್ನು ದನಗಳಿಗೋಸ್ಕರ ಮೀಸಲಾಗಿಡಬೇಕು. ಹಾಗೆ ಮಾಡದೇ ಇದ್ದ ಪಕ್ಷದಲ್ಲಿ ಇನ್ನು ಹತ್ತು ವರ್ಷಗಳಲ್ಲಿ ವ್ಯವಸಾಯವು ಫೇಲ್ ಆಗುತ್ತದೆ. ದನಗಳನ್ನು ಕಾಪಾಡಲು ರೈತನಿಗೆ ಕಷ್ಟವಾಗುತ್ತದೆ. ಈ ಅಂಶವನ್ನು ಸೆಲೆಕ್ಟ್ ಕಮಿಟಿಯಲ್ಲಿ ಯೋಚನೆ ಮಾಡಬೇಕು. 1.200 ರೂಪಾಯಿ ಉತ್ಪತ್ತಿ ಬರತಕ್ಕ ಭೂಮಿಯನ್ನು ದನಗಳಿಗೋಸ್ಕರ ಕಾದಿರಿಸಿ, 3,600 ರೂಪಾಯಿಗಳ ಬದಲು 4,800 ರೂಪಾಯಿ ಮಿತಿಯನ್ನು ಇಡಬೇಕು. ದನಗಳನ್ನು ಮೇಯಿಸುವುದಕ್ಕೋಸ್ಕರ ಭೂಮಿಯನ್ನು ಇಡುವುದಕ್ಕಾಗಿ ಕಾನೂನಿನಲ್ಲಿ ವ್ಯವಸ್ಥೆಮಾಡಬೇಕು.

ಇನ್ನು ಪರಮಾವಧಿ ಮಿತಿ 3,600 ರೂಪಾಯಿ ಎಂದು ಮಸೂದೆಯಲ್ಲಿ ಏರ್ಪಾಡುಮಾಡಿದೆ. ಒಂದು ಎಕರೆ ಭೂಮಿಯಲ್ಲಿ ಮೂರು ಪಲ್ಲಾ ಬೆಳೆಯುತ್ತದೆ ಎನ್ನುವುದನ್ನು ರೈತ ಒಪ್ಪುವುದಕ್ಕಾಗುವದಿಲ್ಲ. ಊರ ಹತ್ತರವಿದ್ದ ಭೂಮಿಯಲ್ಲಿ ಸ್ವಲ್ಪ ಹೆಚ್ಚಾಗಿ ಬೆಳೆಯಬಹುದು. ಮೂರು ನಾಲ್ಕು ಪಲ್ಲಾ ಆಗಬಹುದು; ಆದರೆ ದೂರವಿದ್ದ ಭೂಮಿಯಲ್ಲಿ ಒಂದೆರಡು ಪಲ್ಲಾಕ್ಕಿಂತ ಜಾಸ್ತಿ ಬರುವುದಿಲ್ಲ. ಖುಷ್ಕಿ ಜಮೀನಿನಲ್ಲಿ ಜಾಸ್ತಿ ಬೆಳೆಯುವುದಕ್ಕೆ ಅವಕಾಶವಿಲ್ಲ. ಯಾವ ಭೂಮಿಗೆ ನೀರು ನೇರವಾಗಿ ಬರುತ್ತದೆಯೋ ಯಾವ ರೈತನ ಹತ್ತರ ಹೆಚ್ಚಾಗಿ ದನಗಳು ಇವೆಯೋ ಅಂಥಲ್ಲಿ ಹೆಚ್ಚು ಬೆಳೆಯಬಹುದು. ಆದರೆ ನೀರು ಸರಿಯಾಗಿ ಬರದೇ ಇರುವ ದೂರವಿರುವ ಭೂಮಿಯಲ್ಲಿ ಯಾವ ಸಹಾಯ ಸೌಕರ್ಯಗಳೂ ಇಲ್ಲದೇ ಇರತಕ್ಕ ರೈತ ಸರಾಸರಿ ಹತ್ತು ಪಲ್ಲಾಕ್ಕಿಂತ ಜಾಸ್ತಿ ಬೆಳೆಯುವುದಕ್ಕಾಗುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಉದಾಹರಣೆಗಾಗಿ ನಾನು ಹಾಗೆ ಹೇಳಿದ್ದೇನೆ. Average yield ಇಷ್ಟೇ ಆಗುತ್ತದೆಂದು ಅದರ ಅರ್ಥವಲ್ಲ. ಉದಾಹರಣೆ ರೂಪವಾಗಿ ಅದನ್ನು ಹೇಳಿರುವದರಿಂದ ಅದಕ್ಕೆ ಹೆಚ್ಚು ಮಹತ್ವ ಕೊಡಬೇಕಾಗಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇದೇ ಆಧಾರವನ್ನು ಇಟ್ಟುಕೊಂಡು ಕೆಲಸಮಾಡುವ ಪಕ್ಷದಲ್ಲಿ ರೈತರಿಗೆ ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆಮಾಡಿ ಖಚಿತವಾಗಿ ತೀರ್ಮಾನ ಮಾಡಬೇಕಾಗಿದೆ. ಸರಾಸರಿ ಹತ್ತು ಪಲ್ಲಾ ಎಂದು ಇಟ್ಟುಕೊಳ್ಳಬೇಕು.

ಡಾ|| ಆರ್. ನಾಗನಗೌಡ (ಹೊಸಪೇಟೆ).—ಸೀಲಿಂಗನ್ನು ಇನ್‌ಕಂಮೇಲೆ ಇಟ್ಟುಕೊಳ್ಳಬೇಕೋ ಅಥವಾ ಭೂಮಿಯಮೇಲೆ ಇಡಬೇಕೋ ಎಂಬುದಕ್ಕೆ ನಿಮ್ಮ ಅಭಿಪ್ರಾಯ ಏನು ಹೇಳುತ್ತೀರಿ ?

ಶ್ರೀ ಎನ್. ಜಿ. ನರಸಿಂಹೇಗೌಡ.—ಅದನ್ನು ಆ ಮೇಲೆ ಹೇಳುತ್ತೇನೆ. ಪರಮಾವಧಿ ಮಿತಿಯನ್ನು ಸಾಮಾನ್ಯವಾಗಿ ವೈಯಕ್ತಿಕವಾಗಿ ವಿರೋಧಿಸಬೇಕಾಗುತ್ತದೆ. ಇದರಲ್ಲಿ ಬಹಳ ಕೈವಾಡವಿದೆ. 180 ಎಕರೆ ಭೂಮಿ ಬಹಳ ಕಡಮೆಯಾಗುತ್ತದೆ ಈ ಅಂಶವನ್ನು ಪರಿಶೀಲಿಸಬೇಕಾಗಿದೆ. ಇಲ್ಲದೇ ಇದ್ದರೆ ರೈತನಿಗೆ ಬಹಳ ಕಷ್ಟವಾಗುತ್ತದೆ. 3,600 ರೂಪಾಯಿ ಪರಮಾವಧಿ ಆದಾಯ ಇಟ್ಟುಕೊಳ್ಳಬೇಕೆಂದು ಪ್ಲಾನಿಂಗ್ ಕಮಿಷನ್ ಅವರು ಸೆಂಟ್ರಲ್ ಲ್ಯಾಂಡ್ ರಿಫಾರ್ಮ್ಸ್ ಕಮಿಟಿಯವರು ಯಾವ ರೈತನ ಕಡೆ ಹೋಗಿ ಕೇಳಿಕೊಂಡು ಸಲಹೆ ಕೊಟ್ಟಿದ್ದಾರೋ ಗೊತ್ತಿಲ್ಲ. ಯಾವ ಆಧಾರವನ್ನು ಇಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಇದನ್ನು ಯೋಚನೆ ಮಾಡಬೇಕು. ಒಂದು ಸಂಸಾರದಲ್ಲಿ ಐದು ಜನ ಇರುತ್ತಾರೆ. ಒಬ್ಬನು ಇಂಜನಿಯರಾಗಿರುತ್ತಾನೆ. ಒಬ್ಬನು ಬಿಸಿನೆಸ್ ಮಾಡುತ್ತಾನೆ. ಒಬ್ಬನು ಮಿಲ್ ಓನರ್ ಆಗಿರುತ್ತಾನೆ. ಇನ್ನೊಬ್ಬನು ಮನಿಲೆಂಡರ್ ಆಗಿರುತ್ತಾನೆ. ನಾಲ್ಕು ಜನರು ಹೊರಗೆ ಇದ್ದು ಸಾವಿರಾರು ರೂಪಾಯಿ ಸಂಪಾದನೆ ಮಾಡುತ್ತಾರೆ. ಪರಮಾವಧಿ ಜಮೀನು ಎಷ್ಟು ಇರಬೇಕು ? 3,600 ರೂಪಾಯಿಗಳ ಸೀಲಿಂಗ್‌ಅನ್ನು ಫಿಕ್ಸ್ ಮಾಡಿದ ಪಕ್ಷದಲ್ಲಿ ಬರೀ ಜಮೀನನ್ನೇ ನಂಬಿಕೊಂಡಿರುವವರು ಸಫರ್ ಮಾಡಬೇಕಾಗಿರುತ್ತದೆ. ನಾಲ್ಕು ಜನ ಜೊತೆಗೆ ಇದ್ದುಕೊಂಡಿರುವವರಿಗೆ ರಿಯಾಯಿತಿ ಸಿಕ್ಕಿದ ಹಾಗಾಗುತ್ತದೆ. ನೀವು ಮಾಡಿದ ಆಕ್ಟ್ ಎಷ್ಟರ ಮಟ್ಟಿಗೆ ಸ್ಟ್ಯಾಂಡರ್ಡ್ ಆಗಿರುತ್ತದೆ ? ನಿಜವಾಗಿಯೂ ದೇಶದಲ್ಲಿರತಕ್ಕ ಜನಗಳು ಎಷ್ಟು ಹಿಂಸೆ ಪಡುತ್ತಿದ್ದಾರೆ, ಅದನ್ನು ನಾವು ನೋಡಬೇಕಾಗಿದೆ. ನಿಜವಾಗಿಯೂ ಪ್ಲಾನಿಂಗ್ ಕಮಿಷನಿನವರು ಇದನ್ನು ಪರಿಶೀಲಿಸಬೇಕು. ನಾಲ್ಕು ಜನ ಬಿಟ್ಟು ಒಬ್ಬನಿಗೋಸ್ಕರ 3,600 ರೂಪಾಯಿಗಳ ಸೀಲಿಂಗ್ ಮಾಡುವುದು ಸರಿಯಲ್ಲ. ಒಂದು ಫ್ಯಾಮಿಲಿಯಲ್ಲಿ ಇರತಕ್ಕಂಥ ಜಮೀನ್ದಾರನಿಗೆ ಸೀಲಿಂಗ್ ಹಾಕುತ್ತೀರಿ. ಇದು ಯಾವ ನ್ಯಾಯ ? ರೈತ ಬರೀ 3,600 ರೂಪಾಯಿಗಳಿಂದ ತನ್ನ ಮಗನಿಗೆ ಯಾವರೀತಿ ವಿದ್ಯಾಭ್ಯಾಸ ಮಾಡುವುದಕ್ಕಾಗುತ್ತದೆ ? ಆತನ ಮಗನ ಟೆಕ್ನಿಕಲ್ ಎಜುಕೇಷನ್ನಿಗೆ ಏನು ಪ್ರೊವೈಡ್ ಮಾಡಿದ್ದೀರಿ ? ಲಕ್ಷಾಂತರ ರೂಪಾಯಿಗಳ ಮನೆ ಬಾಡಿಗೆ ಬರುವವರಿದ್ದಾರೆ. ಫ್ಯಾಕ್ಟರಿಗಳು ಇರತಕ್ಕವರು ಇದ್ದಾರೆ. ಮಿಲ್ ಓನರ್ಸ್ ಇದ್ದಾರೆ. ಮನಿಲೆಂಡರ್ಸ್ ಇದ್ದಾರೆ, ಇವರುಗಳು ವರ್ಷಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ದುಡಿದುಕೊಂಡು ಬಿಟ್ಟು ಸುಖವಾಗಿರುವಾಗ, ರೈತ ಕಷ್ಟಪಟ್ಟು ಕೆಲಸಮಾಡಿ ಸಂಪಾದಿಸತಕ್ಕ ಆದಾಯಕ್ಕೆ ಯಾತಕ್ಕೆ ಪರಿಮಿತಿ ಇಟ್ಟಿದ್ದೀರಿ ? ಲ್ಯಾಂಡ್ ರಿಫಾರ್ಮ್ ಕಮಿಟಿಯಲ್ಲಿ ಸರಿಯಾದ ರೈತ ಇದ್ದ ಪಕ್ಷದಲ್ಲಿ ಬೇರೆಕಡೆ ಒಂದು ಸೀಲಿಂಗ್ ತಂದು ಜಮೀನಿನ ಮೇಲೆ ಸೀಲಿಂಗ್ ತರುತ್ತಿದ್ದರು. ಹಾಗಿಲ್ಲದೆ ಕಷ್ಟಪಡತಕ್ಕ ರೈತನಮೇಲೆ ಸೀಲಿಂಗ್ ತಂದು ಬೇರೆ ರೀತಿಯಿಂದ ದುಡಿದು ಸುಖಪಡತಕ್ಕವನಿಗೆ, ಕಾರಿನಲ್ಲಿ ಓಡಾಡತಕ್ಕವನಿಗೆ ಸೀಲಿಂಗ್ ತರುತ್ತಾ ಇಲ್ಲ. ಇದು ನಾಚಿಕೆಗೇಡು. ನಿಮಗೆ ಏತಕ್ಕೆ ಸರ್ಕಾರದ ನಿರ್ವಹಣೆ ? ನಿಜವಾಗಿ ಬಿಟ್ಟುಬಿಡಿ. ದೇಶ ಹಾಳಾಗಿ ಹೋಗುತ್ತಿದೆ. ನಿಮಗೆ ಧೈರ್ಯವಿಲ್ಲದಪಕ್ಷದಲ್ಲಿ ಸೆಂಟ್ರಲ್ ಗೌರ್ನಮೆಂಟಿಗೆ ವಹಿಸಿಬಿಡಿ. ಮಂತ್ರಿಗಳಿಗೆ ಸರಿಯಾದ ವಿವೇಚನೆ ಇಲ್ಲದಪಕ್ಷದಲ್ಲಿ ಬಿಟ್ಟುಬಿಡಿ. ಡೆಮಾಕ್ರಸಿ, ಡೆಮಾಕ್ರಸಿ ಎಂದು ಹೇಳುತ್ತೀರಿ.

(ಶ್ರೀ ಎನ್. ಜಿ. ನರಸಿಂಹೇಗೌಡ)

ಇತರರು ಬಾಳುವೆಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಪ್ರತಿಯೊಬ್ಬರೂ ಹಿಟ್ಲರ್ ಆಗಬೇಕು ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡು ದೇಶವನ್ನು ಉದ್ಧಾರಮಾಡಬೇಕು, ನಮ್ಮನ್ನು ಬಿಟ್ಟರೆ ಬೇರೆ ಯಾರೂ ಗತಿಯಿಲ್ಲ ಎಂದು ಹೋಗತಕ್ಕದ್ದು ಅನ್ಯಾಯ. ಲ್ಯಾಂಡ್ ಸೀಲಿಂಗನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇತರರಮೇಲೂ ಸೀಲಿಂಗ್ ತನ್ನಿ. ಇತರರು ಸುಖಪಡುತ್ತಾ ಇರುವುದು, ರೈತ, ಮನಿಲೆಂಡರ್ಸ್, ಮಿಲ್ ಓನರ್ಸ್ ಹತ್ತಿರ ಹೋಗಿ ನನ್ನ ಜಮೀನನ್ನು ಆಧಾರಮಾಡುತ್ತೇನೆ, ಆಸ್ತಿ ಒತ್ತೇ ಮಾಡುತ್ತೇನೆ, ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ದುಡ್ಡು ಕೊಡಿ ಎಂದು ಭಿಕ್ಷಾಟನೆ ಹೋಗಿ ಯಾತ್ರೆಮಾಡುವಹಾಗೆ ಮಾಡಿದ್ದೀರಿ. ಹಾಗಾದರೆ ಜನಗಳ ಗತಿ ಏನು? ಶ್ರೀ ಕಡಿದಾಳ್ ಮಂಜಪ್ಪನವರೂ ರೈತರು. ಅವರು ನಿಜವಾಗಿಯೂ ಸಿನ್ಸಿಯರ್ ಆಗಿದ್ದ ಪಕ್ಷದಲ್ಲಿ ಎಲ್ಲರಮೇಲೆಯೂ ಸೀಲಿಂಗ್ ತರಲಿ, 3,600 ರೂಪಾಯಿಗಳಜೊತೆಗೆ ತಿಂಗಳಿಗೆ ಕೆಲವರು ಸಾವಿರಾರು ರೂಪಾಯಿಗಳನ್ನು ದುಡಿದು ಬಿಟ್ಟು ಅವರ ಮಕ್ಕಳಿಗೆ ಟೆಕ್ನಿಕಲ್ ಎಜುಕೇಷನ್, ಫಾರಿನ್ ಎಜುಕೇಷನ್ ಕೊಡಿಸುತ್ತಿದ್ದಾರೆ, ತಮ್ಮ ಮನೆಯಲ್ಲಿ ಕಾರು, ರೇಡಿಯೋ ಇಟ್ಟುಕೊಂಡು ಮಜಾಮಾಡುತ್ತಿದ್ದಾರೆ. ಅವರನ್ನು ಕೇಳುವವರೇ ಇಲ್ಲ. ಬರೀ ಜಮೀನು ಇಟ್ಟುಕೊಂಡಿರುವ ರೈತನಿಗೆ 3,600 ರೂಪಾಯಿ ಪರಿಮಿತಿಯನ್ನು ತಂದಿದ್ದೀರಿ. ಇಂಥಾ ಕೆಟ್ಟ ಮನೋಭಾವನೆಯನ್ನು ನಾವು ಎಲ್ಲೂ ನೋಡಿಲ್ಲ. ಬೇಕಾದರೆ ಯೂನಿಫಾರಂ ಆಗಿ ಬಾಕಿಯವರ ಮೇಲೂ ಸೀಲಿಂಗ್ ತನ್ನಿ. ನೀವು ರೈತನನ್ನೇ ಒಂದು ಗ್ರೂಪಾಗಿ ಮಾಡಿ ವರ್ತಿಸಿದ್ದೀರಿ. ಆ ರೀತಿ ನೀವು ಒಂದು ಮನೋಭಾವನೆಯನ್ನು ಇಟ್ಟುಕೊಂಡಹಾಗೆ ಕಾಣುತ್ತದೆ. ಇವೊತ್ತಿನ ದಿವಸ ಕೇರಳದ ಪರಿಸ್ಥಿತಿ ಹೇಗೆ ಆಯಿತೋ ಹಾಗೆಯೇ ಇಲ್ಲಿಯೂ ಕಾಂಗ್ರೆಸ್‌ನವರು ಅನ್ಯಾಯ ಮಾಡುತ್ತಿದ್ದಾರೆ ಎಂದು ಅವರನ್ನು ಬೀದಿಯಲ್ಲಿ ಹಿಡಿದುಕೊಂಡು ಹೊಡೆಯುವ ಪರಿಸ್ಥಿತಿ ಮಾಡಿಕೊಳ್ಳಬೇಡಿರಿ. ರೈತ ಬಹಳ ಕಷ್ಟಪಡುವವನು. ಅವನು ಮೂಕ. ತನ್ನ ಕಷ್ಟವನ್ನು ಹೇಳಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವವನು. ಅಂಥವನಮೇಲೆ ನೀವು ಸೀಲಿಂಗ್ ಹಾಕಿದಪಕ್ಷದಲ್ಲಿ ಅವನು ನಿಮ್ಮ ಮನೆಯಮುಂದೆ ಬಂದು ಸತ್ಯಾಗ್ರಹ ಮಾಡುತ್ತಾನೆಯೇ? ಎಷ್ಟು ಜನ ರೈತರು ನಿಮ್ಮ ಮನೆಯಮುಂದೆ ಬಂದು ಸತ್ಯಾಗ್ರಹ ಮಾಡಿದ್ದಾರೆ? ಈ ಬಿಲ್ಲಿನಲ್ಲಿ ಪ್ರೊವೈಡ್ ಮಾಡಿರತಕ್ಕ ಅಂಕಿ ಅಂಶಗಳಲ್ಲಿ ಲೋಪದೋಷಗಳು ಎಷ್ಟು ಎಂಬುದನ್ನು ಎಷ್ಟು ಜನ ಎತ್ತಿ ತೋರಿಸಿದ್ದಾರೆ? ಹಿಂದೆ ಹಣ್ಣಿನಮೇಲೆ ತೆರಿಗೆ ಹಾಕಿದಾಗ ಎಷ್ಟು ಜನ ಹಣ್ಣು ಮಾರುವವರು ಶ್ರೀ ಮರಿಯಪ್ಪನವರಲ್ಲಿಗೆ ನಿಯೋಗ ಬಂದು ತೆರಿಗೆಯ ರಿಯಾಯಿತಿ ಪಡೆದುಕೊಂಡರು? ತೆಂಗಿನಕಾಯಿಯಮೇಲೆ ಸುಂಕ ಹಾಕಬೇಡಿ ಎಂದು ಎಷ್ಟು ಜನ ಕೇಳಲಿಲ್ಲ? ಆದ್ದರಿಂದ ನಾನು ಹೇಳತಕ್ಕದ್ದು ಈ ಬಿಲ್ಲಿನಲ್ಲಿ ಕ್ಲಿಯರ್ ಆಗಿ ಬರೆಯಬೇಕು. ಒಂದು ಫ್ಯಾಮಿಲಿಯಲ್ಲಿರತಕ್ಕ ಜಮೀನಿಗೆ ಸರಿಯಾಗಿ ಮ್ಯಾಗ್ಸಿಮಮ್ ಫಿಕ್ಸ್ ಮಾಡುವಾಗ ಆ ಫ್ಯಾಮಿಲಿಯಲ್ಲಿರತಕ್ಕ ಐದು ಜನಗಳಪೈಕಿ ರೈತನು ಯಾರೋ ಅವನನ್ನು ಬಿಟ್ಟು ಉಳಿದವರನ್ನು ಬೈಫರ್‌ಕೇಟ್ ಮಾಡುತ್ತೀರಾ ಹೇಗೆ ಎನ್ನುವುದನ್ನು ತೀರ್ಮಾನಮಾಡಬೇಕು. ಹಾಗೆ ಮಾಡದೆ ಈಗ ಇರುವಹಾಗೆ ಜಾರಿಗೆ ಕೊಟ್ಟಪಕ್ಷದಲ್ಲಿ ದೇಶದಲ್ಲಿ ದಂಗೆ ಏಳುತ್ತದೆ, ಗಲಾಟೆ ಆಗುತ್ತದೆ. ಅದನ್ನು ಖಚಿತವಾಗಿ ತಿಳಿದುಕೊಂಡು ಕೆಲಸಮಾಡಿ.

Sri Kadidal MANJAPPA.—Mr. Speaker, he cannot threaten us like this by saying that he is going to assault us.

Sri C. J. MUCKANNAPPA.—He meant that there will be a revolution in the country.

ಶ್ರೀ ಎನ್. ಜಿ. ನರಸಿಂಹೇಗೌಡ.—ಫ್ಲಾನಿಂಗ್ ಕಮಿಷನ್ನಿನವರಿಗೆ ನಮ್ಮ ತೀರ್ಮಾನ ಏನಿದೆ ಎಂಬುದನ್ನು ತಿಳಿಸಬೇಕು ಮತ್ತು ಈ ಸಭೆಯ ವರದಿಯನ್ನು ಕಳುಹಿಸಿಕೊಡಬೇಕು. ನನಗೆ 25 ವರ್ಷದ ರಾಜಕೀಯ ಅನುಭವ ಇದೆ. ಮೈಸೂರಿನವರು ಯಾವಾಗಲೂ ಹಿಂದೆ ಉಳಿಯುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಆಂಧ್ರ ನೋಡಿ, ಅವರು ಚಾಲೆಂಜ್ ಮಾಡುತ್ತಾರೆ. ಅವರು ಏನಾದರೂ ಮಾಡಬೇಕಾದರೆ ದೇಶದ ಪರಿಸ್ಥಿತಿ ಹೀಗಿದೆ, ಅವರು ಹೇಳಿದ ಹಾಗೆ ಮಾಡದಿದ್ದಪಕ್ಷದಲ್ಲಿ ರಾಜೀನಾಮೆ ಕೊಡಬೇಕಾಗಿ ಬಂದೀತು ಎಂದು ಹೇಳುತ್ತಾರೆ. ನಾಳೆ ಇನ್ನೊಬ್ಬರು ತಮ್ಮ ಸ್ಥಾನದಲ್ಲಿ ಬಂದು ಕುಳಿತುಕೊಳ್ಳುತ್ತಾರೆಂದು ಯಾತಕ್ಕೆ ಹದರಬೇಕು?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ಪಕ್ಷದವರೇ ಹೇಳುತ್ತಾರೆ. ಭೂ ಸುಧಾರಣೆ ಮಾಡಬೇಕು ತಡವಾಗಿದೆ ಎಂದು.

ಶ್ರೀ ಎನ್. ಜಿ. ನರಸಿಂಹೇಗೌಡ.—ಭೂ ಸುಧಾರಣೆಯನ್ನು ಮಾಡುವಾಗ ಇತರರ ಕಷ್ಟಸುಖಗಳನ್ನು ನೋಡಿ ಎಂದು ನಾನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಇತರರಿಗೆ ಎಲ್ಲಿತನಕ ಸೀಲಿಂಗ್ ಹಾಕುವುದಿಲ್ಲವೋ ಅಲ್ಲಿಯವರೆಗೆ ಭೂ ಸುಧಾರಣೆ ಮಾಡಕೂಡದು ಎಂದು ಹೇಳುತ್ತೀರಾ?

ಶ್ರೀ ಎನ್. ಜಿ. ನರಸಿಂಹೇಗೌಡ.—ಇದನ್ನು ಮಾಡುವುದರ ಜೊತೆಗೆ ಅದನ್ನೂ ಮಾಡಿ ಎಂದು ಹೇಳುತ್ತೇನೆ. ಸ್ವಂತ ಸಾಗುವಳಿ ಮಾಡತಕ್ಕವರು ಹತ್ತುಮೈಲಿ ಅಂತರದೊಳಗೆ ಇರತಕ್ಕದ್ದು ಎನ್ನುವ ಪರಮಾವಧಿ ಎಲ್ಲಾ ಜಮೀನಿಗೂ ಅನ್ವಯಿಸುವುದಿಲ್ಲ, ಸ್ವಂತ ಹಿಡುವಳಿದಾರರಿಗೆ ಮಾತ್ರ ಅನ್ವಯಿಸುತ್ತದೆ ಎಂದು ಮಾಡಿದ್ದಾರೆ. ಈಗ ನಾನು ಎಂ.ಎಲ್.ಎ. ಆಗಿದ್ದೇನೆ. ನನಗೆ ಮಕ್ಕಳು ಮರಿ ಯಾರೂ ಇಲ್ಲ. ಆದ್ದರಿಂದ ನಾನು ಆಳು ಕಾಳು ಇಟ್ಟುಕೊಂಡು ಕೆಲಸ ಮಾಡಿಸಬೇಕಾಗುತ್ತದೆ. ನಾನು ಐದು ವರ್ಷ ಕಾಲ ಈ ಅಸೆಂಬ್ಲಿಯಲ್ಲಿ ಕೆಲಸಮಾಡಬೇಕಾಗುತ್ತದೆ, ನೀವು ಅದೇರೀತಿ ಕೆಲಸ ಮಾಡಬೇಕಾಗುತ್ತದೆ. ನಿಮ್ಮ ರೂಲ್ಸ್ ಪ್ರಕಾರ ನಮ್ಮ ಲ್ಯಾಂಡ್ಸ್ ಬೇರೆಯವರಿಗೆ ಹೋಗಬೇಕು. ನೀವೇನೋ ಬೆಂಗಳೂರಿನಲ್ಲಿ ಕುಳಿತುಕೊಂಡು ಲಾಯರ್‌ಗಿರಿಯಿಂದ ಮತ್ತು ಮಂತ್ರಿಗಳಾಗಿ ಸಂಪಾದನೆ ಮಾಡುತ್ತೀರಿ. ನನಗೆ ಹೇಗೆ ನಡೆಯುತ್ತದೆ? ಇದರಿಂದ ತೊಂದರೆಯಾಗುತ್ತದೆ ಮತ್ತು ಕಷ್ಟವಾಗುತ್ತದೆ. ಯಾರು ವ್ಯವಸಾಯಮಾಡುತ್ತಾರೋ ಅವರು ಎಲ್ಲಿಯೇ ಇರಲಿ, ಒಂದುಪಕ್ಷ ಅಫಿಷಿಯಲ್ ಆಗಿರಲಿ ನಾನ್ ಅಫಿಷಿಯಲ್ ಆಗಿರಲಿ ಅಥವಾ ಬೇರೆಕಡೆ ಅಡ್ವೋಕೇಟ್ ಆಗಿರಲಿ, ಸ್ವಂತ ವ್ಯವಸಾಯ ಮಾಡಬೇಕು ಎಂದು ನಿರ್ಬಂಧ ಹಾಕಿದ ಪಕ್ಷದಲ್ಲಿ, ಇವೊತ್ತಿನದಿವಸ ಲ್ಯಾಂಡ್ ಲಾರ್ಡ್ಸ್ ಹೆಚ್ಚು ಆಹಾರವನ್ನು ಬೆಳೆಯಬೇಕು ಎಂದು ಏನು ಮನೋಭಾವನೆಯನ್ನು ಇಟ್ಟುಕೊಂಡಿದ್ದಾರೋ ಅದು ಹೊರಟುಹೋಗುತ್ತದೆ. ದೂರ ಇರುವ

ರೈತರಿಗೆ ಭೂಮಿಯಮೇಲೆ ಅಟಾಚ್‌ಮೆಂಟ್ ಇಲ್ಲ ಎಂದು ಹೇಳುತ್ತಾರೆ. ಆದರೆ ಅವರು ಗೇಣಿಗೆ ಕೊಟ್ಟಲ್ಲಿ ಗೇಣಿದಾರನಿಗೆ ಮದುವೆಗೆ ದುಡ್ಡು, ಗೊಬ್ಬರಕ್ಕೆ ದುಡ್ಡು, ಕಾಯಿಲೆ ಕಸಾಲೆಗಳಿಗೆ ದುಡ್ಡು ಕೊಡುತ್ತಾರೆ. ಉದಾಹರಣೆಗೆ ಶ್ರೀ ಚನ್ನಬಸಪ್ಪನವರನ್ನೇ ತೆಗೆದುಕೊಳ್ಳಿ. ಅವರು ಮಂತ್ರಿಗಳಾಗಿದ್ದಾರೆ. ಈಗ ಅವರು 10-15 ಸಂಸಾರಗಳನ್ನು ಅವರ ಹಳ್ಳಿಯಲ್ಲಿ ಮ್ಯಾನೇಜ್ ಮಾಡುತ್ತಿದ್ದಾರೆ. ಅವರೆಲ್ಲರೂ ಇವರ ಹಿಡಿತದಲ್ಲಿಯೇ ಇದ್ದಾರೆ. ಆದರೆ ಇರುವ ಜಮೀನನ್ನು ಪೂರ್ತಿಯಾಗಿ ಎಲ್ಲಾ ಸಂಸಾರಗಳಿಗೂ ಹಂಚಿದಪಕ್ಷದಲ್ಲಿ ಅವರು ಅವರ ಕೈಬಿಟ್ಟು ಹೋಗುತ್ತಾರೆ. ಈಗ ರೈತ ಏನು ಬೆಳೆಯುತ್ತಿದ್ದಾನೋ ಅದನ್ನು ಅವನು ಮುಂದೆ ಬೆಳೆಯುವುದಿಲ್ಲ. ಜಮೀನ್ದಾರ ದೂರ ಇದ್ದರೂ ಸಹ ರೈತನಿಗೆ ಹಿಂದಿನಿಂದ ದುಡ್ಡಿನ ಸಹಾಯಮಾಡಿ, ಇತರ ಸಹಾಯಮಾಡಿ ರೈತರ ಹೆಚ್ಚು ಆಹಾರವನ್ನು ಬೆಳೆಯುವಂತೆ ಮಾಡುತ್ತಿದ್ದಾರೆ. ಸ್ವಂತ ವ್ಯವಸಾಯ ಮಾಡುವವರು ಹತ್ತು ಮೈಲಿ ಅಂತರದೊಳಗೆ ಇರಬೇಕು ಎಂದು ಕಾನೂನುಮಾಡಿದಪಕ್ಷದಲ್ಲಿ ದೂರ ಇರತಕ್ಕವನು ಜಮೀನನ್ನು ಬೇಡ ಎಂದು ಬಿಟ್ಟು ಹೋಗುತ್ತಾನೆ. ಆ ಭೂಮಿ ಇತರರಿಗೆ ಸಿಕ್ಕಿದರೂ ಸಹ ಅವರಿಗೆ ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಈ ನಿರ್ಬಂಧವನ್ನು ನಡಿಲಮಾಡಿ ಯಾರು ಜಮೀನು ಮಾಡುವುದಕ್ಕೆ ಸಹಾಯ ಮಾಡುತ್ತಾರೋ ಅಂಥವರಿಗೆ ಅವಕಾಶ ಕೊಡಿ, ಅಗ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

11 A.M.

ಮೈಸೂರು ದೇಶದಲ್ಲಿ ಯಾವ ಮೂಲೆಯಲ್ಲಿದ್ದರೂ ಒಂದು ಮ್ಯಾನೇಜ್‌ಮೆಂಟ್ ಇಟ್ಟುಕೊಂಡು, ಕೂಲಿಯವರಿಂದ ಕೆಲಸಮಾಡಿಸಿ ವ್ಯವಸಾಯ ಮಾಡಿಸುವುದಕ್ಕೆ ಅವಕಾಶವಿರಬೇಕು ಎಂಬುದು ಇಲ್ಲಿ ಅಡಕವಾಗಿರಬೇಕು. ಆದ್ದರಿಂದ ಈ ಹತ್ತು ಮೈಲಿ ಎನ್ನುವುದನ್ನು ತೆಗೆದುಹಾಕಿ.

ಪರಿಹಾರದ ವಿಷಯದಲ್ಲಿ ಸ್ವಲ್ಪ ತೊಡಕು ಇದೆ. ಒಂದಕ್ಕೆ 15 ರಷ್ಟು ಪರಿಹಾರ ಕೊಡಬೇಕೆಂದು ಹೇಳುತ್ತೀರಿ. ಚನ್ನರಾಯಪಟ್ಟಣದಲ್ಲಿ ಖುಷ್ಕಿ ರೇಟು ಒಂದು ರೂಪಾಯಿನಿಂದ ಒಂದೂಕಾಲು ರೂಪಾಯಿವರೆಗೂ ಇದೆ.

ಶ್ರೀ ಕಡಿದಾಳ್ ಮಂಜಪ್ಪ.—ಅಸೆಸ್‌ಮೆಂಟ್ ಆಧಾರದಮೇಲೆ ಪರಿಹಾರ ನಿಗದಿಮಾಡುವುದಿಲ್ಲ. Fair rent fix ಮಾಡುತ್ತಾರಲ್ಲಾ ಅದರ ಆಧಾರದ ಮೇಲೆ ಕಂದಾಯಕೊಟ್ಟು ಉಳಿದದ್ದರಲ್ಲಿ 15ರಷ್ಟು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಏನು ಬರುತ್ತದೆ ಎಂದರೂ ಕಂದಾಯಕ್ಕಿಂತ ಸ್ವಲ್ಪ ಹೆಚ್ಚು ಬರುತ್ತದೆ. 500 ಎಕರೆ ಮೇಲ್ಪಟ್ಟು ಇರುವವರಿಗೆ ಕಾಂಪೆನ್‌ಸೇಷನ್ ಕೊಡುವಾಗ ಸ್ವಲ್ಪ ಕಡಿಮೆ ಮಾಡಿದರೂ ಚಿಂತೆ ಇಲ್ಲ, ಅದಕ್ಕಿಂತ ಕಡಿಮೆ ಇರತಕ್ಕವರಿಂದ ಜಮೀನನ್ನು ಕಿತ್ತುಕೊಳ್ಳುವಾಗ reasonable ರೇಟ್ ಏನಾಗುತ್ತದೆಯೋ ಅದನ್ನು ಕೊಡಬೇಕು. ಊರುಪಕ್ಕದಲ್ಲಿರತಕ್ಕ ಜಮೀನಿಗೆ 100 ರೂಪಾಯಿಗಿಂತ ಜಾಸ್ತಿ ಬರುವುದಿಲ್ಲ, ಆದರೆ ಬೆಲೆ ಸಾವಿರದಿಂದ 400 ರೂಪಾಯಿಗಳವರೆಗೂ ಆಗುತ್ತದೆ. ಆಗ ಏನು ಮಾಡುತ್ತೀರಿ? ಅಕ್ವಿಸಿಷನ್ ಆಕ್ಟ್ ಪ್ರಕಾರ ಹೋಗುವುದಾದರೆ ಕೋರ್ಟಿಗೆ ಹೋದಲ್ಲಿ ರಿವೈಸ್ ಆಗುತ್ತದೆ. ನಾಳೆ 1000 ರೂಪಾಯಿಗೆ 100 ರೂಪಾಯಿ ಬಂದರೆ ಅವನು ಒಪ್ಪುವುದಿಲ್ಲ, ಕೋರ್ಟಿಗೆ ಹೋಗುತ್ತೇನೆ ತೆಗೆದುಕೊಳ್ಳುತ್ತೇನೆ ಎನ್ನುತ್ತಾನೆ. ಆಗ ಪರಿಸ್ಥಿತಿ ಏನು ಎಂಬುದನ್ನು ಯೋಚನೆಮಾಡಬೇಕು. ಗೇಣಿದಾರರಿಗೆ ¼ ಭಾಗ, 1/5 ಭಾಗ, 1/6 ಭಾಗದವರೆಗೂ ಅವಕಾಶವಿದೆ. ನಾನೂ ಗೇಣಿದಾರ ವರ್ಗಕ್ಕೇ ಸೇರಿದ್ದೇನೆ. ಇವತ್ತು ಗೇಣಿದಾರರ ಪರಿಸ್ಥಿತಿ ಏನಾಗಿದೆ ಎಂದರೆ ಲ್ಯಾಂಡ್ ಲಾರ್ಡ್ಸ್ ಶೇಕಡ 50 ಖರ್ಚೆಲ್ಲಾ ಕೊಟ್ಟು ರೈತರಿಗೆ ಅನುಕೂಲ ಒದಗಿಸಿ ಕೊಡುತ್ತಾರೆ. ¼, 1/5, 1/6 ಭಾಗ ನಿಗದಿಮಾಡಿದರೆ ಯಾರೂ ಜಮೀನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಉತ್ಪತ್ತಿಯಲ್ಲಿ 1/6 ಭಾಗ ಕೊಟ್ಟು ಜಮೀನು ಇಂಪ್ರೂವ್ ಮಾಡಬೇಕೆಂದರೆ ಹೇಗೆ ಸಾಧ್ಯ? ಆದ್ದರಿಂದ ಕನಿಷ್ಠ ಪಕ್ಷ 1/3 ಭಾಗ ಜಮೀನ್ದಾರರಿಗೆ ಬರುವಹಾಗೆ ಮಾಡಬೇಕು. 1/3 ಭಾಗ ಕೊಟ್ಟಲ್ಲಿ ಕಂದಾಯ ಕೊಡುತ್ತಾನೆ, ಜಮೀನು ಇಂಪ್ರೂವ್ ಮಾಡುತ್ತಾನೆ. ಗೇಣಿದಾರರ ಯೋಗಕ್ಷೇಮ ನೋಡುತ್ತಾನೆ. 1/5, 1/6 ಭಾಗ fix up ಮಾಡಿದರೆ ಜಮೀನ್‌ದಾರರು ಯಾರೂ ವ್ಯವಸಾಯಮಾಡಲಿಕ್ಕೆ ಆಗುವುದಿಲ್ಲ. ಇವತ್ತು ಆಹಾರ ಧಾನ್ಯ ಕಡಮೆಯಾಗುತ್ತಿದೆ. ದೇಶದಲ್ಲಿ ವ್ಯವಸಾಯಗಾರನಿಗೆ ಏನು ಮುತುವರ್ಜಿ ಇತ್ತೋ ಅದೆಲ್ಲಾ ಹೊರಟುಹೋಗುತ್ತಿದೆ. ಆದ್ದರಿಂದ ಇಂಡಸ್ಟ್ರಿಯಲ್ basisಮೇಲೆ ಹೇಗೆ ಕೆಲಸ ಮಾಡುತ್ತಾನೆಯೋ ಅದೇ ಬೇಸಿಸ್‌ಮೇಲೆ ರೈತ ಕೆಲಸಮಾಡುವ ಹಾಗೆ ಮಾಡಲು ಸರ್ಕಾರದವರು ನಿಯಮಗಳನ್ನು ಅನುಸರಿಸಬೇಕು. ಹಾಗೆ ಮಾಡದೇ agriculture sectorಗೂ ಬೇರೆ sectorಗೂ ವ್ಯತ್ಯಾಸಮಾಡಿದ್ದೇ ಆದಲ್ಲಿ ರೈತ ಹಾಳಾಗುತ್ತಾನೆ. ದೇಶದಲ್ಲಿ 75 ಭಾಗ ರೈತರಿರುವಾಗ ರೈತರಮೇಲೆ ಶೇಕಡ 99 ನಿಗಾ ಇರಬೇಕು.

ಪರಿಹಾರ ಕೊಡುವುದು ಬಾಂಡ್ ರೂಪದಲ್ಲಿ ಅಥವಾ ಕಂತಿನ ರೂಪದಲ್ಲಿ ಕೊಡುತ್ತೇವೆ ಎಂದು ಹೇಳುತ್ತಾರೆ. ಕ್ಯಾಪಿಟಲಿಸ್ಟಿಗೆ ಹಾಗೆ ಮಾಡಿ. ಕಡಿಮೆ ಜಮೀನು ಇರುವವನಿಗೆ ಸಾಲ ಸೋಲ ಮಾಡಿರುವವನಿಗೆ ಮ್ಯಾಕ್ಸಿಮಂ 5000 ರೂಪಾಯಿ ಬರುವವನಿಗೆ ಕ್ಯಾಷ್ ರೂಪದಲ್ಲಿ ಕೊಡಬೇಕು. ಹಾಗಿಲ್ಲದ ಪಕ್ಷದಲ್ಲಿ ಎಲ್ಲ ಕಡೆಯೂ ಅವನು ಸಾಲಮಾಡಿರುತ್ತಾನೆ; ಅವನ ಗತಿ ಏನು? ಜಮೀನಿನಲ್ಲಿ ಬರುತ್ತಿದ್ದ ಉತ್ಪನ್ನ ಕಡಿಮೆ ಆಗುತ್ತದೆ, 20 ವರ್ಷ ಕಂತಿನ ರೂಪದಲ್ಲಿ ತೆಗೆದುಕೊಳ್ಳಬೇಕೆಂದರೆ ಯಾವ ನ್ಯಾಯ? ಹತ್ತು ಸಾವಿರ ರೂಪಾಯಿ ಬಂದರೆ ಬಾಂಡ್‌ರೂಪದಲ್ಲಿ ಐದು ಸಾವಿರದೊಳಗೆ ಬಂದರೆ ಕ್ಯಾಷ್‌ರೂಪದಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇವತ್ತಿನ ದಿವಸ ಈ ಕಾನೂನು ಮಾಡುವವರು ಕಾಂಗ್ರೆಸ್ ಸರ್ಕಾರದವರು ನಾಳೆ ಇನ್ನೊಂದು ಸರ್ಕಾರ ಬರಬಹುದು. ಆಗ ಅವರು ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆಮೇಲೆ ಇನ್ನೊಂದು ವಿಷಯ ಸ್ಪಷ್ಟವಾಗಿಲ್ಲ. 3600 ರೂಪಾಯಿ ಉತ್ಪನ್ನ ಬರತಕ್ಕವರು ಗೇಣಿದಾರರು ಎಂದು ತೀರ್ಮಾನಮಾಡಿ, ಎಷ್ಟು ವರ್ಷದಲ್ಲಿ, ಎಷ್ಟು ದಿವಸದಲ್ಲಿ, ಯಾವ ರೇಟಿನಲ್ಲಿ, ಯಾರಿಗೆ ಪರಿಹಾರ ಕೊಡಬೇಕು ownerಗೇ, ಸರ್ಕಾರದವರಿಗೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಿಲ್ಲ. ಮೊಗಂ ಆಗಿ ಹೇಳಿದ್ದೀರಿ. ಅದನ್ನು ಈ ಬಿಲ್ಲಿನಲ್ಲಿ ಸ್ಪಷ್ಟವಾಗಿ ಹೇಳಬೇಕು. ಇಲ್ಲದೇ ಇದ್ದರೆ ಗೇಣಿದಾರರಿಗೂ, ಲ್ಯಾಂಡ್ ಲಾರ್ಡ್ಸಿಗೂ ಭಿನ್ನಾಭಿಪ್ರಾಯ ಬರುತ್ತದೆ. ಹೊಡೆದಾಟ, ಪ್ರಾಣ ಹತ್ಯ ಆಗುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ.

**Sri Kadidal MANJAPPA.**—It is as clear as crystal. Please see Clause 52 (4) which states as follows:

> "If a tenant is willing to be registered as an occupant or to have a ryotwari patta, as the case may be, and to pay a premium to the State Government equal to the amount of compensation in respect of such land, the Tribunal shall, subject to the provisions of the succeeding sections direct that the land in respect of which such tenant is entitled to be registered as occupant or to a ryotwari patta, as the case may be, shall be so registered or granted a ryotwari patta on payment to the State Government of the amount of premium."

Please see also clause 58 "Payment of premium by tenant".

ಶ್ರೀ ಎಚ್. ಜಿ. ನರಸಿಂಹೇಗೌಡ.—ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರ. ನಮ್ಮ ದೇಶದಲ್ಲಿ Socialistic Pattern ಎಂದು ಹೇಳುತ್ತಿದ್ದಾರೆ. ಸೋಷಿಯಲಿಷ್ಟರು ದೇಶದಲ್ಲಿ ಮುಂದೆ ಬರದಂತೆ ಮಾಡಲು ಪ್ರಧಾನಮಂತ್ರಿಗಳಾದ ನೆಹರೂ ಅವರು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಎಂದು ಮಾಡಿದರು. ಮುಂದೆ ಬರುವ ಎತ್ತನ್ನು ಹಿಂದಕ್ಕೆ ಎಳೆದರೆ ಕೇರಳದಲ್ಲಿ ಈಗ ಯಾವ ರೀತಿ ಅನುಭವಿಸುತ್ತಿದ್ದಾರೆಯೋ ಹಾಗೆಯೇ ಅನುಭವಿಸಬೇಕಾಗುತ್ತದೆ. ಬೇರೆಯವರು ಮಾಡಿದ್ದನ್ನು ನೋಡಿ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಪ್ರಜಾಪ್ರಭುತ್ವದಲ್ಲಿ ಏನಾಗುತ್ತಿದೆ ಎಂದರೆ ಯಾರು ರಾಜಕೀಯ ನಾಯಕರೋ, ಯಾರು ಸರ್ಕಾರದ ಹಿಂಬಾಲಕರೋ ಅವರು ಮೇಯುವುದಕ್ಕೆ ಮಾತ್ರ ಅನುಕೂಲವಾಗುತ್ತದೆ. ಸಬ್‌ವೆನ್‌ಷರ್, ಸಿಬ್ಬಂದಿ ಖರ್ಚು ಇತ್ಯಾದಿಗಳನ್ನು ಒಂದಕ್ಕೆ ನಾಲ್ಕರಷ್ಟು ಹಾಕಿ ದುಡ್ಡನ್ನು ಜೇಬಿಗೆ ಬಿಡುವುದಕ್ಕೆ ಅನುಕೂಲವಾಗುತ್ತದೆ. ರೈತರಿಗೆ ಯಾರಿಗೂ ನೇರವಾಗಿ ಅನುಕೂಲವಾಗುವುದಿಲ್ಲ. ಈಗಾಗಲೇ ಕೆಲವು ಕಡೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿದ್ದಾರೆ. ಇದು ಎಷ್ಟುಮಟ್ಟಿಗೆ ಯಶಸ್ವಿಯಾಗಿದೆ, ಕೋ-ಆಪರೇಟಿವ್ ಫಾರ್ಮಿಂಗ್ ಮಾಡಲು ಗ್ರ್ಯಾಂಟ್‌ಕೊಟ್ಟು, ಗೊಬ್ಬರ ವಗೈರೆ ಕೊಟ್ಟು ಎಷ್ಟು ಉತ್ಪನ್ನಬರುತ್ತದೆ, ರೈತರಿಗೆ ಏನು ಹಂಚುತ್ತೀರಿ? ಸ್ವಂತ ಹಿಡುವಳಿದಾರ ಸರ್ಕಾರದ ಸಹಾಯವಿಲ್ಲದೆ ಎಷ್ಟು ಬೆಳೆಯುತ್ತಾನೆ ಎಂದು ಕಂಡುಹಿಡಿದಿದ್ದೀರಾ? ಕೋ-ಆಪರೇಟಿವ್ ಫಾರ್ಮಿಂಗ್ ಯಶಸ್ವಿಯಾಗಿಲ್ಲ. ನೆಹರೂ ಅವರು ವ್ಯವಸಾಯಗಾರರೇ? ವ್ಯವಸಾಯಗಾರರಾದವರು ಅಥವ ಒಕ್ಕಲುಮಕ್ಕಳ ಪೈಕಿ ನಾಲ್ಕುಜನ ಇದ್ದಿದ್ದರೆ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತ ಇರಲಿಲ್ಲ. 25 ವರ್ಷಗಳ ಹಿಂದೆ ಯಜಮಾನ ಹೇಳಿದಹಾಗೆ ಕೇಳುತ್ತಿದ್ದರು. ನಾಯಕನಾದವನು ಒಬ್ಬನಿದ್ದಾನೆ ಎನ್ನುವ ಕಾಲದಲ್ಲಿ ಮಾತ್ರ ಹಾಗಿತ್ತು. ನಾನು ಹೊಲವನ್ನು ಉಳದೇ ಇದ್ದರೆ ಯಾರು ತಾನೇ ಏನು ಕೊಡುತ್ತಾರೆನ್ನುವ ಕಾಲ ಬಂದಿರುವಾಗ ಕೋ-ಆಪರೇಟಿವ್ ಫಾರ್ಮಿಂಗ್ ಎಂದು ಮಾಡಿ, ಎಲ್ಲರೂ ಸಹಕರಿಸಬೇಕೆಂದು ದೇಶದ ದುಡ್ಡನ್ನು ಅನ್ಯಾಯವಾಗಿ ಹಾಳುಮಾಡುವುದಕ್ಕೆ ಹೊರಟಿದ್ದೀರಿ. ಕೋ-ಆಪರೇಟಿವ್ ಫಾರ್ಮಿಂಗ್‌ಗಾಗಿ ಕೊಡುವ ಹಣವನ್ನು ನೇರವಾಗಿ ಹಳ್ಳಿಯ ರೈತನಿಗೆಕೊಟ್ಟರೆ ಆವಾಗ ಅವನು ಹೆಚ್ಚಿಗೆ ಬೆಳೆಯುತ್ತಾನೆಯೋ ಅಥವಾ ಇಲ್ಲವೋ ಎಂಬುದನ್ನು ಕಂಡುಹಿಡಿಯಬಹುದು. ಮತ್ತು ನೆರೆಹೊರೆಯವರಿಗೂ ಕೂಡ ಸರ್ಕಾರದ ಸಹಾಯಪಡೆದು ಉತ್ತಮವಾಗಿ ವ್ಯವಸಾಯ ಮಾಡಬೇಕೆನುವ ಮನೋಭಾವನೆ ಬರುತ್ತದೆ. ಕೋ-ಆಪರೇಟಿವ್ ಫಾರ್ಮಿಂಗ್‌ಗಾಗಿ ಸಿಬ್ಬಂದಿ ಖರ್ಚು, ಎಲ್ಲಸೇರಿ ವ್ಯವಸಾಯದ ಬಾಬಿಗೆಂದು ಎರಡು ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿದ್ದೀರಿ. ರೈತನಿಗೆ ಗೊಬ್ಬರ, ಬೀಜ, ಕಳೆಕೀಳುವುದಕ್ಕೆ ಯಾವ ತರಹೆ ಭೇದಗಳೂ ಇಲ್ಲದೆ ಹಣ ಸಿಕ್ಕುವುದಕ್ಕೆ ಏನು ಮಾಡಿದ್ದೀರಿ? ಬಾಯಲ್ಲಿಮಾತ್ರ ಧಾರಾಳವಾಗಿ ಅಲ್ಪಾವಧಿಸಾಲ, ಮಧ್ಯಮಾವಧಿಸಾಲ ಕೊಡುತ್ತೇವೆಂದು ಹೇಳುತ್ತೀರಿ. ಅದನ್ನು ತೆಗೆದುಕೊಳ್ಳಬೇಕಾದರೆ ಇರುವ ಕಷ್ಟ ರೈತನಿಗೇ ಗೊತ್ತು. ಇನ್ನೊಬ್ಬರನ್ನು ಆಶ್ರಯಮಾಡಿ ಸಾಲಪಡೆಯಬೇಕಾದರೆ ಶೇಕಡ ಹನ್ನೆರಡರಂತೆ ಬಡ್ಡಿಗೆ ತೆಗೆದುಕೊಂಡಂತಾಗುತ್ತದೆ. ಯಾರು ಒಳಗೊಳಗೇ ದುಡ್ಡು ಕೊಡುತ್ತಾರೆಯೋ ಅವರಿಗೆ ಮಾತ್ರ ಸಾಲ ಮಂಜೂರಾಗುತ್ತದೆ. ಬಡವರಿಗೆ ಸಹಾಯಮಾಡುತ್ತಿರುವ ಸಹಕಾರ ಸಂಘಗಳೆಷ್ಟಿವೆ? ಮಾನ್ಯಮಂತ್ರಿಗಳಾದ ಮರಿಯಪ್ಪನವರ ಕಾಲದಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳು ಪ್ರಾರಂಭವಾದುವು. ಕೋ-ಆಪರೇಟಿವ್ ಫಾರ್ಮಿಂಗ್‌ನಲ್ಲಿ ಏನೇನು ಅಡಕಮಾಡುತ್ತೀರೋ ಅವೆಲ್ಲವೂ ವಿವಿಧೋದ್ದೇಶ ಸಹಕಾರ ಸಂಘಗಳ ಬೈಲಾದಲ್ಲಿಯೂ ಅಡಕವಾಗಿವೆ. ವ್ಯವಸಾಯಗಾರನಿಗೆ ಎಲ್ಲ ತರಹ ಸಹಾಯಮಾಡಲು ಮತ್ತು ಕೋ-ಆಪರೇಟಿವ್ ಫಾರ್ಮಿಂಗ್‌ಮಾಡಲು ವಿವಿಧೋದ್ದೇಶ ಸಹಕಾರ ಸಂಘಗಳ ಬೈಲಾದಲ್ಲಿ ಅವಕಾಶವಿದೆ. ಈ ಸೊಸೈಟಿಗಳ ಲೆಕ್ಕಾಚಾರವನ್ನು ನೋಡಿದರೆ ಅಲ್ಲಿ ಮೇಯುವವರೇ ಇದ್ದಾರೆ. ಶೇಕದಾರನಮೇಲೆ ಕ್ರಮ, ಅಧ್ಯಕ್ಷರಮೇಲೆ ಕ್ರಮ, ಸೆಕ್ರೆಟರಿ ದುಡ್ಡು ತಿಂದು ಹಾಕಿದ್ದಾನೆ, ಆಮೇಲೆ ಸ್ಟೇಆರ್ಡರ್ ಇಂಥವೆಲ್ಲ ನಡೆಯುತ್ತಿವೆ. ಇದರ ಅರ್ಥವೇನು? ಆದರೆ ನಾವು ಕಾನೂನು ಮಾಡುವಾಗ ದೇಶಕ್ಕೆ ಮತ್ತು ರೈತನಿಗೆ ಉಪಕಾರವಾಗುವಂಥ ಕಾನೂನನ್ನು ಮಾಡಬೇಕು. ಆದುದರಿಂದ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿ ಅದರಮೇಲೆ ಹಣವನ್ನು ಖರ್ಚುಮಾಡುವುದಕ್ಕೆ ಬದಲಾಗಿ ಅದೇ ಹಣವನ್ನು ರೈತನಿಗೆ ಸಹಾಯವಾಗುವಂತೆ ಕೊಡುವ ಒಂದು ವಿಧಾನವನ್ನು ಕಂಡು ಹಿಡಿಯಿರಿ. ರೈತರ ಪರವಾಗಿ ನಾನು ನಿಮಗೆ ವಂದನೆಗಳನ್ನರ್ಪಿಸುತ್ತೇನೆ.

ಅಳಿಯ ಸಂತಾನದ ಕುಟುಂಬಗಳಿಗೆ ಈ ಮಸೂದೆಯಲ್ಲಿ ಒಂಭತ್ತು ಕುಟುಂಬ ಹಿಡುವಳಿಗಳಷ್ಟು ಪರಮಾವಧಿ ಮಿತಿಯನ್ನು ಗೊತ್ತುಮಾಡಲಾಗಿದೆ. ಆದರೆ ಇತರ ಕುಟುಂಬಗಳಿಗೆ ಆರರಷ್ಟು ಮಾತ್ರ ಗೊತ್ತುಮಾಡಲಾಗಿದೆ. ಈ ರೀತಿ ಒಬ್ಬರಿಗೊಂದು, ಮತ್ತೊಬ್ಬರಿಗೊಂದು ಮಾಡಿರುವುದು ಸರಿಯಲ್ಲ. ಎಲ್ಲರಿಗೂ ಒಂದೇ ರೀತಿ ಅನ್ವಯಿಸುವಂತೆ ಕಾನೂನಿನಲ್ಲಿ ಬದಲಾವಣೆಗಳನು ಮಾಡಬೇಕು. ಆ ರೀತಿಯ ಪದ್ಧತಿಯನ್ನು ಜಾರಿಗೆ ತರುತ್ತಾರೆಂದು ನಾನು ನಂಬಿರುತ್ತೇನೆ.

ಈಗಾಗಲೇ ಮಾನ್ಯಸದಸ್ಯರು ಹೇಳಿರುವ ವಿಷಯಗಳನ್ನು ಮತ್ತೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆಡಳಿತದಲ್ಲಿರುವ ಪಕ್ಷದವರು ಹೇಳಿರುವ ಘೋಷಣೆಯ ಪ್ರಕಾರ ನೀವು ಭೂಸುಧಾರಣೆ ಜಾರಿಗೆ ಬರುವುದನ್ನು ನಿಮ್ಮ ಕಣ್ಣಿನಲ್ಲಿ ನೋಡಬೇಕಾದ ಪಕ್ಷದಲ್ಲಿ ಡಿಸೆಂಬರ್ ಅಂತ್ಯದೊಳಗಾಗಿ ಅದನ್ನು ಜಾರಿಗೆ ತಂದರೆ ನಿಜವಾಗಿಯೂ ಭೂಸುಧಾರಣೆಯಾಗಬಹುದು. ಹಾಗೆ ಮಾಡಿದರೆ ಗೇಣಿದಾರರಾಗಲಿ ಅಥವಾ ಹಿಡುವಳಿದಾರರಾಗಲಿ ನೆಮ್ಮದಿಗೆ ಭಂಗ ಬರದಹಾಗೆ ಸುಖವಾಗಿ ಜೀವನಮಾಡುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ಮಾಡದೆ ಅಕ್ಕಪಕ್ಕದವರು ಭೂಸುಧಾರಣೆಯನ್ನು ಯಾವ ರೀತಿ ಜಾರಿಗೆ ತಂದರು ಎಂದು ನೋಡುವ ಪಕ್ಷದಲ್ಲಿ............

ಶ್ರೀ ಕಡಿದಾಳ್ ಮಂಜಪ್ಪ.—ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವುದು ಬೇಡವೆಂದು ಹೇಳುತ್ತೀರಾ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಸೆಲೆಕ್ಟ್ ಕಮಿಟಿಗೆ ಹೋಗುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆಯಾಗಿ, ಪುನಃ ನಮ್ಮ ಮುಂದೆ ಬಂದು ಜಾಗ್ರತೆಯಾಗಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆಯನ್ನು ಪಡೆದು, ಅದಕ್ಕೆ ರೂಲ್ಸ್ ವಗೈರೆ ಜಾಗ್ರತೆಯಾಗಿ ಮಾಡಿ ಜಾರಿಗೆ ಕೊಡಬೇಕು ಎಂದು ಹೇಳುತ್ತಿದ್ದೇನೆ. ಆದರೆ ಈಗಿರುವ ಸನ್ನಿವೇಶ, ವಾತಾವರಣ ನೋಡಿದ ಪಕ್ಷದಲ್ಲಿ ಮುಂದೆ ಸಾರ್ವತ್ರಿಕ ಚುನಾವಣೆಗಳು ಆಗುವವರೆಗೂ ಭೂಸುಧಾರಣೆ ಜಾರಿಗೆ ಬರುವುದಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ. ಭೂಸುಧಾರಣೆಯನ್ನು ಜಾರಿಗೆ ಕೊಡುವುದರಲ್ಲಿ ವಿಳಂಬ ಮಾಡಿದರೆ ರೈತರಲ್ಲಿ ಮತ್ತು ಗೇಣಿದಾರರಲ್ಲಿರತಕ್ಕ ನೆಮ್ಮದಿಗೆ ಭಂಗವಾಗುವುದಕ್ಕೆ ಅವಕಾಶವಾಗುತ್ತದೆ. ಆ ರೀತಿಯಾಗುವುದಕ್ಕೆ ಅವಕಾಶಕೊಡಬೇಡಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಪಂಚಗವಿ (ಗೋಕಾಕ).—ಮಾನ್ಯ ಅಧ್ಯಕ್ಷರೇ, ಈ ಮಹತ್ವದ ಬಿಲ್ಲಿನಮೇಲೆ ಮಾತನಾಡಲು ನನಗೆ ಅವಕಾಶ ಸಿಕ್ಕಿದ್ದಕ್ಕಾಗಿ ನಾನು ಅಧ್ಯಕ್ಷರ ಆಭಾರ ಮನ್ನಿಸಿ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಈ ಬಿಲ್ಲಿನ ಬಗ್ಗೆ ಕೆಲವೊಂದು ಉಪಯುಕ್ತವಾದ ಮಾಹಿತಿಗಳನ್ನು ಕೊಟ್ಟಿದ್ದಲ್ಲದೆ ಅದರ ಬಗ್ಗೆ ಕೆಲವು ಮಾತುಗಳನ್ನು ಅಭಿಮಾನದಿಂದ ಹೇಳಿದ್ದಾರೆ. ಪ್ಲಾನಿಂಗು ಕಮಿಷನ್ನಿನವರು ಗೇಣೀದಾರರಿಗೆ ಹಕ್ಕುಗಳನ್ನು ಕೊಡುವಬಗ್ಗೆ ಕೆಲವಾರು ಸಲಹೆಗಳನ್ನು ಮಾಡಿದ್ದಾರೆ. ಅದರಲ್ಲಿ ಆಕ್ಯುಪೆನ್ಸಿ ರೈಟ್ಸ್‌ಗಳನ್ನು ಕೊಡುವುದು ಒಂದು. ಅದಲ್ಲದೆ ಅವರಿಗೆ ಹಿಡುವಳಿಯ ಭದ್ರತೆ ಮತ್ತು ಫೇರು ರೆಂಟು ಎಂದರೆ, ಒಂದು ನಿರ್ದಿಷ್ಟ ಗೇಣಿಯ ಮಿತಿ ಮತ್ತು ಜಮೀನು ಹಿಡುವಳಿದಾರರ ಮೇಲೆ ಒಂದು ಪರಮಾವಧಿ ಮಿತಿ, ಇವೇ ಮುಖ್ಯ ಅಂಶಗಳು. ಇವಲ್ಲದೇ ಇನ್ನೂ ಅನೇಕ ಮುಖ್ಯ ಅಂಶಗಳು ಈ ಬಿಲ್ಲಿನಲ್ಲಿವೆ. ಎಲ್ಲಕ್ಕೂ ಮಹತ್ವವಾದುದು ಮತ್ತು ಎಲ್ಲರ ಲಕ್ಷ್ಯವನ್ನೂ ಹೆಚ್ಚಾಗಿ ಸೆಳೆದದ್ದು ಪರಮಾವಧಿಯ ಮಿತಿ. ಈ ಪರಮಾವಧಿ ಮಿತಿಯಮೇಲೆ ಈಗಾಗಲೇ ಅನೇಕರು ಹೇಳಿದ್ದಾರೆ ಮತ್ತು ಇದಕ್ಕೆ ಒಂದು ಚಳವಳಿಯೂ ನಡೆದಿದೆ. ಈ ವಿಧಾನ ಸಭೆಯಲ್ಲಿ ಈ ಕಾಯಿದೆಯನ್ನು ಮಂಡಿಸಿದಮೇಲೂ, ಈ ವಿಚಾರದಲ್ಲಿ ಎಲ್ಲ ಕಡೆಗೂ ಪ್ರಚಾರ ನಡೆದಿದೆ; ಮತ್ತು ರೈತರೂ ಒಂದು ಪೋರಂನ್ನೂ ಕೂಡ ಮಾಡಿಂಕೊಡು ಜನತೆಯ ಅಭಿಪ್ರಾಯಗಳನ್ನು ಅದರ ಮೂಲಕ ಇಡಲು ಪ್ರಯತ್ನಮಾಡಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದಂತೆ ನಮ್ಮ ಮುಂದಿರುವ ಈ ಬಿಲ್ಲು ಹೆಚ್ಚಾಗಿ ವೆಸ್ಟೆಡು ಇಂಟರೆಸ್ಟಿಗೆ ಸೇರಿದ್ದು ಎಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಯಾರು ಸ್ವತಃ ಜಮೀನನ್ನು ಮಾಡದೆ ರೈತರಮೇಲೆ ತಮ್ಮ ಭಾರವನ್ನು ಪೂರ್ಣವಾಗಿಟ್ಟು ಜೀವನ ಮಾಡುವರೋ ಅವರೇ ವಿರೋಧಿಸುವವರು. ಇದರಲ್ಲಿ 3,600 ರೂಪಾಯಿಗಳನ್ನು ಐದು ಜನರಿರುವ ಕುಟುಂಬಕ್ಕೆ ಸೀಲಿಂಗ್ ಲಿಮಿಟ್ಟಾಗಿ ಇಡಲಾಗಿದೆ. ವಾಸ್ತವವಾಗಿ ನೋಡಿದರೆ ಈ 3,600 ರೂಪಾಯಿಗಳ ಹಿಡುವಳಿ ಎಂದು ಮಾಡಿರುವುದು ಜಾಸ್ತಿ ಎಂದು ಹೇಳಲು ಅಡ್ಡಿ ಇಲ್ಲ. ದುಡಿಯುವವನಿಗೇ ಭೂಮಿ ಸಿಕ್ಕಬೇಕು ಎಂದು ಇರುವಾಗ ಈ ರೀತಿ 3,600 ರೂಪಾಯಿಗಳನ್ನು ಪರಮಾವಧಿಯಾಗಿ ಮಾಡಿರುವುದನ್ನು ನೋಡಿದರೆ ಯಾರು ಕಷ್ಟಪಟ್ಟು ಭೂಮಿಯನ್ನು ಮಾಡುತ್ತಿರುತ್ತಾನೋ ಅವನು ಕಡೆಯವರೆಗೂ ಕೂಲಿಯ ಆಳಾಗಿಯೇ ಇದ್ದು ಕೆಲಸ ಮಾಡಬೇಕಾಗಿದೆ. ನಿಜವಾಗಿಯೂ ನೋಡಿದರೆ ಬಡವನಿಗೆ ಸಿಕ್ಕುವುದು ಕಷ್ಟದ ಕೆಲಸ ಎನ್ನಲು ಅಡ್ಡಿ ಇಲ್ಲ. 1952 ರ ಧಾರಣೆಯಂತೆಯೇ ಕಡೆಯವರೆಗೂ ಇರುತ್ತದೆ ಎಂದು ತಿಳಿದುಕೊಂಡು ಕೆಲವರಿಗೆ ಭೂಮಿಯು ಸಿಕ್ಕಬಹುದು ಎಂದು ಮಾನ್ಯ ಮಂತ್ರಿಗಳು ಲೆಕ್ಕ ಮಾಡಿ ಇಲ್ಲಿ ತಿಳಿಸಿದರು. ನಾವು ಲೆಕ್ಕವನ್ನು ಮಾಡುವಾಗ ಬೇರೆ ಬೇರೆ ಕಡೆಗೆ ಇರುವ ಉತ್ಪನ್ನಗಳ ಬಗ್ಗೆ ಕೆಲವೊಂದು ಮಾತುಗಳನ್ನು ಲಕ್ಷ್ಯದಲ್ಲಿ ಇಡಬೇಕು. ಈ ಉತ್ಪನ್ನದ ಮೇಲೆ ಲೆಕ್ಕ ಹಾಕುವಾಗ ಜಿರಾಯ್ತಿಗೆ ಖರ್ಚು ಎಷ್ಟು ಬರಬಹುದು ಬಾಗಾಯತಿಗೆ ಎಷ್ಟು ಬರಬಹುದು ಎನ್ನುವುದರ ಸಂಬಂಧವಾಗಿ ವಾದ ವಿವಾದಗಳು ಎದ್ದಿವೆ. ಬಾಗಾಯತಿನ ಖರ್ಚಿನ ಪ್ರಮಾಣವನ್ನು ಲೆಕ್ಕಹಾಕಿದರೆ ಖರ್ಚು ಕಡಿಮೆ ಮತ್ತು ಉತ್ಪನ್ನ ಜಾಸ್ತಿ. ಜಿರಾಯತಿನ ಭೂಮಿಗೆ ಮಳೆಬಾರದೆ ಬೆಳೆಯಾಗದೆ ಹೋಗಿ ಬರಗಾಲದ ಪರಿಸ್ಥಿತಿ ಇದೆ. ಇದನ್ನು ಕೂಡ ಲೆಕ್ಕ ಹಾಕಿಕೊಂಡು ನೋಡಬೇಕು. ರೈತನಾದವನು ಇಡೀ ವರ್ಷ ದುಡಿದು, ಎತ್ತುಗಳು ಮತ್ತು ಇತರ ಎಲ್ಲ ಸಾಮಾನುಗಳನ್ನು ಕೊಳ್ಳುವ ಖರ್ಚನ್ನೂ ಲೆಕ್ಕ ಹಾಕಿ ನೋಡಿದರೆ ಖುಷ್ಕಿ ಜಮೀನಿಗೆ ಖರ್ಚೇನೂ ಕಡಿಮೆಯಾಗುವುದಿಲ್ಲ. ಉತ್ಪನ್ನ ಕಡಿಮೆ. ವರ್ಷದ ಕೊನೆಯಲ್ಲಿ ಅವನು ಎತ್ತುಗಳನ್ನು ಮಾರಿದರೂ ಕಂದಾಯವನ್ನು ಕೊಡಲು ಶಕ್ಯವಿಲ್ಲದಂತಹ ಸ್ಥಿತಿಗೆ ಬರುತ್ತಾನೆ. ನಮ್ಮ ಕಡೆಯಲ್ಲಿ ದುಷ್ಕಾಲದ ಪರಿಸ್ಥಿತಿ ಮೇಲಿಂದಮೇಲೆ ಬರುತ್ತದೆ. ಬಿಜಾಪುರ, ಬೆಳಗಾಂ, ಧಾರವಾಡ ಜಿಲ್ಲೆಯ ಕೆಲವು ಭಾಗಗಳು ಮತ್ತು ಹಳೆಯ ಮೈಸೂರಿನ ಭಾಗಗಳಾದ ಕೋಲಾರ, ತುಮಕೂರು ಇಲ್ಲಿಯೂ ಕೂಡ ಮೇಲಿಂದಮೇಲೆ ಈ ಬರಗಾಲದ ಪರಿಸ್ಥಿತಿ ಬರುತ್ತಿದೆ ಎನ್ನುವುದು ಎಲ್ಲರೂ ಕಂಡ ಮಾತು. ಇದನ್ನು ಲೆಕ್ಕ ಹಾಕಿದರೆ ನಮ್ಮ ವಿಧಾನಸಭೆಯ ಮಾನ್ಯಸದಸ್ಯರಾದ ಶ್ರೀ ಕೆಂಪ್ಪನವರು ಹೇಳಿದ ಮಾತುಗಳು ನಿರಾಧಾರವಾದುವು ಎಂದು ಹೇಳಲಿಕ್ಕೆ ಅಡ್ಡಿ ಏನಿಲ್ಲ. ನಾನೂ ಒಬ್ಬ ಪ್ರತ್ಯಕ್ಷವಾಗಿ ದುಡಿಯತಕ್ಕಂತಹ ರೈತ. ಅದರಿಂದ ನಮ್ಮ ಭಾಗದ ಅನುಭವ ಅವರಿಗೆ ಗೊತ್ತಿಲ್ಲ ಮತ್ತು ನಮ್ಮ ಭಾಗದಲ್ಲಿರುವ ಕಷ್ಟಗಳೇನು ಎನ್ನುವುದೂ ಅವರಿಗೆ ಗೊತ್ತಿಲ್ಲ ಎಂದು ನನ್ನ ಭಾವನೆ. ಸಾಧಾರಣವಾಗಿ ನಮ್ಮ ಕಡೆ ನಾಲ್ಕು ಎಕರೆಗೆ

(ಶ್ರೀ ಎ. ಆರ್. ಪಂಚಗವಿ)

ಒಂದು ಚೀಲ ಬೆಳೆ ಬರುವ ಜಮೀನುಗಳೂ ಉಂಟು. ಒಂದು ಚೀಲಕೆಲವು ಕಡೆ ಸಜ್ಜೆ ಕೂಡ ಬರುವುದಿಲ್ಲ. ಅಮೇಲೆ Black Cotton Soil Lands ನಲ್ಲಿ ಸಾಧಾರಣವಾಗಿ ಮಳೆ ಬಾರದಿರುವ ಭಾಗಗಳೂ ಇವೆ. ಕೆಲವರು ಈಗ ನಲವತ್ತು ವರ್ಷಗಳ ಹಿಂದೆ ಇದ್ದಂತಹ ಅಸೆಸ್‌ಮೆಂಟನ್ನು ಕೂಡ ಕೊಡದೆ ಜಮೀನನ್ನು ಬಿಟ್ಟು ಹೋಗಿದ್ದಾರೆ. ಎಂದರೆ ಕಂದಾಯ ಕೊಡುವುದು ಕೂಡ ಒಂದು ಭಾರವಾಗಿದೆ. ಮೇಲಿಂದಮೇಲೆ ಬರಗಾಲಕ್ಕೆ ತುತ್ತಾಗುತ್ತಿರುವುದೇ ಇದಕ್ಕೆ ಕಾರಣವಾಗಿದೆ. ಇಂತಹ ಪರಿಸ್ಥಿತಿ ಇರುವಾಗ ಕೆಲವು ಕಡೆ ಹೆಚ್ಚಿಗೆಬರಬಹುದು, ಕೆಲವು ಕಡೆ ಕಡಮೆ ಬರಬಹುದು ಫ್ಯಾಮಿಲಿ ಹೋಲ್ಡಿಂಗಿಗೆ 1,200 ರೂಪಾಯಿಗಳೆಂದು ಮಾಡಿರುವುದರಿಂದ ಸಾಧಾರಣವಾಗಿ 60, 70 ಎಕರೆಗಳಷ್ಟು ಜಮೀನು ಬರುತ್ತದೆ. ಸೀಲಿಂಗು ಲಿಮಿಟ್ಟು 180-200 ಎಕರೆಗಳವರೆಗೆ ಆಗಬಹುದು.

11-30 A.M.

ಮತ್ತು ದೊಡ್ಡ ಕುಟುಂಬವಿದ್ದರೆ, ಅಂದರೆ ಐದು ಜನಗಳಿಗಿಂತ ಹೆಚ್ಚು ಇದ್ದರೆ ಅದಕ್ಕೆ ಎರಡು ಪಟ್ಟು ಜಮೀನನ್ನು ರೈತರಿಗೆ ಬಿಡಬೇಕಾಗುತ್ತದೆ. ಇದು ಸ್ವತಃ ಜಮೀನು ಮಾಡುವವರಿಗೆ ಆಗುತ್ತದೆ. ನಮ್ಮ ಕಡೆಗೆ ಭೂಮಿ ಸಿಕ್ಕುವುದೇ ಕಷ್ಟ. ಜಮೀನು ಮಾಡುವವರಿಗೆ ಒಂದೆರಡು ಎಕರೆ ಭೂಮಿ ಸಿಕ್ಕುವುದಿಲ್ಲ. ಸೀಲಿಂಗ್ ನಾವು ಹಾಕುವಾಗ 3,600 ಎಂದು ಮಾಡಿರುವ ಲಿಮಿಟ್ಟಿಗಿಂತ ಇನೂ ಕಡಮೆ ಮಾಡಬೇಕು. ಅದನ್ನು ಮೊದಲೇ ಪರ್ಯಾಲೋಚಿಸಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ. ಹೈದರಾಬಾದಿನಲ್ಲಿ ಒಂದು ಫ್ಯಾಮಿಲಿ ಹೋಲ್ಡಿಂಗಿಗೆ 800 ರೂಪಾಯಿಗಳು ಎಂದು ಇಟ್ಟಿದೆ. 3,600 ಸೀಲಿಂಗ್ ಇಡುವುದಕ್ಕಿಂತ ಅಲ್ಲಿ 2,400 ರೂಪಾಯಿಗಳು ಯೋಗ್ಯವೆಂದು ನನಗನ್ನಿಸುತ್ತದೆ. ಜತ್ತಿ ಕಮಿಟಿಯೊಳಗೆ 5,400 ರೂಪಾಯಿಗಳು ಸೀಲಿಂಗ್ ಲಿಮಿಟ್ ಇದ್ದುದನ್ನೇ ಕಡಮೆ ಮಾಡಬಾರದೆಂದು ಕೆಲವರ ವಾದ. ಆದರೆ ಮಾನ್ಯ ಮಂತ್ರಿಗಳ ಭಾಷಣ ನೋಡಿದರೆ ಈಗ ಹಾಕಿರುವ ಸೀಲಿಂಗ್ ಲಿಮಿಟ್ ಪ್ರಕಾರ ಶೇಕಡ ಮೂರರಷ್ಟು ಕೂಡ ಜಮೀನು ಹಿಡುವಳಿದಾರರಿಗೆ ಪರಿಣಾಮವಾಗುವುದಿಲ್ಲ; ಜಮೀನು ಸಿಕ್ಕುವುದಿಲ್ಲ. ನಮ್ಮ ರೈತರಿಗೆ ಭೂಮಿ ಸಿಕ್ಕುತ್ತದೆ ಎಂಬುದು ಕೂಡ ಕಷ್ಟ. ಈ ಕಾಯಿದೆ ರಾಜ್ಯದಲ್ಲೆಲ್ಲಾ ಜಾರಿಗೆ ಬರುತ್ತದೆಂಬುದು ಬಹಳ ದಿವಸಗಳಿಂದ ಜನರಿಗೆ ಗೊತ್ತಿದೆ. ಮುಂಬೈ ರಾಜ್ಯದಲ್ಲಿ ಈ ಕಾಯಿದೆ ಮೊದಲೇ ಜಾರಿಗೆ ಬರಬೇಕಾಗಿತ್ತು. ಅದು ಬರಲಿಲ್ಲ. ಕೆಲವರು ಈ ವಿಷಯವನ್ನು ತಿಳಿದು ಹೇಗಾದರೂ ಈ ಕಾಯಿದೆಯನ್ನು ಜಾರಿಗೆ ಕೊಡುವುದನ್ನೇ ತಪ್ಪಿಸಬೇಕೆಂಬ ಬಗ್ಗೆ ಯೋಚನೆ ಸಹ ಮಾಡಿಬಿಟ್ಟರು. ಏಕೆಂದರೆ ಭೂಮಿಯನ್ನು ರೈತರಿಗೆ ಕೊಡಿಸುತ್ತೇವೆಂದು ಸರ್ಕಾರ ಹೇಳುತ್ತಿರುವುದು ಕೇವಲ ಒಂದು ಕಾಗದದ ಮಾತಾಯಿತೇ ಶಿವಾಯಿ ಮತ್ತೆ ಬೇರೇನೂ ಇಲ್ಲ. ಅದಕ್ಕಾಗಿ ಸಾಧ್ಯವಾದಷ್ಟು ಸೀಲಿಂಗ್ ಲಿಮಿಟ್ಟನ್ನು ಈಗಿರುವುದಕ್ಕಿಂತಲೂ ಕಡಮೆ ಮಾಡುವುದು ಯೋಗ್ಯ. ಹೆಚ್ಚು ಮಾಡುವುದಕ್ಕೆ ನಾನು ಪೂರ್ಣ ವಿರೋಧಿ ಇದ್ದೇನೆ. ಮುಂಬೈ ರಾಜ್ಯದಲ್ಲಿ ಸಾಧಾರಣವಾಗಿ 48 ಎಕರೆ ಎಂದು ಖುಷ್ಕಿ ಜಮೀನಿಗೆ ಒಂದು ಸೀಲಿಂಗ್ ಲಿಮಿಟ್ ಅಲ್ಲಿನ ಕಾಯಿದೆಯಲ್ಲಿ ಇತ್ತು.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಸಚಿವರು).—ಹೈದರಾಬಾದಿನಲ್ಲಿ 80 ಎಕರೆ ಇದೆ. ಮುಂಬೈ ರಾಜ್ಯದಲ್ಲಿ ಆರೀತಿ ಲೆಖ್ಖ ಇಡಲು ಅಡ್ಡಿಯಿಲ್ಲ. ಅದು ಉತ್ತಮವಾದ ಕಾಯಿದೆ. ಖಂಡಿತವಾಗಿ 48 ಎಕರೆ ಸೀಲಿಂಗ್ ಲಿಮಿಟ್ ಇಡುವುದಕ್ಕೇನೂ ಅಡ್ಡಿಯಿಲ್ಲ.

Sri H. M. CHANNABASAPPA (Minister for Public Works and Electricity).—In Bombay, for personal cultivation there is no limitation. Shall we adopt it? What is your opinion?

Sri A. R. PANCHAGAVI.—I will come to it later on. ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಭೂಮಾಲೀಕರು ಸ್ವತಃ ಸ್ವಂತ ಸಾಗುವಳಿ ಮಾಡುತ್ತಿದ್ದರೂ ಅವರಿಗೆ ಸೀಲಿಂಗ್ ಲಿಮಿಟ್ ಹಾಕಿಲ್ಲ. ಅದನ್ನು ಇಲ್ಲಿ ಹಾಕಬೇಕೇ ಬೇಡವೇ ಎಂಬ ಬಗ್ಗೆ ನಾನು ಹೇಳುತ್ತೇನೆ. ಇದರ ವಿಷಯದಲ್ಲಿ ನಾನು ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಹೇಳಬೇಕಾದರೆ ಸೀಲಿಂಗ್ ಲಿಮಿಟ್ ಹಾಕುವುದು ವಿಹಿತವೆಂದು ನನಗನ್ನಿಸುತ್ತದೆ. ಏಕೆಂದರೆ ಪರಿಸ್ಥಿತಿ ದಿನೇ ದಿನೇ ಬದಲಾಗುತ್ತಿದೆ. ಮುಂಚಿನ ಪರಿಸ್ಥಿತಿ ಈಗ ಉಳಿದಿಲ್ಲ. ಸೀಲಿಂಗ್ ಲಿಮಿಟ್ಟನ್ನು ಪರ್ಸನಲ್ ಕಲ್ಟಿವೇಷನ್ನಿಗೆ ಹಾಕದೇ ಇದ್ದರೆ, ಸಾವಿರಾರು ಎಕರೆ ಜಮೀನನ್ನು ಕಸಿದುಕೊಂಡಿರತಕ್ಕ ಭೂ ಮಾಲೀಕರನ್ನು ಹಾಗೆಯೇ ಬಿಟ್ಟರೆ, ನಾವೇ ಅವರಿಗೆ ಅವರ ಆ ಒಂದು ಅನ್ಯಾಯಕ್ಕೆ ಪುರಸ್ಕಾರ, ಉತ್ತೇಜನ ಕೊಟ್ಟ ಹಾಗಾಗುತ್ತದೆ. 1957ನೆಯ ಜನವರಿಯಿಂದ ಮುಂಬೈ ರಾಜ್ಯದಲ್ಲಿ ಯಾರು ಒತ್ತಾಯದಿಂದ ಜಮೀನನ್ನು ಕಸಿದುಕೊಂಡಿದ್ದಾರೋ ಅಂತಹ ಜಮೀನನ್ನು ಪುನಃ ರೈತರಿಗೆ ಕೊಡಿಸಬೇಕೆಂದು ಈ ಕಾಯಿದೆಯ ಒಂದು ಕ್ಲಾಜಿನಲ್ಲಿದೆ. ಆರೀತಿ ಹೇಳಬೇಕಾದರೆ ಇದರಲ್ಲಿ ಅನೇಕ ಅರ್ಥಗಳು ಬರುತ್ತವೆ. ಆದರೆ ಕೆಲವು ಅಂಶಗಳನ್ನು ಈ ಬಗ್ಗೆ ಹೇಳುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ರೈತರಿಗೆ ಪುನಃ ಜಮೀನನ್ನು ಕೊಡಿಸುವ ವಿಚಾರದಲ್ಲಿ 10ನೆಯ ಕ್ಲಾಜಿನಲ್ಲಿ ಕೊನೆಯಲ್ಲಿ "Unless on the appointed day the land is cultivated personally by the landlord or has been put to non-agricultural use" ಎಂದು ಹೇಳಿದ್ದಾರೆ. ಜಮೀನನ್ನು ಭೂಮಾಲೀಕನೇ ಸ್ವತಃ ಮಾಡುತ್ತಿದ್ದರೆ, ಅಂತಹ ಜಮೀನನ್ನು ಪುನಃ ರೈತನಿಗೆ ಕೊಡುವುದಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಯಾರಾದರೂ ಒತ್ತಾಯದಿಂದ ಸಾವಿರಾರು ಎಕರೆ ಜಮೀನನ್ನು ರೈತನಿಂದ ಕಸಿದುಕೊಂಡು ಆಮೇಲೆ ಸ್ವಂತ ವ್ಯವಸಾಯ ಮಾಡುತ್ತಿದ್ದರೆ ಪುನಃ ರೈತರಿಗೆ ಕೊಡುವುದಿಲ್ಲವೆಂಬುದಾಗಿ ಇದರ ಅರ್ಥವಾಗುತ್ತದೆ. ಹಾಗೆ ಮಾಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಜಮೀನು ಮಾಲೀಕನು ಯಾವನೇ ಸ್ವತಃ ವ್ಯವಸಾಯ ಮಾಡುತ್ತಿದ್ದರೂ ಒತ್ತಾಯದಿಂದ ಬಿಡಿಸಿಕೊಂಡಿದ್ದಂಥ ಜಮೀನನ್ನು ಪುನಃ ರೈತನಿಗೆ ಕೊಡಿಸಬೇಕು. ಆದರೆ ಅನೇಕರು ಈ ವಿಚಾರದಲ್ಲಿ ಬೇರೆ ಬೇರೆ ರೀತಿಯಲ್ಲಿ ಸಲಹೆ ಕೊಟ್ಟಿದ್ದಾರೆ. ಅನೇಕ ರೈತರು ಜಮೀನನ್ನು ಬಿಡುವಾಗ ಹಾಗೇ ಬಿಟ್ಟಿಲ್ಲ. ಕೆಲವರು ಜಮೀನನ್ನು ಬಿಡುವಾಗ ಹಣವನ್ನು ಕೂಡ ತೆಗೆದುಕೊಂಡಿದ್ದಾರೆ. ಆ ರೀತಿ ಮೊಬಲಗನ್ನು ತೆಗೆದುಕೊಂಡು ಲಾಭ ಪಡೆದು ಜಮೀನನ್ನು ಬಿಟ್ಟಂಥ ರೈತರಿಗೆ ಆ ಜಮೀನನ್ನು ಪುನಃ ಕೊಡಿಸುವುದು ಅನ್ಯಾಯ ಮಾಡಿದಂತಾಗುತ್ತದೆ. ಯಾವ ಜಮೀನನ್ನೇ ಆಗಲಿ ಒತ್ತಾಯದಿಂದ ರೈತನಿಂದ

ಕಸಿದುಕೊಂಡು ಭೂಮಾಲೀಕನು ಸ್ವತಃ ಸಾಗುಮಾಡುತ್ತಾನೋ ಅಂತಹ ಜಮೀನನ್ನು ಪುನಃ ರೈತನಿಗೆ ಕೊಡಿಸುವುದಕ್ಕೆ ಯಾವ ಅಡ್ಡಿಯೂ ಬರಬಾರದು; ಒತ್ತಾಯದಿಂದ ಕಸಿದುಕೊಂಡ ರೈತನ ಜಮೀನನ್ನು ಪುನಃ ರೈತನಿಗೆ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ.

Sri Kadidal MANJAPPA.—That is one of the suggestions made by the Land Reforms Committee.

ಶ್ರೀ ಎ. ಆರ್. ಪಂಚಗವಿ.—ನಾನು ಇನ್ನೊಂದು ವಿಷಯವನ್ನು ತಿಳಿಸಬೇಕೆಂದಿದ್ದೇನೆ. ಭೂಮಾಲೀಕನು ಜಮೀನನ್ನು ರೈತನಿಂದ ಬಿಡಿಸಿಕೊಳ್ಳುವಾಗ ಅನೇಕ ರೈತರು ಹಣವನ್ನು ತೆಗೆದುಕೊಂಡು ಭೂಮಾಲೀಕನಿಗೆ ಜಮೀನನ್ನು ಸರೆಂಡರ್ ಮಾಡಿದ್ದಾರೆ. ಆ ರೀತಿ agreement for consideration ಆಗಿ ಮೊಬಲಗು ತೆಗೆದುಕೊಂಡು ಜಮೀನು ಬಿಟ್ಟುಕೊಟ್ಟಿದ್ದರೆ, ಅಂತಹ ಜಮೀನನ್ನು ವಾಪಸ್ಸು ಕೊಡಬೇಕೆಂದು ನಾವು ತೀರ್ಮಾನ ಮಾಡುವುದು ತಪ್ಪಾಗುತ್ತದೆಂದು ನನಗನ್ನಿಸುತ್ತದೆ. ಹಣಕೊಟ್ಟು ಭೂಮಿ ಪಡೆದ ನಂತರ, ಹಣ ತೆಗೆದುಕೊಂಡು ರೈತ ಜಮೀನು ಬಿಟ್ಟನಂತರ ಮಾಲೀಕರಿಂದ ಪುನಃ ರೈತನಿಗೆ ಜಮೀನು ಕೊಡಿಸುವುದು ಸರಿಯಲ್ಲ. ಸ್ವಯಂ ಪ್ರೇರಿತನಾಗಿ ರೈತ ಬಿಟ್ಟಿದ್ದಾನೆಂದು ನಾವು ಅಂಥ ಸಂದರ್ಭಗಳಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ಕೆಲವು ಭಾಗಗಳಲ್ಲಿ ಹೀಗಾಗಿದೆ. ಅದನ್ನು ವಿಚಾರಿಸಿ ತಿಳಿದುಕೊಳ್ಳಬಹುದು. ರೈತ ಸ್ವತಃ ಒಂದು ತಾಲ್ಲೂಕು ಕಛೇರಿಗೆ ಹೋಗಿ ಅಮಲ್ದಾರರ ಕಡೆ ಒಮ್ಮೆಯಲ್ಲ, ನಾಲ್ಕಾರು ಬಾರಿ ಪ್ರಸ್ತಾಪ ಮಾಡಿರುವ ಪ್ರಸಂಗಗಳು ಸಹ ಇವೆ. ಅಮಲ್ದಾರರೂ ಕೂಡ ಭೂಮಿಯನ್ನು ಬಿಡಕೂಡದು, ಬಿಟ್ಟರೆ ಹಕ್ಕು ಹೋಗುತ್ತದೆ ಎಂದು ತಿಳಿಸಿದ್ದಾರೆ. ಒತ್ತಾಯದಿಂದಲೂ ಕೆಲವರು ಬಿಟ್ಟಿದ್ದಾರೆ. ಆದರೆ ಮೊಬಲಗು ತೆಗೆದುಕೊಂಡು ಬಿಟ್ಟಿರುವವರೇ ಹೆಚ್ಚು. ಹಾಗಿರುವಾಗ, ಹಣ ತೆಗೆದುಕೊಂಡು ತಾನಾಗಿಯೇ ಸ್ವಸಂತೋಷದಿಂದ ಭೂಮಿಗೆ ರಾಜೀನಾಮೆಕೊಟ್ಟಿರುವಾಗ ಭೂಮಾಲೀಕರ ಕಡೆ ಆಭೂಮಿ ಹೋದ ಮೇಲೆ ಪುನಃ ಪುನಃ ಅದನ್ನು ವಾಪಸು ಪಡೆಯುವುದು ಯೋಗ್ಯವೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಕೊಂಡವನೂ ಸಹ ಸ್ವತಃ ವ್ಯವಸಾಯ ಮಾಡುವ ರೈತನಾಗಿರುವ ಸಂದರ್ಭಗಳೂ ಇವೆ. ಮುಂಬಯಿ ರಾಜ್ಯದ ಕಾಯಿದೆ ಪ್ರಕಾರ ಯಾರು ಒಕ್ಕಲಿಗನಲ್ಲ ಅಂಥವನಿಗೆ ಜಮೀನು ಕೊಡಲು ಅವಕಾಶವಿಲ್ಲ ಹಾಗಿರುವಾಗ ಜಮೀನು ಕೊಂಡವನೂ ಒಕ್ಕಲಿಗನಾಗಿದ್ದರೆ ಭೂಮಿಯಿಂದ ಅವನನ್ನು ಬಿಡಿಸಲು ಸಾಧ್ಯವೆ? ಇಂಥ ಪರಿಸ್ಥಿತಿಯೂ ಇದೆ. ಹಣಕೊಟ್ಟು ಕೊಂಡವನಿಂದ ಜಮೀನು ಕಸಿದುಕೊಂಡು ರೈತರಿಗೆ ಕೊಡಿಸುವುದು ಕಷ್ಟಸಾಧ್ಯ. ಇದರಲ್ಲಿ ಹಕ್ಕಿನ ಪ್ರಶ್ನೆ ಬರುತ್ತದೆ. ಮೊಬಲಗು ಕೊಟ್ಟ ರೈತ ಹೇಗೆ ತೆಗೆದುಕೊಂಡ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಮಾರಿದವನೂ, ಕೊಂಡವನೂ ಇಬ್ಬರೂ ಒಕ್ಕಲುತನ ಮಾಡುವವರೇ ಆಗಿರುವಾಗ, ರೈತರೇ ಆಗಿರುವಾಗ, ಅಂಥವರಿಂದ ಭೂಮಿ ಕಸಿದು ಕೊಂಡರೆ ಅನ್ಯಾಯ ಮಾಡಿದಂತಾಗುತ್ತದೆ. ಈ ಬಗ್ಗೆ ಇನ್ನೂ ಕೆಲವು ಸೇಫ್ ಗಾರ್ಡ್ಸ್ ಇರುವುದು ಉತ್ತಮವೆಂದು ನನಗೆ ಕಾಣುತ್ತದೆ. ಕೊಂಡವನ ಕಡೆಯಿಂದ ಆಸ್ತಿ ಕಸಿದು ಕೊಳ್ಳುವುದನ್ನು ಸ್ವಲ್ಪ ಮಟ್ಟಿಗೆ ವಿಚಾರ ಮಾಡಬೇಕಾಗುತ್ತದೆ. ಆ ಬಗ್ಗೆ ನಾವು ಹೇಳುವುದಾದರೆ 10ನೆಯ ಕಲಮಿನ ನಾಲ್ಕನೆಯ ಉಪಕಲಮಿನಲ್ಲಿ ಇದರ ವಿಷಯದಲ್ಲಿ ಹೇಗೆ ಮಾಡಬೇಕೆಂದು ಹೇಳಿದೆ;

> "notwithstanding that another person may be in possesion of the land as a tenant or otherwise, and where such other person is so in possession he shall be liable to be evicted."

ಬೋನ ಫೈಡಿ ಪರ್ಪಸಸ್‌ಗಾಗಿ ಬೆಲೆ ಕೊಟ್ಟು ವ್ಯವಸಾಯಗಾರ ತೆಗೆದುಕೊಂಡಿದ್ದರೂ ಹೀಗೆ ಮಾಡುವುದು ಅನ್ಯಾಯ ಎಂದು ನನಗನ್ನಿಸುತ್ತದೆ.

ಇನ್ನು ಸೀಲಿಂಗ್ ವಿಚಾರಕ್ಕೆ ಬರುತ್ತೇನೆ. ಇದರಿಂದ ಮಕ್ಕಳ ವಿದ್ಯಾಭ್ಯಾಸ ಮಾಡಿಸುವುದಕ್ಕೆ ಮತ್ತು ಸಾಧಾರಣವಾಗಿ ಜೀವನ ಸಾಗಿಸುವುದಕ್ಕೆ ಕೂಡ ಕಷ್ಟವಾಗಬಹುದು ಎಂಬ ಅಭಿಪ್ರಾಯವಿದೆ. ಈಗ ನೀವೇನು ಸೀಲಿಂಗ್ ನಿಶ್ಚಿತ ಮಾಡುತ್ತೀರಿ, ಪರಮಾವಧಿ ಲಿಮಿಟ್ ಹಾಕುತ್ತೀರಿ ಅದನ್ನು ಉತ್ಪತ್ತಿಯ ಮೇಲೆ ಹಾಕುವುದಾದರೆ ಮುಂದೆ ಬರುಬರುತ್ತಾ ಹೆಚ್ಚು ಉತ್ಪತ್ತಿ ಮಾಡಲು ಪ್ರಾರಂಭಿಸಿದರೆ ಜಮೀನು ಬಿಟ್ಟುಕೊಡಬೇಕೆಂದಿಲ್ಲ. ಒಮ್ಮೆ ನಿರ್ದಿಷ್ಟ ಮಾಡಿ ಇಷ್ಟು ಎಕರೆ ಒಬ್ಬನಿಗೆ ಸೇರಬೇಕು ಎಂದು ಹೇಳಿ ಅವನಿಗೆ ವಹಿಸಿದಮೇಲೆ, ಆತ ಉತ್ತು, ಬಿತ್ತಿ ಕುಟುಂಬ ಜೀವನ ಮಾಡಲು ಅಡ್ಡಿಯಿಲ್ಲವೆಂದು ನಿರ್ದಿಷ್ಟ ಮಾಡಿದ ಮೇಲೆ, ಆತ ಆ ಜಮೀನನ್ನು ಸುಧಾರಿಸಿ ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಹತ್ತಿದರೆ ಪುನಃ ಸೀಲಿಂಗ್ ಹಾಕುವುದಿಲ್ಲ. ಉತ್ಪನ್ನದ ಮೇಲೆ ಸೀಲಿಂಗಿಲ್ಲ, ಹಿಡುವಳಿ ಮೇಲಿದೆ. ಈಗ ಸದ್ಯಕ್ಕೆ ಹಿಡುವಳಿ ಇಷ್ಟು ಎಂದು ಉತ್ಪನ್ನದ ಆಧಾರದ ಮೇಲೆ ನಿರ್ಧಾರ ಮಾಡಿದ್ದೇವೆ, 3,600 ರೂಪಾಯಿಗಳ ಉತ್ಪತ್ತಿಯಿರಬೇಕೆಂದು ಗೊತ್ತುಮಾಡಿದ್ದೇವೆ. ಉತ್ಪನ್ನದ ಆಧಾರದ ಮೇಲೆ ಪುನಃ ಪುನಃ ಬದಲು ಮಾಡಕೂಡದು, ಒಮ್ಮೆ ಇಷ್ಟು ಎಕರೆಯೆಂದು ನಿರ್ದಿಷ್ಟ ಮಾಡಿದ ಮೇಲೆ ಮತ್ತೆ ಬದಲಾಯಿಸುವ ಪ್ರಸಂಗ ಬರಬಾರದು. ಭೂಮಿಯಿಂದ ಒಕ್ಕಲಿಗ, ವ್ಯವಸಾಯಗಾರ ಜೀವನ ಸಾಗಿಸುವ ಪರಿಸ್ಥಿತಿ ಬರಬೇಕೆಂದು ಹೇಳುವುದಾದರೆ 36 ನೂರು ರೂಪಾಯಿಗಳಿಂತ ಪರಮಾವಧಿ ಕೆಳಗಿಳಿದರೂ ಅಡ್ಡಿಯಿಲ್ಲ ಎಂಬ ಅಭಿಪ್ರಾಯವಿದೆ.

ಶ್ರೀ ಎಚ್. ಎಂ. ಚನ ಬಸಪ್ಪ.—ಒಬ್ಬ ರೈತ ಬೆಂಗಳೂರಿನಲ್ಲಿ ಅಥವಾ ಮೈಸೂರಿನಲ್ಲಿ ತನ್ನ ಮಗನನ್ನು ಓದಿಸಬೇಕಾದರೆ ಸುಮಾರು ಎಷ್ಟು ಖರ್ಚಾಗುತ್ತದೆಂದು ಅಂದಾಜಿರಬೇಕು. ಅದನ್ನು ಲೆಕ್ಕ ಹಾಕಬೇಕು ಮತ್ತು ಒಂದು ಸಂಸಾರದಲ್ಲಿ ಒಬ್ಬ ರೈತನಿಗೆ 3,600 ರೂಪಾಯಿ ಉತ್ಪತ್ತಿ ಬರುವ ಜಮೀನು ಸೇರುವಂತೆ ನಿಗದಿ ಮಾಡಿದ ಮೇಲೆ ಕೆಲವು ಸುಧಾರಣೆ ಮಾಡಿದರ ಶೇಕಡ ಎಷ್ಟು ಉತ್ಪತ್ತಿ ಹೆಚ್ಚಬಹುದೆಂದು ಲೆಕ್ಕಹಾಕಿ ಅಭಿಪ್ರಾಯ ಹೇಳಿದರೆ ಉತ್ತಮ.

ಶ್ರೀ ಎ. ಆರ್. ಪಂಚಗವಿ.—ಭೂಸುಧಾರಣೆ ಮಾಡುವಾಗಎಷ್ಟುಪಟ್ಟು ಬರಬಹುದೆಂದು ನಿರ್ದಿಷ್ಟವಾಗಿ ಹೇಳಲು ಬಹಳ ಕಠಿಣವಾಗುತ್ತದೆ. ಅನೇಕ ಕಡೆಗಳಲ್ಲಿ ಎಂಟು—ಹತ್ತು ಪಟ್ಟು ಹೆಚ್ಚಾಗಿ ಬೆಳೆಯುವುದಕ್ಕೆ ಕೂಡ ಅವಕಾಶವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಹತ್ತು ಪಟ್ಟು ಬೆಳೆದಿರುವ ಒಂದು ಸಂದರ್ಭ ಹೇಳಿದರೆ ನಾವು ಹೋಗಿ ನೋಡಿಕೊಂಡು ಬರಬಹುದು. I am yet to know in the whole world where the normal production is multiplied ten times by improved methods.

ಶ್ರೀ ಎ. ಆರ್. ಪಂಚಗವಿ.—ಈಗ ನಮ್ಮ ಕಡೆ ಭಾವಿ ತೆಗೆದು ನೀರಾವರಿ ಮಾಡಲು ಸಾಧ್ಯವಿದೆ. ಅಲ್ಲದೆ ಸರ್ಕಾರದವರು ಎಲ್ಲಾ ಕಡೆಯೂ ನೀರಾವರಿಗೆ ಅವಕಾಶ ಮಾಡುತ್ತಿದ್ದಾರೆ. ಇದರ ಪರಿಣಾಮವಾಗಿ ಅನೇಕ ಕಡೆ ಬೆಳೆ ಸುಧಾರಿಸುವುದಕ್ಕೆ, ಸಾಧ್ಯವಿದೆ, ಪ್ರತಿ ಎಕರೆಯಲ್ಲೂ ಉತ್ಪನ್ನವನ್ನು ಹೆಚ್ಚು ಮಾಡಲು ಸಾಧ್ಯವಿದೆ. ಕಬ್ಬು, ಎಲೆಬಳ್ಳಿ, ಮೆಣಸಿನಕಾಯಿ ಮುಂತಾದ ತೋಟಗಳನ್ನು ಮಾಡಿದರೆ ಇದು ಸಾಧ್ಯವಿದೆ.

Sri H. M. CHANNABASAPPA.—The Hon'ble Member must know that this income of Rs. 3,600 is of general application and not prescribed only for a particular area which is capable of development of irrigation, power, etc.

ಶ್ರೀ ಎ. ಆರ್. ಪಂಚಗವಿ.—ಜಮೀನು ಸುಧಾರಣೆ ಮಾಡಿ ಹೆಚ್ಚಿಗೆ ಎಷ್ಟು ಬೆಳೆಯಬಹುದು ಎಂಬುದು ಮುಖ್ಯ ಇನ್ನು ಹೆಚ್ಚು ಸುಧಾರಣೆ ಮಾಡಿದರೆ ಎರಡು ಮೂರು ಪಟ್ಟು ಬೆಳೆಯಬಹುದು. ಈಗ ಬೆಳೆಯುವದಕ್ಕಿಂತ ಮೂರು ನಾಲ್ಕು ಪಟ್ಟು ಸರಾಸರಿ ತೆಗೆದುಕೊಂಡರೆ ಹೆಚ್ಚಿಗೆ ಬೆಳೆಯಲಿಕ್ಕೆ ಆಸ್ಪದವಿದೆ. ಆದ್ದರಿಂದ ಸೀಲಿಂಗ್ ಹಾಕುವಾಗ ಇದನ್ನು ಗಮನದಲ್ಲಿ ತೆಗೆದುಕೊಳ್ಳಬೇಕು. ರೈತನ ಪರಿಸ್ಥಿತಿ ಏನಿದೆ, ಉಳಿದವರ ಪರಿಸ್ಥಿತಿ ಏನಿದೆ ಎನ್ನುವದನ್ನು ಆಲೋಚನೆ ಮಾಡಬೇಕು. ಕೂಲಿಕಾರರು ಯಾವ ಪರಿಸ್ಥಿತಿಯಲ್ಲಿದ್ದಾರೆ, ಭೂಮಿಯ ಸ್ಥಿತಿಗತಿ ಏನಾಗಿದೆ, ಅವರು ಜೀವನ ಮಾಡಲು ಸಾಕಷ್ಟು ಆಧಾರವಿದೆಯೇ ಇಲ್ಲವೇ ಎನ್ನುವದನ್ನು ಆಲೋಚನೆ ಮಾಡಬೇಕು. ಶ್ರೀಮಂತರಾದವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಾರೆ. ರೈತನೂ ಸಹ ತನ್ನ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಕಳಿಸಬೇಕು. ಭೂಮಿಯ ಬಗ್ಗೆ ವಿಚಾರಮಾಡುವಾಗ್ಗೆ ಒಟ್ಟಿಗೆ ಎಲ್ಲರ ಬಗ್ಗೆಯೂ ವಿಚಾರ ಮಾಡಬೇಕು. ಭೂಸುಧಾರಣೆಯ ಬಗ್ಗೆ ವಿಚಾರಮಾಡುವಾಗ್ಗೆ ಅವರನ್ನು ಮರೆತರೆ ನಡೆಯುವುದಿಲ್ಲ. ಯಾರು ಮುಂಜಾನೆಯಿಂದ ಸಂಜೆಯವರೆಗೆ ಕಷ್ಟಪಟ್ಟು ಕೆಲಸ ಮಾಡುತ್ತಾರೆಯೋ ಅಂಥವರಿಗೆ ಜಮೀನು ಕೊಡಬೇಕು. ಅವರು ಶಿಕ್ಷಣ ಪಡೆಯಬೇಕು; ಅವರು ನವಕರಿ ಹಿಡಿಯಬೇಕು ಅವರಿಗೆ ಆಸ್ಪದ ಕೊಡಬೇಕು. ನೂರಾರು ಕೂಲಿಕಾರರು ಹಾಗು ಹೊಟ್ಟೆಪಾಡಿಗಾಗಿ ದುಡಿಯುವವರ ಬಗ್ಗೆ ಆಸ್ಥೆವಹಿಸದಿದ್ದರೆ ಇದು ಭೂಸುಧಾರಣೆ ಆಗುವುದಿಲ್ಲ.

Sri H. M. CHANNABASAPPA.—I would like to know from the Hon'ble Member whether he thinks that it is necessary to relieve the pressure of population on land or increase the pressure of population on land.

ಶ್ರೀ ಎ. ಆರ್. ಪಂಚಗವಿ.—ಸೀಲಿಂಗ್ ಕಡಿಮೆ ಮಾಡುವದರಿಂದ ಭೂಮಿಯ ಮೇಲೆ ಪ್ರೆಷರ್ ಕಡಿಮೆ ಮಾಡುತ್ತೇವೆ ಎಂದು ಹೇಳುವುದು ತಪ್ಪು. ಎಲ್ಲರಿಗೂ ಭೂಮಿಯನ್ನು ಒದಗಿಸಿ ಕೊಡುತ್ತೇವೆಂದು ಹೇಳುವುದು ಸಾಧ್ಯವಿಲ್ಲ. ಹೆಚ್ಚು ಜನರು ಉಪಜೀವನ ಮಾಡಿಕೊಳ್ಳುವಂತೆ ಆಗಬೇಕು. ಉಳಿದವರಿಗೂ ಕೆಲಸ ಸಿಕ್ಕಬೇಕು. ಎಲ್ಲರಿಗೂ ಭೂಮಿಯ ಮೇಲೆಯೇ ಅವಲಂಬಿಸಲು ಸಾಧ್ಯವಿಲ್ಲ. ನೂರಕ್ಕೆ 80ರಷ್ಟು ಜನ ಕೇವಲ ಭೂಮಿಯ ಮೇಲೆಯೇ ದುಡಿದು ಉಪಜೀವನ ಮಾಡುವುದು ಆಗುವುದಿಲ್ಲ, ಸಾಧಾರಣವಾಗಿ ನೂರಕ್ಕೆ 30ರಷ್ಟು ಜನರನ್ನು ಭೂಮಿಯ ಮೇಲೆ ಇಡಲು ಸಾಧ್ಯವಿದೆ. ಇದನ್ನು ವಿಚಾರ ಮಾಡಬೇಕಾಗಿದೆ. ಇಂಥ ಪರಿಸ್ಥಿತಿಯಲ್ಲಿ ಎಷ್ಟು ಜನರನ್ನು ಭೂಮಿಯ ಮೇಲೆ ಇಡಲು ಸಾಧ್ಯವಾಗಬಹುದು ಎನ್ನುವದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಬಹಳ ಜನರನ್ನು ಭೂಮಿಯ ಮೇಲೆ ಇಡಲು ಸಾಧ್ಯವಿಲ್ಲ. ಆದುದರಿಂದ ಭೂಸುಧಾರಣೆಯೊಂದಿಗೆ ಇನ್ನುಳಿದ ಇತರ ಕ್ಷೇತ್ರಗಳೂ ಸಹ ಬೆಳೆಯ ಬೇಕು. ಬೇರೆ ಕ್ಷೇತ್ರಗಳ ಕಡೆಗೆ ಜನರು ಉದ್ಯೋಗಕ್ಕಾಗಿ ಹೋಗಬೇಕು. ಎಲ್ಲ ಕ್ಷೇತ್ರಗಳಲ್ಲಿಯೂ ಸೀಲಿಂಗ್ ತೀವ್ರ ಆಗಬೇಕು. ಬೇರೆ ಕ್ಷೇತ್ರಗಳಲ್ಲಿ ಸೀಲಿಂಗ್ ಬರುವವರೆಗೆ ಭೂಸುಧಾರಣೆಯನ್ನು ತಡೆ ಹಿಡಿಯಬೇಕು ಎಂಬುದು ಸರಿಯಲ್ಲ. ಅಲ್ಲಿಯವರೆಗೆ ಕಾಯಬೇಕು ಎಂಬುದನ್ನು ಒಪ್ಪಿಕೊಂಡಿಲ್ಲ. ಆದಕಾರಣ ಆದಷ್ಟು ತೀವ್ರ ಇದು ಆಗಬೇಕು. ಈ ಎರಡೂ ಕಾರ್ಯಗಳನ್ನು ಒಂದೇ ಕಾಲಕ್ಕೆ ಮಾಡಿದರೆ ಒಪ್ಪುತ್ತೇವೆ. ಭೂಸುಧಾರಣೆಯನ್ನು ಮುಂದಕ್ಕೆ ಹಾಕಬೇಕು ಎಂಬುದನ್ನು ಮಾತ್ರ ಒಪ್ಪುವುದಿಲ್ಲ.

ಇನ್ನು ಸೀಲಿಂಗ್ ಹಾಕುವಾಗ ಅಡಿಕೆ, ತೆಂಗಿನಕಾಯಿ, ಕಾಫಿ, ರಬ್ಬರ್ ಮುಂತಾದ ದೊಡ್ಡ ದೊಡ್ಡ ಜಮೀನುದಾರರ ಭೂಮಿಯ ಮೇಲೆ ಪರಮಾವಧಿ ಮಿತಿಯನ್ನು ಹಾಕಬಾರದೆಂದು ಈ ಮಸೂದೆಯಲ್ಲಿ ಹೇಳಲಾಗಿದೆ. ಆದರೆ ಇದು ಹೋಗಬೇಕು. ಎಲ್ಲಾ ಭೂಮಿಯ ಮೇಲೆಯೂ ಪರಮಾವಧಿ ಮಿತಿ ಇರಲೇಬೇಕು. ಪ್ಲಾಂಟೇಷನ್ನಿಗಾಗಿ ಬಹಳ ವರ್ಷಗಳವರೆಗೆ ದುಡಿಯಬೇಕಾಗುತ್ತದೆ ಎಂಬ ವಾದ ಸರಿಯಾದುದಲ್ಲ. ಈ ವಿಷಯವನ್ನು ವಿಚಾರ ಮಾಡಿ ನೋಡಿದರೆ, ಯಾರೇ ಬಂಡವಾಳ ಹಾಕಿ ಅದನ್ನುಗಳಿಸಿದ್ದರೂ, ಅದು ಬಹಳ ಜನರ ಶ್ರಮದಿಂದ ಆಗಿದೆ ಎಂಬುದನ್ನು ಮರೆಯಬಾರದು. ಅಡಿಕೆ ತೋಟ, ಕಾಫಿತೋಟ ರಬ್ಬರ್ ತೋಟ ಆಗಬೇಕಾದರೆ ನೂರಾರು ಜನರು ಕೂಲಿಕಾರರು ಸತತ ದುಡಿದ ಶ್ರಮದ ಫಲವೇ ಆಗಿರುತ್ತದೆ. ದುಡ್ಡು ಕೊಟ್ಟು ಮಾಡಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ ಆದ್ದರಿಂದ ಎಲ್ಲ ಸೆಕ್ಟರ್‌ಗಳಲ್ಲಿಯೂ ಈ ಪರಮಾವಧಿ ಮಿತಿ ಬರಲೇಬೇಕು. ಅದನ್ನು ತಡೆಹಿಡಿಯ ಬೇಕು ಎಂಬುದು ನನ್ನ ಅಭಿಪ್ರಾಯವಲ್ಲ.

12 NOON

ಇನ್ನು ಈ ಭೂಮಿಯ ಪರಮಾವಧಿ ಬಗ್ಗೆ ಕೆಲವು ಮಾತುಗಳನ್ನು ಹೇಳುವಾಗ ಮುಂದಿನ ಭವಿಷ್ಯದ ಬಗ್ಗೆ ಕೆಲವು ಪ್ರಶ್ನೆಗಳನ್ನು ಎತ್ತಿ ಅದರ ಬಗ್ಗೆ ಉತ್ತರವನ್ನು ಹೇಳಿದೆ. ತಾವು ಒಕ್ಕಲಿಗರು ಅಥವಾ ಬಹಳ ಭೂಮಿ ಇದ್ದವರು ತಮ್ಮ ಮಕ್ಕಳನ್ನು ಕುರಿತಷ್ಟೇ ಚಿಂತೆ ಮಾಡಬಾರದು. ನಮ್ಮ ಸುತ್ತಮುತ್ತ ನಮ್ಮ ಹಳ್ಳಿ, ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಉಳಿದವರಿಗೂ ಭೂಮಿಯಲ್ಲಿ ಲಾಭ ಸಿಕ್ಕಬೇಕು. ಯಾರು ಕಷ್ಟಪಟ್ಟು ದುಡಿಯುತ್ತಾರೋ, ಕೂಲಿಗಾರರಾಗಿರುತ್ತಾರೋ ಅವರಿಗೂ ಅನುಕೂಲವಾಗುವಂತೆ ಸೀಲಿಂಗ್ ನಿರ್ಧರಿಸುವುದು ಅವಶ್ಯಕ ಎಂದು ಹೇಳಿದೆ. ಇನ್ನು ಕೆಲವು ಮಾತು ಹೇಳುವಾಗ ಈ ಸೀಲಿಂಗ್ ಒಮ್ಮೆ ಹಾಕಿದಮೇಲೆ, ಒಮ್ಮೆ ಇಂತಿಷ್ಟು ಜಮೀನು ಇರಬೇಕೆಂದು ನಿರ್ಧರಿಸಿದಮೇಲೆ, ಜಮೀನನ್ನು ಬಿಡಿಸಿಕೊಳ್ಳುವಾಗ ಸಣ್ಣ ಹಿಡುವಳಿದಾರರಿಗೆ ಕೆಲವು ವಿನಾಯಿತಿ ಕೊಡಬೇಕೆಂದು ಮಾಡಿದ್ದೇವೆ. ಜಮೀನು ಬಿಡಿಸಿಕೊಳ್ಳುವಾಗ ಪೂರ್ಣ ಬಿಡಿಸಿಕೊಳ್ಳಬಹುದು ಎಂಬ ಕ್ಲಾಸ್ ಇದೆ. ಆದರೆ ಅದರಲ್ಲಿ ಒಂದು ಅಡಚಣೆ

ಏನೆಂದರೆ ಜಮೀನು ಬಿಡಿಸಿಕೊಳ್ಳುವಾಗ ವ್ಯವಸಾಯ principal source of income ಆಗಬೇಕೆಂದು ಒಂದು ನಿರ್ಬಂಧ ಹಾಕಿದೆ. ಹೀಗೆ ಹಾಕಿದರೆ ಅನೇಕ ಕಡೆಗಳಲ್ಲಿ ಸಣ್ಣಸಣ್ಣ ಉಪ ದಂಧೆಗಳನ್ನು ಮಾಡಿಕೊಂಡಿರುತ್ತಾರೆ. ಅಂತಹವರಿಗೆ ಭೂಮಿಸಿಕ್ಕುವುದೇ ಕಷ್ಟವಾಗು ತ್ತದೆ. ಸಾಧಾರಣವಾಗಿ ನಾಲ್ಕು-ಐದು ಎಕರೆ ಜಮೀನು ಇದ್ದು, ಊರಿನಲ್ಲಿ ಒಂದು ಕಿರಾಣಿ ಅಂಗಡಿ ಇಟ್ಟುಕೊಂಡು 300, 400 ರೂಪಾಯಿ ವ್ಯಾಪಾರ ಮಾಡುತ್ತಿರುತ್ತಾನೆ. ಅಂತಹವನು ಭೂಮಿ ಬಿಡಿಸಿಕೊಳ್ಳಬೇಕೆಂದರೆ ಸಾಧ್ಯವಿಲ್ಲ. ಏಕೆಂದರೆ main source of income ಯಾವುದು ಎಂದು ವಿಚಾರ ಮಾಡುವಾಗ ಕಿರಾಣಿ ಅಂಗಡಿ ಉತ್ಪನ್ನ ಹೆಚ್ಚಾಗಬಹುದು, ಜಮೀನಿನ ಉತ್ಪನ್ನ ಕಡಿಮೆ ಆಗಬಹುದು. ಅಂತಹವನಿಗೆ ಜಮೀನು ಸಿಕ್ಕುವುದಿಲ್ಲ. ಅದಕ್ಕೇ ಈ principal source of income ಎಂಬುದನ್ನು ಹಾಕಕೂಡದು ಎಂದು ನನ್ನ ಅಭಿಪ್ರಾಯ. ಒಂದುವೇಳೆ ಹಾಕಲೇಬೇಕೆಂದು ಅಭಿಪ್ರಾಯವಿದ್ದರೆ ಅಂತಹವರ ಉತ್ಪನ್ನ ಸಾಧಾರಣವಾಗಿ 1,200ಕ್ಕಿಂತ ಹೆಚ್ಚಾಗಿ ಎರಡ ಯ ಉತ್ಪನ್ನ ಬರುತ್ತಿದ್ದರೆ ಅಂತಹವರಿಗೆ ಜಮೀನು ಬಿಡಿಸಿಕೊಡಕೂಡದು ಎಂದು ಹಾಕಿ. ಏನಾದರೂ ಒಂದು ಪರಮಾವಧಿ ಇನ್‌ಕಂ ಲಿಮಿಟ್ ಹಾಕಿ, ಕಿರಾಣಿ ಅಥವಾ ಮತ್ತೊಂದು ಉದ್ಯೋಗದಲ್ಲಿ 1,200ಕ್ಕಿಂತ ಕಡಿಮೆ ಉತ್ಪನ್ನ ಬರುವುದಾದರೆ ಅಂಥವರಿಗೆ ಜಮೀನು ಬಿಡಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಮಸೂದೆ ಪ್ರಕಾರ ಅಂತಹವರಿಗೆ ಜಮೀನು ಸಿಕ್ಕುವುದು ಕಷ್ಟ. 20ನೆಯ ಸೆಕ್ಷನ್ ಕ್ಲಾಸ್ 10—ಇದರ ಕಡೆಗೆ ತಮ್ಮ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ.

> "The income by the cultivation of the land of which he is entitled to take possession is the principal source of income for the maintenance of the landlord."

ಅವನಿಗೆ ಜಮೀನಿನಲ್ಲಿ ಉತ್ಪನ್ನ ಬರುವುದು ಬಹಳ ಕಡಿಮೆ, 200, 300 ರೂಪಾಯಿ ಬರಬಹುದು. ಅಂತಹವನು ಒಂದು ಕಿರಾಣಿ ಅಂಗಡಿ ಅಥವಾ ಮತ್ತಾವುದಾದರೂ ಇಡುತ್ತಾನೆ, ವರ್ಷದಲ್ಲಿ 500, 600ಗಳಿಸುತ್ತಾನೆ. ಅಂತಹವನಿಗೆ ಜಮೀನು ಸಿಕ್ಕುವುದಿಲ್ಲ. ಈ ಮಾತು ಲಕ್ಷ್ಯದಲ್ಲಿಡಬೇಕು. ಅಂತಹವನಿಗೂ ಜಮೀನು ಸಿಕ್ಕಬೇಕು. Principal source of income ಎಂಬ ಈ ನಿರ್ಬಂಧ ಏನಿದೆ ಇದನ್ನು ತೆಗೆಯಬೇಕೆಂದು ನನ್ನ ಅಭಿಪ್ರಾಯ. ಒಂದುವೇಳೆ ಹಾಕುವುದಾದರೆ 1,200ಕ್ಕಿಂತ ಹೆಚ್ಚು ಉತ್ಪನ್ನ ಜಮೀನು ಬಾಬಿನಿಂದಲ್ಲದೇ ಬೇರೆ ಭಾಗದಿಂದ ಬರುತ್ತಿದ್ದರೆ ಅಂತಹವನಿಗೆ ಜಮೀನು ಸಿಕ್ಕಕೂಡದು ಎಂದು ಮಾಡುವುದರಲ್ಲಿ ಅಡ್ಡಿ ಇಲ್ಲ.

ಆಮೇಲೆ ಗೇಣಿಯಲ್ಲೂ ಕೂಡ ಕೆಲವು ಅಡಚಣೆಗಳು ಬರುತ್ತಿವೆ. ಮುಂಬೈ ರಾಜ್ಯದಲ್ಲಿ ಗೇಣಿಯ ಬಗ್ಗೆ ಒಂದು ನಿರ್ದಿಷ್ಟ ಮಿತಿಗೊಳಿಸಲಾಗಿದೆ. ಸಾಧಾರಣ ಅಸೆಸ್‌ಮೆಂಟ್ ಏನಿದೆ ಅದರ ಐದು ಪಟ್ಟಿಗಿಂತ ಹೆಚ್ಚಾಗಕೂಡದು ಎಂದು ಮುಂಬೈ ರಾಜ್ಯದಲ್ಲಿರತಕ್ಕ ಕಾಯಿದೆಯಲ್ಲಿದೆ. ಪ್ಲಾನಿಂಗ್ ಕಮಿಷನ್ ಅವರೂ ಕೂಡ ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ಬಿಲ್‌ನಲ್ಲೂ ಕೂಡ ವ್ಯವಸ್ಥೆ ಮಾಡಲಾಗಿದೆ. ಇದರ ಬಗ್ಗೆ ನನ್ನ ವಾದ ಏನೂ ಇಲ್ಲ. ಆದರೆ ಯೂನಿಫಾರಂ ಲಾ ಮಾಡುವಾಗ ಇದನ್ನೇ ಎಲ್ಲಾ ಕಡೆಗೂ ಮಾಡಿದ್ದರೆ ಉತ್ತಮವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಎಲ್ಲಾ ಭಾಗಕ್ಕೂ ಅನ್ವಯಿಸಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂದು ನನ್ನ ಅಭಿಪ್ರಾಯ.

Sri H. M CHANNABASAPPA.—Does the Hon'ble Member know that in Chitaldrug district, the assessment varies from four annas to eight annas per acre and five times this will amount to about two or three rupees? Is it his idea that two or three rupees should be reasonable in Chitaldrug district?

ಶ್ರೀ ಎ. ಆರ್. ಪಂಚಗವಿ.—ಈ ತೊಂದರೆ ಎಲ್ಲಾ ಕಡೆಯೂ ಇದೆ. ನಮ್ಮ ಭಾಗದಲ್ಲೂ ಈ ತೊಂದರೆ ಇದ್ದೇ ಇದೆ. ಹೊಸದೇನೂ ಅಲ್ಲ. ಮುಂಚಿನ ಸಂಸ್ಥಾನಗಳಲ್ಲಿ ಅಸೆಸ್‌ಮೆಂಟ್ ಹೆಚ್ಚಾಗಿತ್ತು. ಇದು ನಿಜ. ಇದೇ ಬೇಸಿಸ್ ಎಂದು ತೆಗೆದುಕೊಂಡರೆ ಹೆಚ್ಚಾಗುತ್ತದೆ. ಅಲ್ಲಿಯ ರೈತರಿಗೆ ಸ್ವಲ್ಪಮಟ್ಟಿಗೆ ಅನ್ಯಾಯವಾಗುತ್ತದೆ. ಇದು ನಿಜ. ಕೆಲವು ಕಡೆ ವೇರಿಯೇಷನ್ ಇದ್ದೇ ಇದೆ. ಆದರೆ ಆದಷ್ಟು ತಾವು ಈ ರಿವಿಜನ್ ಆಫ್ ಸೆಟ್ಲ್‌ಮೆಂಟ್ ಮಾಡಬೇಕು. ಎಲ್ಲಾ ಕಡೆಯೂ ಅಸೆಸ್‌ಮೆಂಟ್ ತೀವ್ರ ನಿರ್ಧಾರ ಮಾಡಬೇಕು. ಅದನ್ನು ಮಾಡುವವರೆಗೂ ಇದು ಟೆಂಪೂರರಿ ಅರೇಂಜ್‌ಮೆಂಟ್ ಅಂತ ಮುಂಬೈನಲ್ಲಿ ಏನಿದೆ ಅದನ್ನೇ ಅನ್ವಯಿಸಿದ್ದರೆ ನೆಟ್ಟಗಿತ್ತು. ಪ್ರತಿಸಲವೂ ನಾವು ಕೋರ್ಟಿಗೆ ಹೋಗುವ ಪ್ರಸಂಗ ಬರುತ್ತದೆ. ಉತ್ಪನ್ನ 1,000 ಬಂತು ಎಂದು ಮಾಲೀಕ ಅನ್ನುವುದು, 100 ರೂಪಾಯಿ ಬಂತು ಎಂದು ರೈತ ಎನ್ನುವುದು, ಈ ವಾದ ವಿವಾದ ಕೊನೆಗೊಳ್ಳುವುದೇ ಇಲ್ಲ. ಇದಕ್ಕೆ ಆಸ್ಪದ ಕೊಡದಂತೆ ಮಾಡುವುದು ಮುಖ್ಯವಾದದ್ದು. ಅದರಲ್ಲೂ ಈಗಿನ ಬಿಲ್‌ನಲ್ಲಿ ಶಕ್ಯವಿದ್ದಷ್ಟು ವಾದ ವಿವಾದಗಳಿಗೆ ಆಸ್ಪದ ಕೊಡಲಾಗದಂತೆ ಮಾಡಲಾಗಿದೆ, ಆದರೂ ಕೂಡ ಕಚೇರಿಗಳಿಗೆ ಹೋಗುವುದು ರೈತರಿಗೆ ತಪ್ಪಲಿಲ್ಲವಲ್ಲಾ ಎಂದು ನನಗೆ ಕಳವಳ. ಪೂರ್ಣ ಹೋಗದೇ ಇರುವುದಕ್ಕೆ ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ಲ್ಯಾಂಡ್ ಕಮಿಷನ್ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ. ಒಂದೇ ಒಂದು ಲ್ಯಾಂಡ್ ಕಮಿಷನ್ ಅನ್ನು ರಾಜ್ಯಾದ್ಯಂತ ಕೆಲಸ ಮಾಡಲು ನೇಮಿಸುವಂತೆ ಈ ಮಸೂದೆಯಲ್ಲಿ ವಿಧಾಯಕವಾಡಲಾಗಿದೆ. ಆದರೆ ಅವರ ಕರ್ತವ್ಯವನ್ನು ನೋಡಿದರೆ ಒಂದೇ ಕಮಿಷನ್ನಿಗೆ ಇಷ್ಟೆಲ್ಲಾ ಕೆಲಸ ಮಾಡುವುದು ಸಾಧ್ಯವಿದೆಯೇ ಎನ್ನುವುದು ವಿಚಾರ ಮಾಡತಕ್ಕ ಮಾತು. Delimitation of local areas, ಬೇರೆಬೇರೆ ಭಾಗಗಳು ವಿಂಗಡಣೆಯಾಗಬೇಕು. ಅದೇ ಪ್ರಕಾರ ಒಂದು ಭಾಗದಲ್ಲಿರತಕ್ಕ ಜಮೀನುಗಳ classification ಆಗಬೇಕು. ಬೇರೆ ಬೇರೆ ವರ್ಗಾವಣೆಯಾಗಬೇಕು. ಅದರಲ್ಲಿ ಪುನಃ ಖುಷ್ಕಿ, ತರೀ ಅಥವಾ ಬಾಗಾಯತು ಈ ಮೂರು ರೀತಿಯ ವರ್ಗಾವಣೆಯಾಗಿ, ಅದರಲ್ಲಿ ಕ್ಲಾಸಿಫಿಕೇಷನ್ ಆಗಬೇಕು. First grade, second grade, third grade ಈ ರೀತಿ ವಿಂಗಡಣೆಮಾಡಿ ಅದನ್ನೆಲ್ಲ ನೋಟಿಫೈ ಮಾಡುವವರೆಗೆ ಲ್ಯಾಂಡ್ ಕಮಿಷನ್ನಿಗೆ ಬಹಳ ಹೆಚ್ಚಾದ ಕೆಲಸವಿರುತ್ತದೆ. ಒಂದೇ ಲ್ಯಾಂಡ್ ಕಮಿಷನ್‌ನಿಂದ ಇಷ್ಟೆಲ್ಲ ಕೆಲಸವಾಗುವುದು ಕಷ್ಟವಾದ ಕೆಲಸ. ಇದರ ಜೊತೆಗೆ standard rent ಮತ್ತು standard yield ಇವನ್ನು ಕೂಡ ನಿರ್ಧರಿಸುವವರು ಲ್ಯಾಂಡ್ ಕಮಿಷನ್ನಿನವರು.

ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಗೋಕಾಕ್ ತಾಲ್ಲೂಕಿನಲ್ಲಿ ತರೀ ಮತ್ತು ಖುಷ್ಕಿ ಭೂಮಿಯ ಬೆಲೆ ಏನಿದೆ ಮತ್ತು ಕೂಲಿಯ ದರ ಹೇಗಿದೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎ. ಆರ್. ಪಂಚಗವಿ.—ಸಾಮಾನ್ಯವಾಗಿ ಗಂಡುಮಕ್ಕಳಿಗೆ ಎಂಟಾಣೆಯಿಂದ ಒಂದೂಕಾಲು ರೂಪಾಯಿವರೆಗೂ ಮತ್ತು ಹೆಣ್ಣುಮಕ್ಕಳಿಗೆ ಆರಾಣೆಯಿಂದ ಹದಿನಾಲ್ಕಾಣೆಯವರೆಗೂ ಇದೆ. ಬೇರೆಬೇರೆ ಭಾಗಗಳಲ್ಲಿ, ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆಯಾಗುತ್ತದೆ. ಬೇಸಿಗೆ ಮತ್ತು ಆಷಾಢದಲ್ಲಿ ಕೆಲಸವಿಲ್ಲದೆ ಇರುವುದರಿಂದ ಆ ಕಾಲದಲ್ಲಿ ಅತ್ಯಂತ ಕಡಮೆ ದರ ವಿರುತ್ತದೆ. ಒಂದುದಿನಕ್ಕೆ ಆರಾಣೆ ಕೊಟ್ಟರೂ ಸಾಕು ಎಂದು ಹೇಳುವ ಸ್ಥಿತಿಯಲ್ಲಿದ್ದರೂ ಕೆಲಸವಿಲ್ಲದೆ ಇರಬೇಕಾಗುತ್ತದೆ. ಸುಗ್ಗಿ ಕಾಲದಲ್ಲಿ ಒಂದು ರೂಪಾಯಿ, ಒಂದೂಕಾಲು ರೂಪಾಯಿ ಕೊಟ್ಟರೂ ಸಹ ದುಡಿಯುವ ಜನರು ಸಿಕ್ಕುವುದಿಲ್ಲ. ಎಲ್ಲ ಕಡೆಯೂ ಸಾಮಾನ್ಯವಾಗಿ ಇದೇ ಪರಿಸ್ಥಿತಿ ಇರಬಹುದೆಂದು ನನ್ನ ಭಾವನೆ. ನಮ್ಮ ಕಡೆಗಳಲ್ಲಿ ದುಡಿಯುವ ಜನರಿಗೆ ಊಟ ಹಾಕುವುದಿಲ್ಲ.

ಜಮೀನಿನ ಬೆಲೆ, ಖುಷ್ಕಿ ಜಮೀನಿಗೆ ಒಂದು ಎಕರೆಗೆ 50 ರೂಪಾಯಿನಿಂದ ಹಿಡಿದು ಎರಡುಸಾವಿರ ರೂಪಾಯಿಗಳವರೆಗೂ ಇದೆ. Fertility, location, ಮಾರ್ಕೆಟ್ ಪ್ರದೇಶಕ್ಕೆ ಸಾಮೀಪ್ಯ ಇವುಗಳನ್ನೆಲ್ಲ ಅನುಸರಿಸಿ ಬೆಲೆ ಗೊತ್ತಾಗುತ್ತದೆ. ತೋಟಗಳು ಇದ್ದರೆ, ಜಮೀನಿಗೆ ಬಾವಿ ಸೌಕರ್ಯವಿದ್ದರೆ ಒಂದು ಸಾವಿರದಿಂದ ಹಿಡಿದು ಮೂರು-ನಾಲ್ಕುಸಾವಿರ ರೂಪಾಯಿಗಳವರೆಗೂ ಬೆಲೆ ಇದೆ. ಘಟಪ್ರಭ ಕೆಳಗೆ ಮತ್ತು ನಾಲೆಗಳಿಂದ ನೀರಾವರಿಯಾಗುವಂಥ ಜಮೀನಿನ ಬೆಲೆ ಸಾಧಾರಣವಾಗಿ ಒಂದೂವರೆ ಸಾವಿರ ರೂಪಾಯಿನಿಂದ ಎರಡುಸಾವಿರ ರೂಪಾಯಿಗಳವರೆಗೂ ಪರಮಾವಧಿ ಬೆಲೆ ಇದೆ.

ಇದೆಲ್ಲವನ್ನೂ ನಿರ್ಧರಿಸುವಾಗ ಲ್ಯಾಂಡ್ ಕಮಿಷನ್ನಿನವರ ಕೆಲಸ ಎಷ್ಟು ಕಷ್ಟಕರವಾದುದೆಂದು ಹೇಳುತ್ತಿದ್ದೇನೆ. ಒಂದೇ ಲ್ಯಾಂಡ್ ಕಮಿಷನ್ನಿಗೆ ಇಷ್ಟೆಲ್ಲ ಮಾಡುವುದಕ್ಕೆ ಸಾಧ್ಯವಾಗಲಾರದು. ಈ ಬಗ್ಗೆ ವಿಚಾರಮಾಡಿ ಹೆಚ್ಚು ಕಮಿಷನ್‌ಗಳನ್ನು ನೇಮಕ ಮಾಡಿಕೊಳ್ಳುವುದು ಉತ್ತಮವಾಗುತ್ತದೆ.

ವಿನಾಯಿತಿಯನ್ನು ಕೊಡುವಾಗ ಕೆಲವು ವಿದ್ಯಾ ಮತ್ತು ಇತರ ಸಂಸ್ಥೆಗಳಿಗೆ ಅದನ್ನು ಅನ್ವಯಿಸಬೇಕು.

ಒಬ್ಬ ಮಾನ್ಯಸದಸ್ಯರು.—ಪ್ಲಾಂಟೇಷನ್ ವಿಚಾರದಲ್ಲಿ ನಿಮ್ಮ ಅಭಿಪ್ರಾಯವೇನು ?

ಶ್ರೀ ಎ. ಆರ್. ಪಂಚಗವಿ.—ಪ್ಲಾಂಟೇಷನ್‌ಗಳಿಗೆ future cultivations ಅಷ್ಟೇ ಅಲ್ಲ, ಈಗಲೂ ಕೂಡ ಮಿತಿಯನ್ನು ಹಾಕಬೇಕೆನ್ನುವುದು ನನ್ನ ಅಭಿಪ್ರಾಯ. Ceiling in respect of future acquisitions of plantations such as coffee, rubber and tea 100 ಎಕರೆವರೆಗೂ ಹಾಗೆಯೇ cardamom plantations 25 acres, coconut 20 acres and areca and pepper 10 acres ಎಂದು ಸೀಲಿಂಗ್ ಲಿಮಿಟ್ ಹಾಕಿದ್ದಾರೆ. ಆದರೆ ಉಳಿದ ರೀತಿಯ ಜಮೀನಿರುವವರ ವಿಷಯದಲ್ಲಿ 3,600 ರೂಪಾಯಿಗಳವರೆಗೂ ಬರುವ ಜಮೀನು ಎಂದು ಹಾಕಿದ್ದಾರೆ. ಪ್ಲಾಂಟೇಷನ್ ಅವರಿಗೆ 25 ಎಕರೆ ಅಥವಾ 100 ಎಕರೆ ಹೀಗೆ ಸೀಲಿಂಗ್ ಹಾಕಿ, ಉಳಿದ ಜಮೀನು ಇರುವವರಿಗೆ 3,600 ರೂಪಾಯಿ ಎಂದು ಮಿತಿ ಹಾಕುವುದರಲ್ಲಿ ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಒಬ್ಬನಿಗೆ 3,600 ರೂಪಾಯಿ ಉತ್ಪನ್ನ ಬರುವಷ್ಟು ಜಮೀನು ಎಂದು ಹಿಡಿದುಕೊಂಡು ಹೋದರೆ ಅದನ್ನೇ ಎಲ್ಲ ಕಡೆಗೂ ಅನ್ವಯಿಸಬೇಕು. ಪ್ಲಾಂಟೇಷನ್‌ಗಳಿಗೆ ಕೂಡ ಅನ್ವಯಿಸಬೇಕು ; ಭೇದಭಾವ ಮಾಡಬಾರದು. ಎಲ್ಲ ಕಡೆಗೂ ಒಂದೇರೀತಿ ಇರಬೇಕಾಗಿದೆ ಎನ್ನುವುದು ನನ್ನ ಸ್ವಚ್ಛವಾದ ಅಭಿಪ್ರಾಯ.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ಜಮೀನು ಸುಧಾರಣೆ ಮಾಡಬೇಕಾದರೆ ಖರ್ಚು ಇಲ್ಲದೆ ಆಗಲಾರದು.

ಶ್ರೀ ಎ. ಆರ್. ಪಂಚಗವಿ.—ಈಗಲಾದರೂ ಕೂಡ ಜಮೀನು ಸುಧಾರಣೆ ಮಾಡಬೇಕಾದರೆ ಖರ್ಚು ಇಲ್ಲದೆ ಆಗುವುದಿಲ್ಲ. ಆ ಮಾತು ಬೇರೆ. ಜಮೀನು ಸುಧಾರಣೆ ಮಾಡಲು ಹಣ ಖರ್ಚಾಗಿದೆ. ಅದಕ್ಕಾಗಿ ನಮಗೆ ವಿನಾಯಿತಿ ಸಿಕ್ಕಬೇಕೆನ್ನುವ ಮಾತು ತಪ್ಪಾಗುತ್ತದೆ.

ಕೋ-ಆಪರೇಟಿವ್ ಫಾರ್ಮಿಂಗ್ ಬಗ್ಗೆ ಅನೇಕರು ವಾದ ವಿವಾದ ಮಾಡಿದರು. ಇದನ್ನು ಒತ್ತಾಯದಿಂದ ಮಾಡಬಾರದು. ಇದನ್ನೇ ನಮ್ಮ ಪ್ರಧಾನ ಮಂತ್ರಿಗಳೂ ಹೇಳುತ್ತಾ ಬಂದಿದ್ದಾರೆ. ಕೋ-ಆಪರೇಟಿವ್ ಫಾರ್ಮಿಂಗ್ ಒತ್ತಾಯದಿಂದ ಮಾಡತಕ್ಕದ್ದಲ್ಲ, ಎಲ್ಲರೂ ತಮ್ಮ ಸ್ವಸಂತೋಷದಿಂದ ಮಾಡತಕ್ಕ ಕೆಲಸವೆಂದು ಹೇಳಿದ್ದಾರೆ. ಇಷ್ಟಾದರೂ ಕೂಡ ಇದರ ಬಗ್ಗೆ ಅನೇಕ ವಾದ ವಿವಾದಗಳು ಏಕೆ ನಡೆಯುತ್ತಿವೆ ಎನ್ನುವುದು ತಿಳಿಯದಮಾತು. ಅನೇಕ ಸಣ್ಣ ಹಿಡುವಳಿದಾರರು ಒತ್ತಟ್ಟಿಗೆ ಕೂಡಿಕೊಂಡು ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳತಕ್ಕ ಪ್ರಯತ್ನ ಮಾಡಿದರೆ ಅದರಿಂದ ಒಳ್ಳೆಯದಾಗುತ್ತದೆ. ಕೆಡಕು ಎಂದಿಗೂ ಆಗಲಾರದು. ಅಲ್ಪಮಟ್ಟಿಗೆ misappropriations, mis-management ಆಗುತ್ತದೆನ್ನುವುದು ಕೆಲವರ ಅಭಿಪ್ರಾಯ. ಯಾವುದೇ ಸೊಸೈಟಿಯಲ್ಲಿ ಇಂಥ ಕೆಲವು ತಪ್ಪುಗಳು ಆಗುತ್ತವೆ. ಕ್ರೆಡಿಟ್ ಸೊಸೈಟಿಗಳಲ್ಲಿ ಸಹ, ಎಷ್ಟೋ ಕಡೆ mis-management ವಗೈರೆ ಆಗಿದೆ. ಅದರ ಅರ್ಥ co-operative movement ಏನಿದೆ ಅದನ್ನು ಬದಲು ಮಾಡಬೇಕೆನ್ನುವಹಾಗೆ ಆಗುವುದಿಲ್ಲ. Co-operative movementನ್ನು ನಿಲ್ಲಿಸಬೇಕಾಗಿಲ್ಲ. ಅನೇಕ ಸೊಸೈಟಿಗಳು ಉತ್ತಮರೀತಿಯಿಂದ ನಡೆದುಬಂದಿವೆ. Co-operative movementನಲ್ಲಿ ಎಲ್ಲ ಕಡೆಗೂ ಸರ್ಕಾರ ಕೊಡತಕ್ಕ ಹಣ ಸಾಲದು, ಸೊಸೈಟಿಗಳು ಬೆಳೆಯಬೇಕು, ಊರ್ಜಿತಾವಸ್ಥೆಗೆ ಬರಬೇಕು, ಎಂದು ಮಾತನಾಡುತ್ತೇವೆ. ಫಾರ್ಮಿಂಗ್ ಪ್ರಶ್ನೆ ಬಂದಾಗ ಮಾತ್ರ ವಿರೋಧ ಮಾಡುತ್ತೇವೆ. ಇದು ಸರಿಯಾದದ್ದಲ್ಲವೆಂದು ನನ್ನ ಅಭಿಪ್ರಾಯ. Co-operative movement ಸಣ್ಣಸಣ್ಣ ಹಿಡುವಳಿದಾರರು ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ತಮ್ಮ ಸ್ಥಿತಿಯನ್ನು ಉತ್ತಮಮಾಡಿಕೊಳ್ಳುವುದಕ್ಕೆ ಅತ್ಯುತ್ತಮವಾದ ಸಾಧನವಾಗಿದೆ.

ಒಬ್ಬರಲ್ಲಿ ಈಗ ಮೂರು-ನಾಲ್ಕು ಎಕರೆಗಳಿರಬಹುದು. ಇನ್ನೊಬ್ಬರಲ್ಲಿ ಹತ್ತು ಎಕರೆಗಳಷ್ಟು ಜಮೀನಿರುತ್ತದೆ. ವ್ಯವಸಾಯ ಮಾಡಲು ಎತ್ತುಗಳು, ನೇಗಿಲು ಬೇಕಾಗುತ್ತದೆ. ಇವುಗಳನ್ನು ರೈತನಾದವನು ಕೊಳ್ಳುವಷ್ಟು ಸ್ಥಿತಿಯಲ್ಲೂ ಇರುವುದಿಲ್ಲ. ಇಂತಹ ರೈತರ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ

ನಾಲ್ಕು ಎಕರೆಗಳಷ್ಟು ಜಮೀನನ್ನು ಸಹಕಾರ ಸಂಘಗಳಿಗೆ ಸೇರಿಸಿದರೆ ಆಗ ಆತನ ಸ್ಥಿತಿ ಉತ್ತಮವಾಗುತ್ತದೆ. ಆ ಪರಿಸ್ಥಿತಿಗೆ ಬರಬೇಕಾದರೆ ಸಹಕಾರೀ ಒಕ್ಕಲುತನ ಬೆಳೆದಷ್ಟು ಬಹುಮಟ್ಟಿಗೆ ಸುಖವಾಗಬಹುದು ಎಂದು ಈಗ ಪ್ರಚಾರ ಮಾಡುತ್ತಿದ್ದಾರೆ. ಇದು ಇನ್ನೂ ಪ್ರಯೋಗಾವಸ್ಥೆಯಲ್ಲಿಯೇ ಇದೆ. ಇದನ್ನು ಕಾಯಿದೆಯೊಳಗೆ ಇರುವಂತೆ ವ್ಯವಸ್ಥೆ ಮಾಡುವುದು ಅತ್ಯಾವಶ್ಯಕ. ಇದನ್ನು ಒತ್ತಾಯವಾಗಿ ಹೇರುವುದೆಂದರೆ ಅಷ್ಟು ಸರಿಯಾಗಿರುವುದಿಲ್ಲ. ಆ ರೀತಿಯಾಗಿ ಪ್ರಚಾರ ಮಾಡುವುದು ಎಂದರೆ ತಪ್ಪಾದೀತು.

Small Holding ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಯಾವುದೇ ಊರಿನಲ್ಲಿ two-thirds of total land owners ಒಪ್ಪುವುದಾದರೆ ಒಂದು ಸೊಸೈಟಿಯನ್ನುಮಾಡಿ ಉಳಿದವರನ್ನು ಒತ್ತಾಯ ಮಾಡಬೇಕೆಂದಿದೆ. ಒತ್ತಾಯದಿಂದ ಸಹಕಾರ ಬೆಳೆಯತಕ್ಕದ್ದಲ್ಲ. ಒತ್ತಾಯದ ಸಹಕಾರ ಕೂಡದು. ಎಲ್ಲರೂ ಸ್ವಸಂತೋಷದಿಂದ ಮಾಡಿದರೇ ನೆಟ್ಟಗಿರುತ್ತದೆ.

[MR. SPEAKER in the Chair]

ಇವತ್ತಿನ ದಿವಸ ಭೂಮಿಯು ಬೇರೆಬೇರೆ ಇರುವುದನ್ನು ಸೊಸೈಟಿಗೆ ಸೇರಿಸುವಾಗ ಅಂತಹ ಕಡೆಗಳಲ್ಲಿ ಒಂದು compact block ಆಗಿ ಕೊಡುವುದು ಉತ್ತಮ. ಇದರಲ್ಲಿ ಒತ್ತಾಯವಿರಬಾರದು. ಆ ರೀತಿ ಒತ್ತಾಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇಡೀ ಊರಿಗೆ ಊರನ್ನೇ ಒಂದೇ ಸೊಸೈಟಿಯಾಗಿ ಮಾಡಬೇಕು ಎನ್ನುವುದು, ಅಷ್ಟೊಂದು ಪೂರ್ಣವಾಗಿ ಒತ್ತಾಯ ಮಾಡಬೇಕೆನ್ನುವುದು ಸರಿಯಲ್ಲ. ಬೇರೆಬೇರೆ ಕಡೆ ಎರಡು-ಮೂರು Farming societies ಇದ್ದರೆ, ತಮ್ಮಲ್ಲಿ ಯಾರಿಗೆ ಒಪ್ಪಿಗೆ ಇಲ್ಲವೋ ಅವರನ್ನು ಬಿಡಬಹುದು. ಸ್ವಸಂತೋಷದಿಂದ ಯಾರು ಬರುತ್ತಾರೋ ಅಲ್ಲಿ ಒಂದೆರಡು ಸೊಸೈಟಿಗಳನ್ನು ಮಾಡಬಹುದು. ಒತ್ತಾಯಮಾಡುವುದು ಎನ್ನುವುದು co-operative farming ಅಲ್ಲವೇ ಅಲ್ಲ. ಒತ್ತಾಯದಿಂದ ಮಾಡುತ್ತೇವೆ ಎನ್ನುವುದು co-operation ಅಲ್ಲವೇ ಅಲ್ಲ.

ನಾನು ಇನ್ನು ಕೆಲವು ಸೂಚನೆಗಳನ್ನು ಇಲ್ಲಿ ಹೇಳಬಯಸುತ್ತೇನೆ. ಈ tenancy ಆಡಳಿತದಲ್ಲಿ ಪ್ರತ್ಯಕ್ಷವಾಗಿ ಅಮಲು ಬಜಾವಣೆಮಾಡುವಾಗ ಅನೇಕ ತೊಂದರೆಗಳು ಬರುತ್ತವೆ. ಮುಖ್ಯವಾಗಿ ಇದನ್ನು ರೆವೆನ್ಯೂ ಇಲಾಖೆಯವರೇ ಅಮಲು ಮಾಡುವುದರಿಂದ ಅನೇಕ ಕಡೆ ಬಹಳ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪಲಿಕ್ಕಿಲ್ಲ. ಇದು ಅನುಭವದ ಮಾತು. ಅನೇಕ ಕಡೆ ಅನ್ಯಾಯಗಳು ಆಗುತ್ತಿವೆ ಎನ್ನುವ ಮಾತನ್ನು ಒಪ್ಪಲೇಬೇಕು. ಟೆನೆನ್ಸಿ ಆಡಳಿತದ ಅಮಲು ಬಜಾವಣೆ ಸರಿಯಾಗಿ ಆಗಬೇಕಾದರೆ ಇದನ್ನು ದಿವಾಣಿ ಕೋರ್ಟುಗಳಿಗೆ ಎಂದರೆ civil courtsಗೆ ಕೊಡುವುದು ಉತ್ತಮ. ಈ ಕಾರ್ಯವನ್ನು ಕೋರ್ಟುಗಳಿಗೆ ಒಪ್ಪಿಸಿದರೆ ಕೆಲಸಗಳು ಚೆನ್ನಾಗಿ ಆಗುತ್ತವೆ. ಯಾವ ಆಸೆ ಆಕಾಂಕ್ಷೆಗಳಿಗೂ ಗುರಿಯಾಗದಿರುವ ದಿವಾಣಿ ಕೋರ್ಟುಗಳಿಗೆ ಈ ಆಡಳಿತವನ್ನು ಒಪ್ಪಿಸಿದರೆ ಚೆನ್ನಾಗಿರುತ್ತದೆ. ಒಂದುವೇಳೆ ಈಗಿನ ಪರಿಸ್ಥಿತಿಯೇ ಉಳಿಯುವುದಾದರೆ ಇದರ ಬಗ್ಗೆ ಪ್ರತ್ಯೇಕ ವ್ಯವಸ್ಥೆ ಮಾಡಬೇಕಾಗುತ್ತದೆ.

ಎರಡನೆಯದು, ವಕೀಲರಿಗೆ ಇಲ್ಲಿ ಪ್ರವೇಶವಿಲ್ಲ ಎನ್ನುವುದು. ಕೇಸುಗಳನ್ನು ಚೆನ್ನಾಗಿ ವಿಚಾರಿಸತಕ್ಕ ನ್ಯಾಯಾಧೀಶರು ಉತ್ತಮರೀತಿಯಿಂದ ತೀರ್ಪನ್ನು ಕೊಡಬೇಕಾದರೆ ಅವರಿಗೆ ಸಹಾಯವನ್ನು ಮಾಡಲು ಯೋಗ್ಯರಾದ ವಕೀಲರುಗಳು ಇರಲೇ ಬೇಕಾಗುತ್ತದೆ. ವಕೀಲರುಗಳು ಇಂತಹ ಕೇಸುಗಳಲ್ಲಿ ಸಹಾಯಕವಾಗಿರಲು ಹಳ್ಳಿಗಾಡಿನಲ್ಲಿರುವ ಅಜ್ಞಾನಿಗಳಿಗೆ, ನಿರಕ್ಷರಸ್ಥರಿಗೆ ಅನುಕೂಲವಾಗುತ್ತದೆ. ಇದು ಇಂತಹ ಜನಗಳಿಂದ ಆಗದ ಕೆಲಸ ಎನ್ನುವುದನ್ನು ಅನೇಕ ಕಡೆ ನೋಡಿದ್ದೇನೆ. ನಾನು ಮುಂಬಯಿ ರಾಜ್ಯದಲ್ಲಿ ನೋಡಿ ಅನುಭವಿಸಿದ ಮಾತು. ಕೆಲವು ಕಡೆ ರಾಜೀನಾಮೆ ಕೊಡುವಾಗ ಊರುಗಳಿಗೆ ಒಂದೆರಡು ಸಾರಿ ಅಮಲ್ದಾರರು ಬಂದು ಅಲ್ಲಿಯೇ ಒಪ್ಪುವಂತೆ ಮಾಡುತ್ತಾರೆ. ನಮ್ಮ ಮುಂಬಯಿ ರಾಜ್ಯದಲ್ಲಿ ಈ ರೀತಿ ಎಷ್ಟೋ ಕಡೆ ಆದವು. ಕೆಲವು ಕಡೆ ಅಮಲ್ದಾರರೇ ಊರಿಗೆ ಕ್ಯಾಂಪು ಹಾಕಿಕೊಂಡು ಪ್ರತ್ಯಕ್ಷವಾಗಿ ರೈತನನ್ನು ಕರೆಸಿ ಜಮೀನು ಮಾಲೀಕನಿಗೆ ಜಮೀನನ್ನು ಕೊಡಿಸಿರುತ್ತಾರೆ, ಇಂತಹ ಪರಿಸ್ಥಿತಿ ಆಗಕೂಡದು. ವಕೀಲರಿಗೆ ಪೂರ್ಣವಾಗಿ ಅವಕಾಶವಿರಬೇಕು ಮತ್ತು ಇದು ಅತ್ಯಾವಶ್ಯಕ. ಇದರಿಂದ ದೀವಾಣಿ ಕೋರ್ಟುಗಳ ಕೆಲಸವೂ ನೆಟ್ಟಗಿರುತ್ತದೆ. ಈ ರೀತಿಯಾದ ವ್ಯವಸ್ಥೆಯನ್ನು ಮಾಡಿದರೆ ಉತ್ತಮವಾಗಿರುತ್ತದೆ ಎಂದು ನಾನು ಹೇಳುತ್ತೇನೆ. ವಕೀಲರುಗಳು ಹಕ್ಕುಗಳ ವಿಚಾರದಲ್ಲಿ ಪೂರ್ಣವಾಗಿ ತಿಳಿವಳಿಕೆ ಮಾಡಿಕೊಟ್ಟು ಸಹಾಯ ಮಾಡಲಿಕ್ಕಾಗಿಯೇ ಇರುವುದು ಎನ್ನುವುದನ್ನು ನಿಮ್ಮಗೆಳೆಯರು ಲಕ್ಷ್ಯದಲ್ಲಿಡಬೇಕು. ವ್ಯವಸಾಯಗಾರರಿಗೆ ಅನ್ಯಾಯಗಳಾಗುವುದನ್ನು ಬೆಳಕಿಗೆ ತರಲು ವಕೀಲರುಗಳು ಸಹಾಯಮಾಡುತ್ತಾರೆ. ಹಾಗೆ ತರದಿದ್ದರೆ ಅದರಿಂದ ಬಹಳ ಅನ್ಯಾಯಗಳಾಗುತ್ತವೆ ಎನ್ನುವ ಮಾತನ್ನು ತಾವು ತಿಳಿಯತಕ್ಕದ್ದು. ಅಗತ್ಯ ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

---

*The House adjourned at Thirty Minutes past Twelve of the Clock to meet again at One of the Clock on Monday, the 3rd August 1959.*

---